ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮಾಯಾಂಕ್, ಪಡಿಕ್ಕಲ್ ಭರ್ಜರಿ ಬ್ಯಾಟಿಂಗ್ ಅಜೇಯ ಕರ್ನಾಟಕ ಕ್ವಾರ್ಟರ್ ಫೈನಲ್‌ಗೆ

ಅಹಮದಾಬಾದ್‌ನಲ್ಲಿ ಮಂಗಳವಾರ ನಡೆದ ವಿಜಯ್ ಹಜಾರೆ ಕ್ರಿಕೆಟ್‌ನಲ್ಲಿ ನಾಯಕ ಮಾಯಾಂಕ್ ಅಗರ್ವಾಲ್ (100) ಮತ್ತು ದೇವದತ್ ಪಡಿಕ್ಕಲ್ (91) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಕರ್ನಾಟಕ ತಂಡವು ರಾಜಸ್ಥಾನವನ್ನು 150 ರನ್‌ಗಳಿಂದ ಮಣಿಸಿತು. ಟೂರ್ನಿಯಲ್ಲಿ ಆಡಿರುವ ಎಲ್ಲಾ ಆರು ಪಂದ್ಯಗಳನ್ನೂ ಗೆದ್ದಿರುವ ಕರ್ನಾಟಕವು ಈ ಮೂಲಕ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಸೊಂಪಾದ ಪುಟಗಳು

ಬಾಂಗ್ಲಾ ಹಿಂದೂ ಹತ್ಯೆಗಳ ಕರಿನೆರಳಲ್ಲಿ ಬಂಗಾಳ ಕದನ

ಜನಪಥ
ರಾಘವ ಶರ್ಮ ನಿಡ್ಲೆ 6

ತಾಳಮದ್ದಳೆಯಲ್ಲಿ ಆತ್ಮಾವಲೋಕನ ಅಗತ್ಯ

ತಪ್ಪಿದ ತಾಳ
ಡಾ.ರಾಮಕೃಷ್ಣ ಮುದ್ದೇಪಾಲ 7

ದಾರಿದೀಪೋಕ್ತಿ

ನಾಯಕತ್ವ ಎಂದರೆ ಕೇವಲ ಅಧಿಕಾರ ಚಲಾಯಿಸುವುದಲ್ಲ; ಅದು ಇತರರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರುವ ಜವಾಬ್ದಾರಿ. ಒಬ್ಬ ನಿಜವಾದ ನಾಯಕ ತನ್ನ ದಾರಿಯನ್ನು ತಾನೇ ಕಂಡುಕೊಳ್ಳುವುದಲ್ಲದೆ, ಇತರರಿಗೂ ದಾರಿ ತೋರಿಸುತ್ತಾನೆ.

ವಕ್ರತುಂಡೋಕ್ತಿ

ಜವಾಬ್ದಾರಿ ಜಾಸ್ತಿ, ಆದ್ರೆ ಬೆಲೆ ಮಾತ್ರ ಮನೆಯಲ್ಲಿರೋ ಹಳೆ ಸೈಕಲ್‌ಗಿಂತ ಕಮ್ಮಿ ಅಂದ್ರೆ, ನಿಮ್ಮನ್ನು ವಾಟ್ಸಪ್ ಗ್ರೂಪ್ ಅಡ್ಮಿನ್ ಎನ್ನಬಹುದು.

ಆಸ್ಪತ್ರೆಗೆ ದಾಖಲಾದ ಸೋನಿಯಾ ಗಾಂಧಿ

ದೆಹಲಿ: ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರನ್ನು ಇಲ್ಲಿನ ಗಂಗಾ ರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಆರೋಗ್ಯವಾಗಿದ್ದಾರೆ. ಅವರಿಗೆ ದೀರ್ಘಕಾಲದ ಕೆಮ್ಮಿನ ಸಮಸ್ಯೆ ಇದೆ. ಇದಕ್ಕಾಗಿ ನಿಯಮಿತ ತಪಾಸಣೆಗಾಗಿ ಬರುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೆಹಲಿಯ ವಾಯು ಮಾಲಿನ್ಯದಿಂದಾಗಿ ಸೋಮವಾರ ಸಂಜೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಕಾರ್ತಿಕ ದೀಪ ಬೆಳಗಲು ಹೈ ಅಸ್ತು

ಚೆನ್ನೈ: ಮಧುರೈನ ತಿರುಪರಂಕುಂದ್ರಂ ಬೆಟ್ಟದ ಮೇಲಿನ ಕಲ್ಲಿನ ಕಂಬದಲ್ಲಿ ಕಾರ್ತಿಗೈ ದೀಪ ಬೆಳಗಿಸಲು ಅವಕಾಶ ನೀಡಿದ್ದ ಏಕಸದಸ್ಯ ಪೀಠದ ತೀರ್ಪನ್ನು ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ಎತ್ತಿ ಹಿಡಿದಿದೆ. ಇದರೊಂದಿಗೆ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಸರ್ಕಾರಕ್ಕೆ ಮುಖಭಂಗವಾಗಿದೆ. ಮಧುರೈನ ಹಜರತ್ ಸುಲ್ತಾನ್ ಸಿಕಂದರ್ ಬಾದುಷ ಅವುಲಿಯಾ ದರ್ಗಾದ ಸಮೀಪದಲ್ಲಿರುವ ತಿರುಪರಂಕುಂದ್ರಂ ಬೆಟ್ಟಗಳಲ್ಲಿರುವ ಪ್ರಾಚೀನ ಕಲ್ಲಿನ ದೀಪ ಸ್ತಂಭದಲ್ಲಿ ಕಾರ್ತಿಗೈ ದೀಪವನ್ನು ಬೆಳಗಿಸಲು ಇದ್ದ ತೊಂದರೆಗಳು ನಿವಾರಣೆಯಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

'ಹೆಗ್ಗಣ ಮುದ್ದು' ಕನ್ನಡ ಸಿನಿಮಾ ಶೀಘ್ರದಲ್ಲಿ ತೆರೆಗೆ



24 ಗಂಟೆಗಳಲ್ಲಿ ಪತ್ರಕರ್ತ ಸೇರಿ ಇಬ್ಬರು ಹಿಂದೂಗಳ ಹತ್ಯೆ

ಬಾಂಗ್ಲಾ: ನಿಲ್ಲದ ಕ್ರೌರ್ಯ

ಢಾಕಾ: ನೆರೆಯ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ಪೈಶಾಚಿಕ ದಾಳಿ ಮುಂದುವರಿದಿದ್ದು ಕಳೆದ 24 ಗಂಟೆಗಳಲ್ಲಿ ಪತ್ರಿಕೆಯೊಂದರ ಸಂಪಾದಕ ಮತ್ತು ದಿನಸಿ ಅಂಗಡಿಯ ಮಾಲೀಕ ಸೇರಿದಂತೆ ಇಬ್ಬರು ಹಿಂದೂಗಳನ್ನು ಬರ್ಬರವಾಗಿ ಸಾಯಿಸಲಾಗಿದೆ. ಕಳೆದ 18 ದಿನಗಳಲ್ಲಿ ನಡೆದ ಹಿಂದೂ ಸಮುದಾಯದವರ ಆರನೇ ಹತ್ಯೆ ಪ್ರಕರಣ ಇದಾಗಿದೆ. ಇದೇ ವೇಳೆ 40 ವರ್ಷದ ಹಿಂದೂ ವಿಧವೆಯೊಬ್ಬರ ಮೇಲೆ ಇಬ್ಬರು ದುಷ್ಕರ್ಮಿಗಳು ಅತ್ಯಾಚಾರ ಎಸಗಿದ್ದು ಮಾತ್ರವಲ್ಲದೇ ಆಕೆಯ ಕೂದಲನ್ನು ಕತ್ತರಿಸಿ, ಮರಕ್ಕೆ ಕಟ್ಟಿಹಾಕಿ, ಹಣಕ್ಕೆ ಬೇಡಿಕೆ ಇಟ್ಟ ಘಟನೆಯೂ ನಡೆದಿದೆ.

ಸೋಮವಾರ ರಾತ್ರಿ 10 ಗಂಟೆ ಸುಮಾರಿಗೆ ರಾಜಧಾನಿ ಢಾಕಾಗೆ ಸಮೀಪದಲ್ಲಿರುವ ನರಸಿಂಗ್ಡಿ ಜಿಲ್ಲೆಯ ಪಲಾಶ್ ಉಪಜಿಲ್ಲಾದ ಚೋರ್ಸಿಂದೂರ್ ಬಜಾರ್‌ನಲ್ಲಿ ದಿನಸಿ ಅಂಗಡಿ ಮಾಲೀಕ ಶರತ್ ಚಕ್ರವರ್ತಿ ಮೋನಿ ಮೇಲೆ ದುಷ್ಕರ್ಮಿಗಳು ಹರಿತ ವಾದ ಆಯುಧದಿಂದ ಹಲ್ಲೆ ನಡೆಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಮೋನಿಯನ್ನು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ಸಾವನ್ನಪ್ಪಿದ್ದಾರೆ.

ಇದಕ್ಕೂ ಕೆಲವು ಗಂಟೆಗಳ ಮೊದಲು, ಸೋಮವಾರ ಸಂಜೆ 6 ಗಂಟೆ ಸುಮಾರಿಗೆ, ಜಶೋರ್ ಜಿಲ್ಲೆಯ ಮಣಿರಾಂಪುರ ಉಪಜಿಲ್ಲೆಯ ಕೊಪಾಲಿಯಾ ಬಜಾರ್‌ನಲ್ಲಿ 45 ವರ್ಷದ ರಾಣಾ ಪ್ರತಾಪ್ ಬೈರಾಗಿ ಅವರನ್ನು ಬರ್ಬರವಾಗಿ ಗುಂಡಿಕ್ಕಿ ಕೊಲ್ಲಲಾಗಿತ್ತು. ರಾಣಾ ಪ್ರತಾಪ್ ನರೈಲ್ ಜಿಲ್ಲೆಯಿಂದ ಪ್ರಕಟವಾಗುವ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿದ್ದು, ಐಸ್ ಕಾರ್ಖಾನೆಯನ್ನು ಹೊಂದಿದ್ದರು. ಸ್ಥಳೀಯ ನಿವಾಸಿಗಳು ನೀಡಿರುವ ಮಾಹಿತಿಗಳ ಪ್ರಕಾರ, ಕೆಲವು ಪುರುಷರು ಬೈಕ್‌ನಲ್ಲಿ ಬಂದು ಅವರನ್ನು ಕಾರ್ಖಾನೆಯಿಂದ ಹೊರಗೆಳೆದು, ಒಂದು ಗಲ್ಲಿಗೆ ಕರೆದೊಯ್ದು ಅವರ ತಲೆಗೆ ಹಲವು ಬಾರಿ ಗುಂಡು ಹಾರಿಸಿದ್ದರು. ಅಷ್ಟೇ ಅಲ್ಲದೆ ಕುತ್ತಿಗೆ ಕೊಯ್ದು ಪರಾರಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಪೊಲೀಸರು ದೇಹದಿಂದ ಏಳು ಖಾಲಿ ಕಾರ್ಟ್ರಿಡ್ಜ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ರಾಣಾ ಪ್ರತಾಪ್ ಅವರ ತಲೆಗೆ ಮೂರು ಗುಂಡುಗಳು ತಗುಲಿವೆ ಎಂದು ಹಿರಿಯ ಅಧಿಕಾರಿ ಯೊಬ್ಬರು ದೃಢಪಡಿಸಿದ್ದಾರೆ. ಯೂನಸ್ ನೇತೃತ್ವದ ಮಧ್ಯಂತರ ಸರಕಾರದ ಅವಧಿಯಲ್ಲಿ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ 2,900ಕ್ಕೂ ಹೆಚ್ಚು ಹಿಂಸಾಚಾರದ ಘಟನೆಗಳು ನಡೆದಿವೆ.

- ಅಲ್ಪಸಂಖ್ಯಾತರ ಮೇಲೆ ಮುಂದುವರಿದ ದಾಳಿ
- 18 ದಿನಗಳಲ್ಲಿ ಆರು ಮಂದಿ ಹಿಂದೂಗಳ ಕಗ್ಗೊಲೆ
- ಮಧ್ಯಂತರ ಸರಕಾರದಡಿ 2,900 ದಾಳಿ ದಾಖಲು
- ಭಾರತದ ಆಗ್ರಹಕ್ಕೆ ಕ್ಯಾರೇ ಎನ್ನದ ಬಾಂಗ್ಲಾದೇಶ

ವಿಧವೆ ಮೇಲೆ ಅತ್ಯಾಚಾರ

ಬಾಂಗ್ಲಾದ ಜೆನೈದಾ ಜಿಲ್ಲೆಯ ಕಲಿಗಂಜ್ ಉಪಜಿಲ್ಲೆಯಲ್ಲಿ 40 ವರ್ಷದ ಹಿಂದೂ ವಿಧವೆಯೊಬ್ಬರ ಮೇಲೆ ಇಬ್ಬರು ದುಷ್ಕರ್ಮಿಗಳು ಅತ್ಯಾಚಾರ ಎಸಗಿದ್ದು ಮಾತ್ರವಲ್ಲದೆ ಆಕೆಯ ಕೂದಲನ್ನು ಕತ್ತರಿಸಿ, ಮರಕ್ಕೆ ಕಟ್ಟಿಹಾಕಿ, ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಮಹಿಳೆ ಮೇಲೆ ಅತ್ಯಾಚಾರ ಮಾಡಿದ ಆರೋಪಿಗಳನ್ನು ಶಹೀನ್ ಮತ್ತು ಆತನ ಸಹೋದರ ಎಂದು ಗುರುತಿಸಲಾಗಿದೆ. ಅತ್ಯಾಚಾರಕ್ಕೊಳಗಾದ ಮಹಿಳೆ, ಎರಡೂವರೆ ವರ್ಷಗಳ ಹಿಂದೆ ಆರೋಪಿ ಶಹೀನ್ ಮತ್ತು ಆತನ ಸಹೋದರನಿಂದ ಎರಡು ಅಂತಸ್ತಿನ ಮನೆಯನ್ನು 20 ಲಕ್ಷ ಟಾಕಾಗೆ ಖರೀದಿಸಿದ್ದರು. ಮನೆ ಕೊಂಡು ಅದರಲ್ಲಿ ವಾಸ್ತವ್ಯವಿದ್ದ ವಿಧವೆಯನ್ನು ಮಾತನಾಡಿಸಲು ಆಗಾಗ ಬರುತ್ತಿದ್ದ ಆರೋಪಿ ಶಹೀನ್ ಆಕೆಗೆ ಲೈಂಗಿಕ ಕಿರುಕುಳ ನೀಡಲು ಪ್ರಾರಂಭಿಸಿದ್ದ. ಶನಿವಾರ ಸಂಜೆ ಆಕೆಯ ಗ್ರಾಮದ ಇಬ್ಬರು ಸಂಬಂಧಿಕರು ಭೇಟಿ ನೀಡಿದ್ದಾಗ, ಶಹೀನ್ ಮತ್ತು ಆತನ ಸಹೋದರ ಹಸನ್ ಮನೆಗೆ ನುಗ್ಗಿ ಅತ್ಯಾಚಾರ ಎಸಗಿದ್ದಾರೆ. ಬಳಿಕ ಅವರಿಂದ 50,000 ಟಾಕಾ (ಸುಮಾರು 37,000 ರೂ.) ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ.

ಮೊಬೈಲ್‌ನಲ್ಲಿ ಕೃತ್ಯದ ವಿಡಿಯೋ

ದುರುಳರು ಅತ್ಯಾಚಾರ ಎಸಗಿದ ಬಳಿಕ, ಕಿರುಚಾಡುತ್ತಿದ್ದ ಮಹಿಳೆಯನ್ನು ಮರಕ್ಕೆ ಕಟ್ಟಿ ಹಾಕಿ, ಆಕೆಯ ಕೂದಲನ್ನು ಕತ್ತರಿಸಿ, ಆ ದೃಶ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಚಿತ್ರಹಿಂಸೆಯಿಂದ ಬಸವಳಿದ ಮಹಿಳೆ ಅರೆ ಪ್ರಜ್ಞಾವಸ್ಥೆಗೆ ತಲುಪಿದ್ದು, ಸ್ಥಳೀಯರು ಆಕೆಯನ್ನು ರಕ್ಷಿಸಿ ಜೆನೈದಾ ಸರ್ದಾರ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

ವರಿಷ್ಠರು ನಿರ್ಧರಿಸಿದರೆ ಅವಧಿ ಪೂರ್ಣಗೊಳಿಸುವೆ ಎಂದ ಸಿಎಂ

ದಾಖಲೆ ಬರೆದ ಬೆನ್ನಲ್ಲೇ ಪೂರ್ಣಾವಧಿಯತ್ತ ಚಿತ್ತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕವನ್ನು ಸುದೀರ್ಘ ಕಾಲ ಆಳಿದ ದಾಖಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬರೆದ ಬೆನ್ನಲ್ಲೇ ಇದೀಗ ಮತ್ತೆ ಪೂರ್ಣಾವಧಿ ಮುಖ್ಯಮಂತ್ರಿ ಚರ್ಚೆ ಮುನ್ನೆಲೆಗೆ ಬಂದಿದೆ.

ಕಳೆದ ಕೆಲ ತಿಂಗಳಿನಿಂದ ಪಕ್ಷದ ಹೈಕಮಾಂಡ್ ಹೇಳುವ ತನಕ ನಾನೇ ಮುಖ್ಯಮಂತ್ರಿ ಎನ್ನುವ ವಿಶ್ವಾಸದ ಮಾತುಗಳನ್ನು ಆಡುತ್ತಿದ್ದ ಸಿದ್ದರಾಮಯ್ಯ ಅವರು, ಮಂಗಳವಾರ ಹೈಕಮಾಂಡ್ ತೀರ್ಮಾನಿಸಿದರೇ ನಾನೇ ಇಡೀ ಅವಧಿಗೆ ಮುಖ್ಯಮಂತ್ರಿ. ಈ ಅವಧಿಯನ್ನು ಪೂರ್ಣಗೊಳಿಸುವ ವಿಶ್ವಾಸವಿದೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಇದರ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಪೂರ್ಣಾವಧಿ ಮುಗಿಸಲು ಸಿದ್ದ ರಾಮಯ್ಯ ಅವರಿಗೆ ಆಲ್ ದಿ ಬೆಸ್ಟ್' ಎಂದಿದ್ದರೆ, ಡಿಕೆ ಬೆಂಬಲಿಗ ಶಾಸಕ ಮಾಗಡಿ ಬಾಲಕೃಷ್ಣ, 'ಸಿದ್ದರಾಮಯ್ಯ ಅವರು ಹೊಸ ನಾಯಕತ್ವಕ್ಕೆ ಅವಕಾಶ ಕೊಡಬೇಕು' ಎಂದಿರುವುದು ಇದೀಗ ಕುತೂಹಲಕ್ಕೆ ಕಾರಣವಾಗಿದೆ. → 4

ಆಲ್ ದಿ ಬೆಸ್ಟ್ ಎಂದ ಡಿಕೆ

ಸಿದ್ದರಾಮಯ್ಯ ಅವರು ದಾಖಲೆ ಬರೆದಿರುವುದಕ್ಕೆ ಪ್ರತಿಕ್ರಿಯಿಸಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅವರು ದೀರ್ಘಾವಧಿ ಆಡಳಿತ ಮಾಡಿದ ದಾಖಲೆ ಬರೆಯುತ್ತಿದ್ದಾರೆ. ಇದು ಬಹಳ ಸಂತೋಷದ ವಿಷಯ. ನಮಗೆ, ನಿಮಗೆ ಎಲ್ಲರಿಗೂ ಸಂತೋಷದ ವಿಚಾರ ಎಂದಿದ್ದಾರೆ.

ಸಿದ್ದರಾಮಯ್ಯ ಜನಪ್ರಿಯ ಮುಖ್ಯಮಂತ್ರಿ. ದೇವರಾಜ ಅರಸರ ದಾಖಲೆ ಮುರಿದಿದ್ದಾರೆ. ನಾನು ಸಿಎಂ ಅವರನ್ನು ಅಭಿನಂದಿಸುತ್ತೇನೆ. ಕಾಂಗ್ರೆಸ್‌ನಲ್ಲಿ ಮಾತ್ರ ಇಂತಹ ಅವಕಾಶ ಇದೆ.

-ಡಾ.ಜಿ. ಪರಮೇಶ್ವರ, ಗೃಹ ಸಚಿವ

ಇಷ್ಟು ವರ್ಷಗಳ ರಾಜಕಾರಣ ತೃಪ್ತಿ ತಂದಿದೆ. ಜನರ ಕೆಲಸ ಮಾಡುವುದು ಖುಷಿಯ ಸಂಗತಿ. ರಾಜಕಾರಣ ಎಂದರೆ ಬಡವರು, ದಲಿತರು, ಹಿಂದುಳಿದವರ ಕೆಲಸ ಮಾಡಿಕೊಡುವುದು. ಹೆಚ್ಚೆಂದರೆ ಶಾಸಕ ನಾಗಬೇಕೆಂದು ಅಂದು ಕೊಂಡಿದ್ದೆ. ಶಾಸಕನಾದೆ, ಮಂತ್ರಿ, ಉಪಮುಖ್ಯಮಂತ್ರಿ, ಪ್ರತಿ ಪಕ್ಷದ ನಾಯಕ ಹಾಗೂ ಮುಖ್ಯಮಂತ್ರಿಯೂ ಆದೆ. ಅವಕಾಶಗಳು ಸಿಕ್ಕಿದ್ದರಿಂದ ಇವೆಲ್ಲ ಆಗಲು ಸಾಧ್ಯವಾಯಿತು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಮಂಗಳವಾರ ಸಹಸ್ರ ಕಾಳುಗಳನ್ನು ಒಳಗೊಂಡ ಭಾವಚಿತ್ರವನ್ನು ನೀಡುವ ಮೂಲಕ ಅಭಿನಂದಿಸಿದರು.

ಬಳ್ಳಾರಿಗೆ ಡಿಸಿಎಂ ಭೇಟಿ: ಕೈ ಧುರೀಣರ ಜತೆ ಚರ್ಚೆ

ಬ್ಯಾನರ್ ತೆರವು ಮಾಡಿದ್ದೇ ಗಲಭೆಯ ಮೂಲ: ಡಿಕೆಶಿ

ಬಳ್ಳಾರಿ ಕೆಂಡ

ಬಳ್ಳಾರಿ: ವಾಲ್ಮೀಕಿ ಅವರ ಪ್ರತಿಮೆ ನಿರ್ಮಾಣ ಹಾಗೂ ಅದಕ್ಕೆ ಜನರಿಂದ ಸಿಗುತ್ತಿರುವ ಸ್ವಾಗತ ಸಹಿಸಲಾಗದೆ ಅಸೂಯೆಯಿಂದ ಬ್ಯಾನರ್ ತೆರವುಗೊಳಿಸಲು ಮುಂದಾಗಿದ್ದೇ ಬಳ್ಳಾರಿ ದುರ್ಘಟನೆಗೆ ಕಾರಣ ಎಂದು ಕಾಂಗ್ರೆಸ್ ಸತ್ಯಶೋಧನಾ ಸಮಿತಿ ನಮಗೆ ಮಾಹಿತಿ ನೀಡಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಬಳ್ಳಾರಿ ಗಲಭೆ ಹಾಗೂ ಪಕ್ಷದ ಕಾರ್ಯಕರ್ತನ ಸಾವು ಹಿನ್ನೆಲೆಯಲ್ಲಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಕಾಂಗ್ರೆಸ್ ಮುಖಂಡರ ಜತೆ ಬಳ್ಳಾರಿಯಲ್ಲಿ ಮಂಗಳವಾರ ಸಭೆ ನಡೆಸಿದರು. ಬಳಿಕ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು ಡಿ.24 ರಿಂದ ಡಿ.29 ರವರೆಗೆ ಜಿಲ್ಲೆಯ ಜನ ಬಹಳ ಸಂಭ್ರಮದಿಂದ ಪುತ್ಥಳಿ ಸ್ವಾಗತ ಕಾರ್ಯಕ್ರಮವನ್ನು ಹಬ್ಬದಂತೆ ಸಂಭ್ರಮಿಸಿದ್ದರು. ಜ.1 ರಂದು ಸಾರ್ವಜನಿಕ ಸ್ಥಳದಲ್ಲಿ ಬ್ಯಾನರ್ ಕಟ್ಟಿದ್ದಾರೆ. ಈ ವಿಚಾರದಲ್ಲಿ ಜನಾರ್ದನ ರೆಡ್ಡಿ ಅಥವಾ ಶ್ರೀರಾಮುಲು ಅವರಿಗೆ ಅಸಮಾಧಾನವಿದ್ದಿದ್ದರೆ, ಅಧಿಕಾರಿಗಳಿಗೆ ಹೇಳಿದ್ದರೆ ತೆಗೆಯುತ್ತಿದ್ದರು ಎಂದರು. ಈ ಹಿಂದೆ ನಡೆದ ಘಟನೆಗಳಿಂದ ಬಳ್ಳಾರಿ ಜಿಲ್ಲೆಗೆ ಆಗಿದ್ದ ಅಪಮಾನ, ತೊಂದರೆ, ಉದ್ಯೋಗ ನಷ್ಟ, ಆರ್ಥಿಕ ನಷ್ಟದಿಂದ ಹೊರಬಂದು ಕಳೆದ ಹತ್ತು ವರ್ಷಗಳಲ್ಲಿ ಚೇತರಿಸಿತ್ತು. ಈಗ ವಾಲ್ಮೀಕಿ ಪುತ್ಥಳಿ ಅನಾವರಣ ಮಾಡುವ ವಿಚಾರದಲ್ಲಿ ಇಂತಹ ಘಟನೆ ನಡೆದಿದೆ. → 4

ಎರಡನೇ ಬಾರಿ ಪೋಸ್ಟ್‌ಮಾರ್ಟಂ ಆಗಿಲ್ಲ: ಪರಂ, ಡಿಕೆಶಿ ಸ್ಪಷ್ಟನೆ

ಬೆಂಗಳೂರು: ಬಳ್ಳಾರಿ ಗಲಭೆಯಲ್ಲಿ ಮೃತಪಟ್ಟ ರಾಜಶೇಖರ್‌ಗೆ ಎರಡನೇ ಬಾರಿಗೆ ಪೋಸ್ಟ್ ಮಾರ್ಟಂ ಆಗಿರುವ ಸುದ್ದಿಗಳು ಹರಿದಾಡುತ್ತಿರುವ ನಡುವೆಯೇ, ಗೃಹ ಸಚಿವ ಡಾ.ಜಿ. ಪರಮೇಶ್ವರ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ರೀತಿಯ ಯಾವುದೇ ಘಟನೆ ನಡೆದಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ಸೋಮವಾರ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜಶೇಖರ್ ಮೃತದೇಹವನ್ನು ಎರಡನೇ ಬಾರಿಗೆ ಮರಣೋತ್ತರ ಪರೀಕ್ಷೆ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಮರಣೋತ್ತರ ಪರೀಕ್ಷೆ ನಡೆದಿರುವ ಬಗ್ಗೆ ಮಾಧ್ಯಮಗಳಲ್ಲೂ ಚರ್ಚೆ ನಡೆದಿತ್ತು. ಆದರೆ ಎರಡನೇ ಬಾರಿಗೆ ಮರಣೋತ್ತರ ಪರೀಕ್ಷೆಯೇ ನಡೆದಿಲ್ಲ. ಯಾವುದನ್ನೂ ತಿಳಿಯದೇ ಮಾತನಾಡಬಾರದು ಎಂದು ಪರಂ ಮತ್ತು ಡಿಕೆಶಿ ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ರೌಡಿ ಬಿಕ್ಲು ಶಿವು ಕೊಲೆ ಪ್ರಕರಣ

ಬೈರತಿ ಜಾಮೀನು ರದ್ದು ಕೋರಿ ಸರಕಾರ ಅಪೀಲು



ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಮಾಜಿ ಸಚಿವ ಬೈರತಿ ಬಸವರಾಜು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಾಗಿದ್ದು, ಅವರಿಗೆ ಈಗಾಗಲೇ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನನ್ನು ರದ್ದು ಮಾಡುವಂತೆ ಕೋರಿ ರಾಜ್ಯ ಸರಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಂಧನ ಭೀತಿಯಲ್ಲಿದ್ದ ಬೈರತಿ ಬಸವರಾಜು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ರಜಾ ಕಾಲದ ನ್ಯಾಯಪೀಠ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದ ಮಧ್ಯಂತರ ಆದೇಶ ರದ್ದುಪಡಿಸಬೇಕು ಎಂದು ಕೋರಿ ಸರಕಾರ ಸಲ್ಲಿಸಿದ್ದ ಮನವಿಯನ್ನು ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ಪೀಠ ವಿಚಾರಣೆ ನಡೆಸಿದೆ.

ಕೇಂದ್ರ ಮಾಜಿ ಸಚಿವ ಸುರೇಶ್ ಕಲ್ಮಾಡಿ ನಿಧನ



ಪುಣೆ: ಭಾರತೀಯ ಒಲಿಂಪಿಕ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ಮತ್ತು ಕೇಂದ್ರ ಮಾಜಿ ಸಚಿವ, ಉಡುಪಿ ಮೂಲದ ಸುರೇಶ್ ಕಲ್ಮಾಡಿ (81) ಮಂಗಳವಾರ ಮುಂಜಾನೆ ಆಸ್ಪತ್ರೆಯಲ್ಲಿ ನಿಧನರಾದರು. ಎರಡು ದಶಕಗಳಿಗೂ ಹೆಚ್ಚು ಕಾಲ ಭಾರತೀಯ ಕ್ರೀಡಾ ಆಡಳಿತದಲ್ಲಿ ಅತ್ಯುನ್ನತ ಸ್ಥಾನದಲ್ಲಿದ್ದ ಕಲ್ಮಾಡಿ 1996ರಿಂದ 2011ರವರೆಗೆ ಐಒಎ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಧರ್ಮಸ್ಥಳ: ಹೊಸ ತನಿಖೆ ಕೋರಿ ಸೌಜನ್ಯ ತಾಯಿ ಸುಪ್ರೀಂಗೆ ಅರ್ಜಿ

ದೆಹಲಿ/ಬೆಂಗಳೂರು: ಧರ್ಮಸ್ಥಳದ ಪೊಲೀಸ್ ಠಾಣೆಯಲ್ಲಿ ಕಳೆದ ಕೆಲವು ವರ್ಷಗಳಿಂದ ದಾಖಲಾಗಿರುವ 74 ಮಹಿಳೆಯರ ನಾಪತ್ತೆ ಪ್ರಕರಣಗಳು ಹಾಗೂ ಅನಾಥ ಶವಗಳ ಪ್ರಕರಣಗಳಿಗೆ ಸಂಬಂಧಿಸಿ ಹೊಸದಾಗಿ ತನಿಖೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಯನ್ನು ಸುಪ್ರೀಂಕೋರ್ಟ್ ಮಾ. 23ಕ್ಕೆ ಮುಂದೂಡಿದೆ.

ಧರ್ಮಸ್ಥಳ ದಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾದ ಸೌಜನ್ಯ ತಾಯಿ ಕುಸುಮವತಿ ಗೌಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಸಂಜಯ್ ಕುಮಾರ್ ನೇತೃತ್ವದ ದ್ವಿಸದಸ್ಯ ಪೀಠ ವಿಚಾರಣೆಗೆ ಕೈಗೆತ್ತಿಕೊಂಡಿದೆ. ವಿಚಾರಣೆ ಸಮಯದಲ್ಲಿ ವಕೀಲರ ಅನುಪಸ್ಥಿತಿ ಹಿನ್ನೆಲೆಯಲ್ಲಿ ಪ್ರಕರಣ ವನ್ನು ಮುಂದೂಡಲಾಯಿತು. ಸತತವಾಗಿ ಎರಡು ವರ್ಷಗಳವರೆಗೆ ನೂರಾರು ಅನಾಥ ಶವಗಳನ್ನು ಹೂತುಹಾಕಿದ್ದಾಗಿ ಈ ಹಿಂದೆ ಹೇಳಿಕೆ ನೀಡಿದ್ದ 'ಮಾಸ್ಕ್ ಮ್ಯಾನ್' ಚಿನ್ನಯ್ಯ, ತನ್ನ ಹೇಳಿಕೆಯಿಂದ ಹಿಂದೆ ಸರಿದಿದ್ದೇಕೆ ಎಂಬುದರ ಬಗ್ಗೆಯೂ ತನಿಖೆಯಾಗಬೇಕು ಎಂದು ಕುಸುಮ ತಮ್ಮ ಮೇಲ್ಮನವಿ ಅರ್ಜಿಯಲ್ಲಿ ಆಗ್ರಹಿಸಿದ್ದಾರೆ.

ಧರ್ಮಸ್ಥಳದ ನೇತ್ರಾವತಿ ನದಿ ದಡದಲ್ಲಿ 74 ಅನಾಥ ಶವಗಳನ್ನು ಹೂತು ಹಾಕಿರುವುದಾಗಿ ಆರೋಪಗಳು ಕೇಳಿಬಂದಿವೆ. ಆ ಎಲ್ಲಾ ಪ್ರಕರಣಗಳಲ್ಲೂ ಪ್ರತ್ಯೇಕ ಎಫ್ಐಆರ್ ಆಗಿ ತನಿಖೆಯಾಗಬೇಕು. ಧರ್ಮಸ್ಥಳದಲ್ಲಿ ಸಿಕ್ಕ ಅನಾಥ ಶವಗಳು, ನಾಪತ್ತೆ ಪ್ರಕರಣಗಳಿಗೆ ಇದರಿಂದ ಸೂಕ್ತ ನ್ಯಾಯ ಸಿಗುವಂತಾಗಬೇಕು ಎಂದು ಅವರು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಅರ್ಜಿಯಲ್ಲಿ ದೋಷ, ಮರುಸಲ್ಲಿಕೆ: ಕುಸುಮಾವತಿ ಗೌಡ ಅವರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯಲ್ಲಿ ಕೆಲವು ತಾಂತ್ರಿಕ ದೋಷಗಳಿದ್ದ ಹಿನ್ನೆಲೆಯಲ್ಲಿ ದೋಷಗಳನ್ನು ಸರಿಪಡಿಸಿ ಮರು ಅರ್ಜಿ ಸಲ್ಲಿಸಲು ಅರ್ಜಿದಾರರ ಪರ ವಕೀಲರಿಗೆ ಸುಪ್ರೀಂಕೋರ್ಟ್ 90 ದಿನಗಳ ಕಾಲಾವಕಾಶ ನೀಡಿತ್ತು. ಇದರಂತೆ ಕುಸುಮಾವತಿ ಗೌಡ ಅವರ ಪರ ವಕೀಲರು 2025ರ ನವೆಂಬರ್ 19ರಂದು ಅರ್ಜಿಯನ್ನು ಮರುಸಲ್ಲಿಸಿದ್ದರು. ಇದೀಗ ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಂಡಿದೆ. ಸಿಬಿಐ, ಕರ್ನಾಟಕ ರಾಜ್ಯ ಸರಕಾರ, ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಮತ್ತು ಪ್ರಕರಣದ ಆರೋಪಿಯಾಗಿದ್ದ ಸಂತೋಷ್ ರಾವ್‌ರನ್ನು ಪ್ರತಿವಾದಿಗಳನ್ನಾಗಿ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಸಂತೋಷ್ ರಾವ್ ಕೂಡ 2025ರ ಸೆಪ್ಟೆಂಬರ್ 2ರಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಈ ಅರ್ಜಿಯಲ್ಲಿಯೂ ದೋಷಗಳಿರುವುದರಿಂದ ಮರು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು.

ಹೈ ಆದೇಶ ಪ್ರಶ್ನಿಸಿ ಸುಪ್ರೀಂಗೆ ಮೊರೆ

ಸೌಜನ್ಯ ಪ್ರಕರಣದಲ್ಲಿ ಆರೋಪಿಯಾಗಿದ್ದ ಸಂತೋಷ್ ರಾವ್ ಅವರನ್ನು ಸೆಷನ್ಸ್ ನ್ಯಾಯಾಲಯ ಹಾಗೂ ನಂತರ ಸಿಬಿಐ ನ್ಯಾಯಾಲಯವು ಆರೋಪ ಸಾಬೀತಾಗದ ಹಿನ್ನೆಲೆಯಲ್ಲಿ ಖುಲಾಸೆಗೊಳಿಸಿತ್ತು. ಈ ತೀರ್ಪನ್ನು ಪ್ರಶ್ನಿಸಿ ಹಾಗೂ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಸೌಜನ್ಯ ತಾಯಿ ಕುಸುಮಾವತಿ ಗೌಡ ಅವರು ಮೊದಲು ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಹೈಕೋರ್ಟ್ ದ್ವಿಸದಸ್ಯ ಪೀಠವು ಅವರ ಅರ್ಜಿಯನ್ನು ವಜಾಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ, ವಿಶೇಷ ಅನುಮತಿ ಮೇಲ್ಮನವಿ ಅರ್ಜಿ ಸಲ್ಲಿಸುವ ಮೂಲಕ ಕುಸುಮಾವತಿ ಗೌಡ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ನ್ಯಾಯಾಲಯಗಳ ಕಲಾಪ, ಸರಕಾರಿ ಕಚೇರಿಗಳ ಕೆಲಸ ಅಸ್ತವ್ಯಸ್ತ | ಬೆದರಿಕೆ ಕರೆ ನಿರಂತರ

ರಾಜ್ಯದ 7 ಜಿಲ್ಲೆಗಳಿಗೆ ಹುಸಿ ಬಾಂಬ್ ಕಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಒಂದೇ ದಿನ ನ್ಯಾಯಾಲಯಗಳು ಮತ್ತು ಪ್ರಮುಖ ಸರಕಾರಿ ಕಚೇರಿಗಳನ್ನು ಗುರಿಯಾಗಿಟ್ಟುಕೊಂಡು ಹಲವು ಕಡೆ ಹುಸಿ ಬಾಂಬ್ ಇ-ಮೇಲ್ ಬಂದಿದ್ದು, ಆತಂಕ ಸೃಷ್ಟಿಸಿದೆ. ಬೆಂಗಳೂರು, ಮೈಸೂರು, ಹಾಸನ, ಬಾಗಲಕೋಟೆ, ಗದಗ, ಧಾರವಾಡ ಸೇರಿ 7 ಜಿಲ್ಲೆಗಳಿಗೆ ಬಾಂಬ್ ಬೆದರಿಕೆ ಬಂದಿದೆ. ಹಲವೆಡೆ ನ್ಯಾಯಾಲಯದ ಕಲಾಪ ಅಸ್ತವ್ಯಸ್ತವಾಗಿದೆ.

ಧಾರವಾಡ ಹೈಕೋರ್ಟ್ ಪೀಠ, ಮೈಸೂರಿನ ಜಿಲ್ಲಾ ನ್ಯಾಯಾಲಯ ಮತ್ತು ಸೆಷನ್ಸ್ ನ್ಯಾಯಾಲಯ, ಬಾಗಲಕೋಟೆ ಜಿಲ್ಲಾ ನ್ಯಾಯಾಲಯ ಹಾಗೂ ಬೆಂಗಳೂರಿನ ಲಾಲ್‌ಬಾಗ್ ರಸ್ತೆ ಮತ್ತು ಕೋರಮಂಗಲದಲ್ಲಿರುವ ಪಾಸ್‌ಪೋರ್ಟ್ ಸೇವಾ ಕೇಂದ್ರಕ್ಕೆ ಇ-ಮೇಲ್ ಮೂಲಕ ಏಕಕಾಲಕ್ಕೆ ಬಾಂಬ್ ಬೆದರಿಕೆ ಸಂದೇಶ ಕಳುಹಿಸಲಾಗಿದೆ.

ಮೈಸೂರಿನ ಜಿಲ್ಲಾ ನ್ಯಾಯಾಲಯಕ್ಕೆ ಬಂದ ಇ-ಮೇಲ್‌ನಲ್ಲಿ ಮಧ್ಯಾಹ್ನ 1.55ಕ್ಕೆ ನ್ಯಾಯಾಲಯದ ಆವರಣದಲ್ಲಿ ಮೂರು ಆರ್‌ಡಿಎಕ್ಸ್ ಬಾಂಬ್‌ಗಳು ಸ್ಫೋಟಗೊಳ್ಳಲಿವೆ. ಕೂಡಲೇ ನ್ಯಾಯಾಧೀಶರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಎಂದು ಎಚ್ಚರಿಕೆ ನೀಡಲಾಗಿತ್ತು. ಇದರಿಂದ ಕಲಾಪ ಸ್ಥಗಿತಗೊಳಿಸಿ ಬಾಂಬ್ ಶೋಧ ಕಾರ್ಯ ಕೈಗೊಳ್ಳಲಾಯಿತು. ಬಳಿಕ ಇದು ಹುಸಿ ಕರೆ ಎಂದು ದೃಢಪಡಿಸಿಕೊಳ್ಳಲಾಯಿತು. ಬಾಗಲಕೋಟೆ ಜಿಲ್ಲಾ ನ್ಯಾಯಾಲಯಕ್ಕೂ ಬೆದರಿಕೆ ಇ-ಮೇಲ್ ಬಂದಿದ್ದು, ಊಟದ ಬಿಡುವಿನ ವೇಳೆಯಲ್ಲಿ ಸ್ಫೋಟ ನಡೆಸುವುದಾಗಿ ಕಿಡಿಗೇಡಿಗಳು ಸಂದೇಶ ಕಳುಹಿಸಿದ್ದರು. ವಿಷಯ ತಿಳಿಯುತ್ತಿದ್ದಂತೆ ನ್ಯಾಯಾಲಯದ ಸಿಬ್ಬಂದಿ, ವಕೀಲರು ಹಾಗೂ ಕಕ್ಷಿದಾರರು ಭಯಭೀತರಾಗಿ ಕಟ್ಟಡದಿಂದ ಹೊರಬಂದರು.

ಬಾಗಲಕೋಟೆಯ ಜಿಲ್ಲಾ ನ್ಯಾಯಾಲಯದಲ್ಲಿ ಬಾಂಬ್ ನಿಷ್ಕ್ರಿಯ ತಂಡ ಕಾರ್ಯಾಚರಣೆ ನಡೆಸುತ್ತಿರುವುದು.

ಧಾರವಾಡ ಹೈಕೋರ್ಟ್ ಪೀಠಕ್ಕೂ ಬೆದರಿಕೆ: ಧಾರವಾಡ ತಾಲೂಕಿನ ಬೇಲೂರು ಬಳಿಯ ಹೈಕೋರ್ಟ್‌ಗೂ ಇ-ಮೇಲ್ ಮೂಲಕ ಆರ್‌ಡಿಎಕ್ಸ್ ಬಾಂಬ್ ಹಾಕುವುದಾಗಿ ಬೆದರಿಕೆ ಬಂದಿದೆ. ಕೋರ್ಟ್‌ನ ಅಡಿಷನಲ್ ರಿಜಿಸ್ಟ್ರಾರ್ ಜನರಲ್‌ಗೆ ಬಂದ ಇಮೇಲ್‌ನಿಂದ ಆತಂಕ ಸೃಷ್ಟಿಯಾಯಿತು. ಪೊಲೀಸರು ಎಲ್ಲರನ್ನೂ ಹೊರಗೆ ಕಳುಹಿಸಿ ತಪಾಸಣೆ ನಡೆಸಿದರು. ಎಸ್ಪಿ ಗುಂಜನ್ ಆರ್ಯ ನೇತೃತ್ವದಲ್ಲಿ ಬಾಂಬ್ ನಿಷ್ಕ್ರಿಯ ದಳ ತಪಾಸಣೆ ನಡೆಸಿದ ಬಳಿಕ ಇದು ಹುಸಿ ಕರೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲಾಯಿತು.

ಬೆದರಿಕೆ ಇಮೇಲ್ ತಮಿಳುನಾಡು ಮೂಲದಿಂದ ಬಂದಿರುವ ಶಂಕೆ ವ್ಯಕ್ತವಾಗಿದೆ. ಇದೇ ವೇಳೆ ಗದಗ ಜಿಲ್ಲಾ ನ್ಯಾಯಾಲಯಕ್ಕೂ ಔಟ್‌ಲುಕ್ ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದೆ. ಗದಗ ಎಸ್ಪಿ ರೋಹನ್ ಜಗದೀಶ್ ಸ್ಥಳಕ್ಕೆ ಭೇಟಿ ನೀಡಿ, ಶ್ವಾನದಳ ಹಾಗೂ ಬಾಂಬ್ ಪತ್ತೆದಳದಿಂದ ಇಂಚಿಂಚು ಶೋಧ ಕಾರ್ಯ ನಡೆಯಿತು.

ಹೈಕೋರ್ಟ್ ಪ್ರದೇಶದ ಎಲ್ಲ ಕಡೆ ತಪಾಸಣೆ ನಡೆಸಲಾಗಿದ್ದು ಯಾವುದೇ ಶಂಕಾಸ್ಪದ ವಸ್ತುಗಳು ಪತ್ತೆಯಾಗಿಲ್ಲ. ಕಳೆದ ಕೆಲವು ತಿಂಗಳಿಂದ ಕರ್ನಾಟಕದ ವಿವಿಧ ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಹೈಕೋರ್ಟ್‌ಗೆ ಇಂತಹ ಹುಸಿ ಬೆದರಿಕೆಗಳು ಬರುತ್ತಲೇ ಇವೆ. ಇ-ಮೇಲ್‌ಗಳ ಮೂಲವನ್ನು ಪತ್ತೆ ಹಚ್ಚಲು ಸೈಬರ್ ಕ್ರೈಂ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಪಾಸ್‌ಪೋರ್ಟ್ ಕಚೇರಿಗೂ ಕರೆ

ಬೆಂಗಳೂರಿನ ಲಾಲ್‌ಬಾಗ್ ರಸ್ತೆ ಮತ್ತು ಕೋರಮಂಗಲದ ಪಾಸ್‌ಪೋರ್ಟ್ ಕಚೇರಿಗೂ ಇಂತಹದ್ದೇ ಇ-ಮೇಲ್ ಲಭ್ಯವಾಗಿದ್ದು, ವಿಲ್ಸನ್ ಗಾರ್ಡನ್ ಮತ್ತು ಎಸ್.ಆರ್. ನಗರ ಪೊಲೀಸರು ತಕ್ಷಣವೇ ಸ್ಥಳಕ್ಕೆ ಧಾವಿಸಿದರು. ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದ ಸಿಬ್ಬಂದಿ ಎಲ್ಲಾ ಪಾಸ್‌ಪೋರ್ಟ್ ಕಚೇರಿ ಇರುವ ಸ್ಥಳಗಳಲ್ಲಿ ತೀವ್ರ ಶೋಧ ಕಾರ್ಯ ನಡೆಸಿದರು. ಗಂಟೆಗಳ ಕಾಲ ನಡೆದ ತಪಾಸಣೆಯ ನಂತರ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗದ ಕಾರಣ ಇವೆಲ್ಲವೂ 'ಹುಸಿ ಬೆದರಿಕೆ' ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಈ ಕರೆಗಳ ಕಾರಣದಿಂದ ಪಾಸ್‌ಪೋರ್ಟ್ ಸೇವೆ ಪಡೆಯಲು ಬಂದ ಸಂದರ್ಶಕರು ಹಲವು ಗಂಟೆಗಳ ಕಾಲ ಕಾಯಬೇಕಾಯಿತು.

ಸಮಾಚಾರ ಸಣ್ಣದಲ್ಲ

ಮಹನೀಯರನ್ನು ಜಾತಿಗೆ ಸೀಮಿತಗೊಳಿಸಬೇಡಿ

ಕೆ.ಆರ್.ನಗರ: ಯಾವುದೇ ಮಹಾತ್ಮರು ಯಾವುದೇ ಒಂದು ಜಾತಿಗೆ ಸೀಮಿತವಲ್ಲ ಪ್ರತಿಯೊಬ್ಬರು ಗೌರವಿಸಬೇಕು. ಅವರ ಪ್ರತಿಮೆಗಳನ್ನು ಸಾರ್ವಜನಿಕ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಅಳವಡಿಸಿ ಜನ ಸಾಮಾನ್ಯರಿಗೆ ತೊಂದರೆ ನೀಡುವುದು ಸರಿಯಲ್ಲಾ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.ಪಟ್ಟಣದ ಪಿಎಲ್ ಡಿ ಬ್ಯಾಂಕ್ ನಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕು ಒಕ್ಕಲಿಗ ನೌಕರರ ಸ್ನೇಹ ಬಳಗದ ವತಿಯಿಂದ ಭಾನುವಾರ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಅವರ ಜಯಂತಿ ಆಚರಣೆ, ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮವನ್ನು ಕುರಿತು ಮಾತನಾಡಿದ ಅವರು ನನ್ನ 15 ವರ್ಷದ ಅಧಿಕಾರ ಅವಧಿಯಲ್ಲಿ ಎಲ್ಲಾ ಜಾತಿ ಧರ್ಮದವರು ಒಂದೇ ಎಂಬ ಭಾವನೆಯಿಂದ ಕೆಂಪೇಗೌಡರ, ಕುವೆಂಪುರವರ ಹಾಗೂ ಎಚ್.ಡಿ.ದೇವೆಗೌಡರ ಪ್ರತಿಮೆಗಳನ್ನು ಮಾಡಿಸಲಿಲ್ಲ. ಆದರೆ ಈಗ ಎಲ್ಲೆಂದರಲ್ಲಿ ಅನಧಿಕೃತವಾಗಿ ಪ್ರತಿಮೆಗಳು ತಲೆ ಎತ್ತುತ್ತಿವೆ ಎಂದು ಬೇಸರ ವ್ಯಕ್ತ ಪಡಿಸಿದರು.ಇಡೀ ದೇಶವನ್ನು ಹೊಯ್ಸಳ ಬಿಟ್ಟರೆ ನಮ್ಮ ಮಾಜಿ ಪ್ರಧಾನಿ ಎಚ್ ದೇವೇಗೌಡರು ಮಾತ್ರ ಕರ್ನಾಟಕದವರಾಗಿ ಆಳ್ವಿಕೆ ಮಾಡಿದ್ದು ಎಂದರು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಅಂತರಾಷ್ಟ್ರೀಯ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ, ಲೇಖಕಿ ಹಾಗೂ ಹುಣಸೂರು ತಾಲೂಕಿನ ಬಿಳಿಗೆರೆಯ ಅನ್ವೇಷಣ ಪದವಿಪೂರ್ವ ಕಾಲೇಜಿನ ಉಪ ಪ್ರಾಂಶುಪಾಲೆ ಆಶಾ ನಂದೀಶ್ ಮಾತನಾಡಿದರು.

ಡಿಸಿಯಾಗಿ ಶ್ರೀರೂಪ ಅಧಿಕಾರ ಸ್ವೀಕಾರ

ಚಾಮರಾಜನಗರ: ಚಾಮರಾಜನಗರ ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಶ್ರೀರೂಪ ಅವರು ಇಂದು ಅಧಿಕಾರ ಸ್ವೀಕರಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ವರ್ಗಾವಣೆಯಾಗಿರುವ ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರಿಂದ ಅಧಿಕಾರಿ ಸ್ವೀಕರಿಸಿದರು. ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಶಿಲ್ಪಾ ನಾಗ್ ಅವರು ಹೂಗುಚ್ಛ ನೀಡಿ ಶುಭ ಕೋರಿದರು. ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರು ನಿರ್ಗಮಿತ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರಿಗೆ ಹೂಗುಚ್ಛ ನೀಡಿ ಹಾರೈಸಿದರು. ಅಧಿಕಾರ ಸ್ವೀಕರಿಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಗಡಿಭಾಗದ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಸ್ತುತ ಮಾನವ ಪ್ರಾಣಿ ಸಂಘರ್ಷದಂತಹ ಪ್ರಕರಣಗಳು ಇವೆ. ಆದಿವಾಸಿಗಳಿಗೆ ಸಂಬಂಧಿಸಿದ ಸಮಸ್ಯೆಗಳು ಇದೆ. ಈ ಎಲ್ಲವನ್ನೂ ಪರಿಹರಿಸುವುದು ಆದ್ಯತೆಯಾಗಿದೆ.ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಬೇಕಿದೆ ಎಂದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ತಹಶೀಲ್ದಾರ್‌ಗಿರಿಜಾ, ವಿವಿಧ ಇಲಾಖೆಗಳ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಇದಕ್ಕೂ ಮೊದಲು ನೂತನ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ತಹಶೀಲ್ದಾರ್‌ಗಿರಿಜಾ ಅವರು ಜಿಲ್ಲೆಗೆ ಬರಮಾಡಿಕೊಂಡರು. ಜಿಲ್ಲಾಧಿಕಾರಿಯವರು ನಗರದ ಚಾಮರಾಜೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಶಾಸಕರ ವಿರುದ್ಧದ ಆರೋಪ ಸತ್ಯಕ್ಕೆ ದೂರ

ಮದ್ದೂರು: ತಾಲೂಕಿನ ಗೆಜ್ಜಲಗೆರೆ ಗ್ರಾಮ ಪಂಚಾಯಿತಿಯನ್ನು ನಗರಸಭೆಯಿಂದ ಕೈಬಿಡುವಂತೆ ಒತ್ತಾಯಿಸಿ ನಡೆಯುತ್ತಿರುವ ಅನಿರ್ಧಿಷ್ಟಾವಧಿ ಪ್ರತಿಭಟನೆ ವೇಳೆ ಶಾಸಕರ ಹಾಗೂ ಗ್ರಾ.ಪಂ. ಮಾಜಿ ಅಧ್ಯಕ್ಷರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದು ಇದು ಸತ್ಯಕ್ಕೆ ದೂರವಾದ ಸಂಗತಿಯೆಂದು ಗೆಜ್ಜಲಗೆರೆ ಗ್ರಾ.ಪಂ. ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಹರೀಶ್ ತಿಳಿಸಿದರು.ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿ ವೇಳೆ ಮಾತನಾಡಿದ ಅವರು ಗೆಜ್ಜಲಗೆರೆ ಗ್ರಾಮಸ್ಥರು ಕಳೆದ 13 ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆ ಅವರ ವೈಯಕ್ತಿಕ ವಿಚಾರವಾಗಿದ್ದು ಧರಣಿ ವೇಳೆ ನಗರಸಭೆಗೆ ಸೇರ್ಪಡೆ ಸಂಬಂಧ ತಮ್ಮನ್ನು ಎರಡು ಕೋಟಿ ರು. ಗಳಿಗೆ ಮಾರಾಟವಾಗಿದ್ದಾರೆಂದು ಸಲ್ಲದ ಆರೋಪ ಮಾಡುತ್ತಿದ್ದು ಸಾಕ್ಷಿ ಸಮೇತ ರುಜುವಾತು ಪಡಿಸುವಂತೆ ಸವಾಲು ಹಾಕಿದ್ದಾರೆಗ್ರಾಮದ ಭೈರವೇಶ್ವರ ಮತ್ತು ವೀರಭದ್ರೇಶ್ವರ ದೇವರ ಮೇಲೆ ನಂಬಿಕೆಯಿಟ್ಟಿರುವ ತಾವು ಇದುವರೆವಿಗೂ ಒಂದೇ ಒಂದು ರೂ.ಗಳನ್ನು ಪಡೆದಿಲ್ಲವಾದರೂ ಕೆಲ ಪ್ರತಿಭಟನಾ ನಿರತರು ನಿರಂತರವಾಗಿ ಆರೋಪ ಮಾಡುತ್ತಿದ್ದು ಗ್ರಾಮದೆಲ್ಲೆಡೆ ತಮ್ಮ ವಿರುದ್ಧ ಹಣ ಪಡೆದಿರುವ ತಪ್ಪು ಅಭಿಪ್ರಾಯವನ್ನು ಹರಡುತ್ತಿದ್ದು ಈ ಕುರಿತು ಗ್ರಾಮದ ದೇವಾಲಯದ ಮುಂದೆ ಪ್ರಮಾಣಕ್ಕೆ ಒತ್ತಾಯಿಸಿದರು. ಗೋಷ್ಠಿ ವೇಳೆ ಗ್ರಾ.ಪಂ. ಸದಸ್ಯ ಶಿವಾಜಿ, ಮಾಜಿ ಸದಸ್ಯ ಕುಮಾರ್,ಎಂ.ಪಿ.ಸಿ.ಎಸ್ ನಿರ್ದೇಶಕ ಆದಿಪ್ರಸಾದ್, ಯುವ ಕಾಂಗ್ರೆಸ್ ಅಧ್ಯಕ್ಷ ಹಿತೇಷ್ಗೌಡ, ಮಾಜಿ ಅಧ್ಯಕ್ಷ ಕಿರಣ್, ಮುಖಂಡರಾದ ಮನು, ಇಂದುಕುಮಾರ್ ಇತರರಿದ್ದರು.

ವಿರಾಮ
ಪ್ರತಿ ಭಾನುವಾರ

{ಡಾ.ಜಿ.ಪರಮೇಶ್ವರ್} ಸಚಿವ

ಸಿದ್ದರಾಮಯ್ಯ ಜನಪ್ರಿಯ ಸಿಎಂ ಆಗಿದ್ದಾರೆ. ದೇವರಾಜ ಅರಸರ ದಾಖಲೆ ಮುರಿಯುತ್ತಿದ್ದಾರೆ. ನಾನು ಸಿಎಂ ಅವರನ್ನ ಅಭಿನಂದಿಸುತ್ತೇನೆ. ಕಾಂಗ್ರೆಸ್ ನಲ್ಲಿ ಮಾತ್ರ ಇಂತಹ ಅವಕಾಶ ಇದೆ. ದೇವರಾಜ ಅರಸರಿಗೆ ಅವಕಾಶ ಕೊಡಲಾಗಿತ್ತು. ಈಗ ಸಿದ್ದರಾಮಯ್ಯನವರಿಗೆ ಕೊಟ್ಟಿದ್ದಾರೆ. ಇಂತಹ ಬೆಳವಣಿಗೆ ಇಲ್ಲಿ ಮಾತ್ರ ಸಾಧ್ಯ.

ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವ | ಮೈಸೂರು ಜಿಲ್ಲೆ ಕಲೆ, ಸಾಹಿತ್ಯ, ಪುರಾತತ್ವ, ಸಂಗೀತಗಳ ಉಗಮ ಸ್ಥಾನ | ಸಚಿವ ಡಾ.ಮಹದೇವಪ್ಪ ಹೇಳಿಕೆ

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕತೆ, ವೈಚಾರಿಕತೆ ಬೆಳೆಸಿ

ಮೈಸೂರು: ವಿದ್ಯಾರ್ಥಿಗಳು ತಮ್ಮ ಪಠ್ಯ ಚಟುವಟಿಕೆಗಳ ಜೊತೆ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ರೂಢಿಸಿಕೊಳ್ಳಬೇಕು. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆ ಬಿತ್ತಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ಮಹಾರಾಜ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಜಿಲ್ಲೆ ಕಲೆ, ಸಾಹಿತ್ಯ, ಪುರಾತತ್ವ, ಸಂಗೀತಗಳ ಉಗಮ ಸ್ಥಾನ. ನಾಲ್ವಡಿ ಕೃಷ್ಣಾರಾಜ ಒಡೆಯರ್‌ಅವರು ತಮ್ಮ ಆಡಳಿತದ ಸಮಯದಲ್ಲೇ ಸಾಹಿತ್ಯ ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್‌ಅವರು ಸ್ವಾತಂತ್ರ್ಯಕ್ಕೆ ಮೊದಲು ಜನ ಜೀವನ ಹೇಗಿರಬೇಕು ಎಂದು ಅಡಿಪಾಯ ಹಾಕಿದರು. ಶಿಕ್ಷಣ, ಮೀಸಲಾತಿ, ಮಹಿಳಾ ಸಬಲೀಕಾರಣ, ಆರೋಗ್ಯ, ಕೃಷಿ, ತೋಟಗಾರಿಕೆ, ವಿದ್ಯುತ್, ರೈಲ್ವೆ, ಮೈಸೂರು ಪೇಪರ್‌ಮಿಲ್, ಕನ್ನಡ ಸಾಹಿತ್ಯ ಪರಿಷತ್ ನಿರ್ಮಾಣ ಮಾಡಿದರು. ವಿದ್ಯಾರ್ಥಿಗಳು ನಾಲ್ವಡಿ ಕೃಷ್ಣ ಒಡೆಯರ್‌ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು ಎಂದರು.

ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವ ಕಾರ್ಯಕ್ರಮವನ್ನು ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ಉದ್ಘಾಟಿಸಿದರು.

> **ಮೈಸೂರು ಜಿಲ್ಲೆ ಶಿಕ್ಷಣ ಕ್ಷೇತ್ರದಲ್ಲಿ ಮೊದಲ ಸ್ಥಾನ ಗಳಿಸಬೇಕು. ಶಿಕ್ಷಕರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬಿತ್ತಬೇಕು ಹಾಗೂ ಸಂವಿಧಾನದ ಆಶಯಗಳಾದ ಸ್ವತಂತ್ರ, ಸಮಾನತೆ, ಭ್ರಾತೃತ್ವ ಭಾವನೆಗಳನ್ನು ಬೆಳೆಸಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಂವಿಧಾನದ ಪೀಠಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ ಉತ್ತಮ ಭಾರತದ ಪ್ರಜೆಗಳಾಗಿ ಹೊರಹೊಮ್ಮವಂತೆ ಮಾಡಬೇಕು.**
> **-ಡಾ.ಎಚ್.ಸಿ.ಮಹದೇವಪ್ಪ, ಸಚಿವ**

ಮೈಸೂರು ಜಿಲ್ಲೆ ಶಿಕ್ಷಣ ಕ್ಷೇತ್ರದಲ್ಲಿ ಮೊದಲ ಸ್ಥಾನ ಗಳಿಸಬೇಕು.

ಶಿಕ್ಷಕರು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬಿತ್ತಬೇಕು ಹಾಗೂ ಸಂವಿಧಾನದ ಆಶಯಗಳಾದ ಸ್ವತಂತ್ರ, ಸಮಾನತೆ, ಭ್ರಾತೃತ್ವ ಭಾವನೆಗಳನ್ನು ಬೆಳೆಸಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಂವಿಧಾನದ ಪೀಠಿಕೆಯ ಬಗ್ಗೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ ಉತ್ತಮ ಭಾರತದ ಪ್ರಜೆಗಳಾಗಿ ಹೊರಹೊಮ್ಮವಂತೆ ಮಾಡಬೇಕು ಎಂದು ಹೇಳಿದರು.

ಶಾಸಕ ಕೆ.ಹರೀಶ್ ಗೌಡ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ. ಸೋಮೇಗೌಡ, ಡಯಟ್ ನ ಉಪ ನಿರ್ದೇಶಕ ಹಾಗೂ ಪ್ರಾಂಶುಪಾಲ ಸಿ.ಆರ್. ನಾಗರಾಜಯ್ಯ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ. ಉದಯಕುಮಾರ್,ಶಾಲಾ ಶಿಕ್ಷಣ ಇಲಾಖೆ ನೋಡಲ್ ಅಧಿಕಾರಿ ಎಂ. ಆರ್.ಅನಂತರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಡ್ರ್ಯಾಗನ್ ಪಾಂಡ್ ಉದ್ಘಾಟಿಸಿದ ಸಿದ್ದರಾಮಯ್ಯ

ಮೈಸೂರು: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಭಾರತದಲ್ಲೇ ಪ್ರಥಮವಾಗಿ ನಿರ್ಮಿಸಲಾಗಿರುವ ರಾಜೀವ್ ಗಾಂಧಿ ಡ್ರ್ಯಾಗನ್ ಪಾಂಡ್ ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಈ ವೇಳೆ ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮಾತನಾಡಿ, ಮುಖ್ಯಮಂತ್ರಿಗಳಿಗೆ ಮೈಸೂರು ಜಿಲ್ಲೆಯ ಮೇಲೆ ಇರುವ ಪ್ರೀತಿಯಿಂದ ಮೈಸೂರು ಜಿಲ್ಲೆಯನ್ನು ವಿಭಿನ್ನವಾಗಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರು.

ಮುಖ್ಯಮಂತ್ರಿಗಳು ನ್ಯಾಯ, ಬಡವರು ಹಾಗೂ ಅಭಿವೃದ್ಧಿಯ ಪರ. ಗ್ರಾಮೀಣ ಜೀವನ ಎಂದರೆ ಮುಖ್ಯಮಂತ್ರಿಗಳಿಗೆ ಅಚ್ಚುಮೆಚ್ಚು. ಮುಖ್ಯಮಂತ್ರಿಗಳು ರಾಜ್ಯದಲ್ಲಿಅನೇಕ ಅಭಿವೃದ್ಧಿ ಕೆಲಸ ಮಾಡುವ ಮೂಲಕ ಉತ್ತಮ ಆಡಳಿತ ನೀಡಿದ್ದಾರೆ ಎಂದರು.

ಖಜಿಜಟ್ಟಿಚ್ಚಥಿ ಡಿಜಿರಿಜ ಚ ಠಿಟ್ಟಿಭಟ್ಟಿ ಜಭಿಚ್ಚಿಠಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಬಣ್ಣಿಸಿದರಲ್ಲದೆ, ಅವರು ತಮ್ಮ ದಿಟ್ಟ ನಿರ್ಧಾರಗಳಿಂದ ಉತ್ತಮ ಆಡಳಿತ ನೀಡುತ್ತಿದ್ದಾರೆ. ಅವರು ವಿದೇಶ ಪ್ರವಾಸ ಕೈಗೊಂಡ ಸಂದರ್ಭದಲ್ಲೂ ಪ್ರತಿದಿನ ನನಗೆ ಕರೆ ಮಾಡಿ ಮೈಸೂರಿನ ಸ್ಥಿತಿಗತಿಗಳ ಬಗ್ಗೆ ವಿಚಾರಿಸುತ್ತಾರೆ. ಇದು ಅವರಿಗೆ ಮೈಸೂರಿನ ಮೇಲೆ ಇರುವ ಪ್ರೀತಿಗೆ ಸಾಕ್ಷಿ ಎಂದರು.

ಇದೇ ವೇಳೆ ಮುಖ್ಯಮಂತ್ರಿಗಳ ಸಾಧನೆ ಕುರಿತು ಲೇಸರ್ ಶೋ ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ವಿಧಾನ ಪರಿಷತ್ ಸದಸ್ಯ ತಿಮ್ಮಯ್ಯ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಜಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್,ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್‌ಆಸಿಫ್ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾಗಿರುವ ರಾಜೀವ್ ಗಾಂಧಿ ಡ್ರ್ಯಾಗನ್ ಪಾಂಡ್ ನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

ಕಾನೂನು ಅರಿವು ಎಲ್ಲರಿಗೂ ಅಗತ್ಯ: ಡಿಸಿ

ಮಂಡ್ಯ: ಸಮಾಜದ ಎಲ್ಲಾ ವರ್ಗದವರಿಗೂ ಕಾನೂನಿನ ಅರಿವು ಮೂಡಿಸುವ ಕಾರ್ಯಾಗಾರ ಅಗತ್ಯವಿದ್ದು ಕಾನೂನಿನ ಅರಿವು ಇದ್ದಾಗ ಮಾತ್ರ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್‌ಭವನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿನಿಯಮ 1989, ಅಧಿನಿಯಮ 2015 ಮತ್ತು ನಿಯಮಗಳು 1995 ನಿಯಮಗಳು ಮತ್ತು ನಾಗರೀಕ ಹಕ್ಕು ರಕ್ಷಣಾ ಕಾಯ್ದೆ 1955ರನ್ವಯ ಆಯೋಜಿ ಸಲಾಗಿದ್ದ ವಿಚಾರಗೋಷ್ಠಿ ಮತ್ತು ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದಲಿತ ಸಮು ದಾಯಗಳ ಹಕ್ಕುಗಳ ಕಾಯ್ದೆ ಕುರಿತು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಅರಿವು ಮೂಡಿ ಸುವ ಕಾರ್ಯಾಗಾರವನ್ನು ಆಯೋಜಿಸಬೇಕು. ಆಗ ಮಾತ್ರ ಈ ಕಾಯ್ದೆ ತೀವ್ರತೆ ತಿಳಿಯುತ್ತದೆ ಎಂದು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರತಿಬಂಧ ಕಾಯ್ದೆಯ ಸದಸ್ಯರುಗಳು ಮುತುವರ್ಜಿ ವಹಿಸಿ ಪ್ರಯತ್ನಪಟ್ಟರೆ ತಾಲೂಕು ಮಟ್ಟದಲ್ಲಿ ಕಾರ್ಯಾಗಾರವನ್ನು ಯಶಸ್ವಿಗೊಳಿ ಸಬಸಹುದು. ಸದರಿ ಕಾಯ್ದೆಯಡಿ ನ್ಯಾಯಾಲಯಗಳಿಗೆ ಸಾಕ್ಷಿ ಹೇಳಲು ಬರುವ ಸಾಕ್ಷಿದಾರರಿಗೆ ಧೈರ್ಯ ತುಂಬುವ ಕೆಲಸವಾಗಬೇಕು. ಕಾರ್ಯಾಗಾರವನ್ನು ಮಾಡುವ ಮೂಲಕ ಅಸ್ಪೃಶ್ಯತೆಯನ್ನು ಈಗಲೂ ಜೀವಂತವಾಗಿ ಉಳಿಸಿರುವುದು ತಪ್ಪು ಎಂಬ ಸಂದೇಶವನ್ನು ಸಮಾಜಕ್ಕೆ ನೀಡಬೇಕಿದೆ. ಅಸ್ಪೃಶ್ಯತೆಯನ್ನು ಆಚರಿಸಿದರೆ ಏನೆಲ್ಲಾ ಕಾಯ್ದೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಸಂದೇಶ ಸಮಾಜಕ್ಕೆ ಹೋಗಬೇಕು ಎಂದು ಹೇಳಿದರು.

ಎಲ್ಲಾ ದೌರ್ಜನ್ಯ ಪ್ರಕರಣಗಳನ್ನು ಕಾನೂನಿನ ಮೂಲಕವೇ ಪರಿಹರಿಸುತ್ತೇವೆ ಎಂದರೆ ಪ್ರಯೋಜನವಿಲ್ಲ ಸಮಾಜದಲ್ಲಿ ಮನಪರಿವರ್ತನೆ ಆಗಬೇಕು. ಜನರಿಗೆ ಅರಿವು ಹೆಚ್ಚಾಗಬೇಕು. ಹೀಗಿದ್ದಾಗ ಮಾತ್ರ ಸಮಾಜದಿಂದ ಅಸ್ಪೃಶ್ಯತೆಯನ್ನು ಹೋಗಲಾಡಿಸಬಹುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಬಹುದು ಎಂದು ಅಭಿಪ್ರಾಯಪಟ್ಟರು.ಪರಿಶಿಷ್ಟರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಕಾಯಿದೆ ಇದ್ದರೂ ಸಹ ಇನ್ನೂ ಪ್ರಸ್ತುತ ಸಮಾಜದಲ್ಲಿ ಪರಿಶಿಷ್ಟರ ಮೇಲೆ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ ಎಂದರೆ ನಮ್ಮನ್ನು ನಾವೇ ಅವಲೋಕಿಸಿಕೊಳ್ಳಬೇಕು ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಆನಂದ್ ಮಾತನಾಡಿದರು. ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಕೆ.ಶ್ರೀನಿವಾಸ್, ಮಂಡ್ಯ ಐದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರಕಾರಿ ಅಭಿಯೋ ಜಕರಾದ ರಾಜೇಶ್ ಸೇರಿದಂತೆ ಸಮುದಾಯದ ಮುಖಂಡರುಗಳು ಉಪಸ್ಥಿತರಿದ್ದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್‌ಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಉದ್ಘಾಟಿಸಿದರು.

ಡಾ.ಶಿವಕುಮಾರಶ್ರೀಗಳ ಆದರ್ಶ ಮೈಗೂಡಿಸಿಕೊಳ್ಳಿ

ಪಟ್ಟಣದ ಶಿವಾನುಭವ ಕಲ್ಯಾಣ ಮಂಟಪದಲ್ಲಿ 2026ನೇ ಸಾಲಿನ ಕ್ಯಾಲೆಂಡರನ್ನು ಸಮಾಜ ಸೇವಕರಾದ ಸಿ.ಆರ್.ಉಮಾಶಂಕರ್ ಬಿಡುಗಡೆ ಮಾಡಿದರು.

ಕೆ.ಆರ್.ನಗರ: ಶಿಕ್ಷಣವಿಲ್ಲದಿದ್ದರೆ ಮನುಷ್ಯರಾಗಿ, ಸ್ವಾಭಿಮಾನಿಗಳಾಗಿ ಬದಕಲು ಸಾಧ್ಯವಿಲ್ಲ ಸಮುದಾಯದ ಬದಲಾವಣೆ ತರಬೇಕಾದರೆ ಮಕ್ಕಳು ವಿದ್ಯಾವಂತರನ್ನಾಗಿ ಮಾಡಲೇ ಬೇಕು ಎಂದು ಉದ್ಯಮಿ ಹಾಗೂ ಸಮಾಜ ಸೇವಕರಾದ ಸಿ.ಆರ್.ಉಮಾಶಂಕರ್ ಹೇಳಿದರು.

ಪಟ್ಟಣದ ಬಸವೇಶ್ವರ ಬಡಾವಣೆಯಲ್ಲಿರುವ ಶಿವಾನುಭವ ಕಲ್ಯಾಣ ಮಂಟಪದಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಿವೃತ್ತ ನೌಕರರಿಗೆ ಸನ್ಮಾನ ಹಾಗೂ 2026ನೇ ಸಾಲಿನ ಕ್ಯಾಲೆಂಡರ್‌ಬಿಡುಗಡೆ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಅವರು ಜ್ಞಾನದಬೆಳಕು, ದಾಸೋಹದ ಹರಿಕಾರರು ನಡೆದಾಡುವ ದೇವರು ಪರಮಪೂಜ್ಯ ಡಾ.ಶಿವಕುಮಾರಸ್ವಾಮಿಗಳ ಜೀವನದ ಆದರ್ಶ ಮತ್ತು ತತ್ವ ಸಿದ್ಧಾಂತಗಳನ್ನು ನಮ್ಮ ನೌಕರರ ವರ್ಗದವರು ಹಾಗೂ ಸಮುದಾಯ ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದ ಅವರು ಕ್ಯಾಲೆಂಡರ್‌ದಿನ ಬದಲಾವಣೆ ಪ್ರತಿ ಅಲ್ಲ ದಿನನಿತ್ಯ ನಮ್ಮ ಜೀವನದ ಮೌಲ್ಯಗಳನ್ನು ನೆನಪಿಸುವ ಕ್ಯಾಲೆಂಡರ್ 12ನೇ ಶತಮಾನದಲ್ಲಿ ಬಸವಣ್ಣರವರು ಕಾಯಕವೇ ಕೈಲಾಸ ಮತ್ತು ದಾಸೋಹಕ್ಕಾಗಿ ಅವರ ಶ್ರಮಿಸಿದ ದಿನಗಳನ್ನು ನಮ್ಮ ಸಮುದಾಯದಕ್ಕೆ ಕೊಟ್ಟ ಕೊಡುಗೆಯಾಗಿದೆ ಎಂದರು.

ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದ್ದ ಅರಕೆರೆಯ ವಿರಕ್ತಮಠದ ಪರಮಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಜೀ ಮನೆಯ ಹಿರಿಯರು ಸಂಸ್ಕಾರವಂತರಾಗಿದ್ದರೇ ಮಕ್ಕಳು ಕೂಡ ಅದೇ ದಾರಿಯಲ್ಲಿ ಸಾಗುತ್ತಾರೆ. ತಾವು ಗಳಿಸಿದ ಹಣದಲ್ಲಿ ಸ್ವಲ್ಪ ಭಾಗವನ್ನು ಶಿಕ್ಷಣ, ಆರೋಗ್ಯ ಸಮಾಜದ ನೊಂದವರಿಗೆ

ಪತ್ರಕರ್ತರು ಸದಾ ವೃತ್ತಿ ಧರ್ಮವನ್ನ ಎತ್ತಿ ಹಿಡಿಯಬೇಕು

ಪಿರಿಯಾಪಟ್ಟಣ : ಪತ್ರಕರ್ತರ ಹಿತವನ್ನು ಕಾಯುವ ಮೌಲ್ಯವನ್ನು ಸಂಘಟನೆ ಅಳವಡಿಸಿಕೊಂಡಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ತಿಳಿಸಿದರು.ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಪಿರಿಯಾಪಟ್ಟಣ ತಾಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 2026ರ ಸಾಲಿನ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಸಂಗವು ಪ್ರತಿಯೊಂದು ತಾಲೂಕು ಸಂಘಕ್ಕೆ ಅಭಿವೃದ್ಧಿಗೆ ಸಹಕಾರವನ್ನು ನೀಡುತ್ತಾ ಬಂದಿದೆ. ಪತ್ರಕರ್ತರು ಪ್ರಾಮಾಣಿಕ ಮತ್ತು ನಿಷ್ಠೆಯ ಸುದ್ದಿ ಸಂಪಾದನೆಯನ್ನು ಮಾಡಬೇಕು. ಮಾಧ್ಯಮ ಕ್ಷೇತ್ರಕ್ಕೆ ಸಾಕಷ್ಟು ಮಹನೀಯರು ತಮ್ಮ ಸೇವೆ ಕೊಡುಗೆ ನೀಡಿದ್ದಾರೆ ಇದನ್ನು ಉಳಿಸುವ ಕೆಲಸ ಮಾಡಬೇಕು ಎಂದರು. ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ ಮಾತನಾಡಿದರು. ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಬಿ. ರಾಘವೇಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ದಾ. ರಾ. ಮಹೇಶ್, ನಿರ್ದೇಶಕ ನಟರಾಜ್, ಸಿ.ಎನ್.ವಿಜಯ್, ಹುಣಸೂರು ಅಧ್ಯಕ್ಷ ಕೃಷ್ಣ ಕುಮಾರ್,ಪಿರಿಯಾಪಟ್ಟಣ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರವಿಚಂದ್ರ , ಪತ್ರಕರ್ತರರಾದ ನವೀನ್ ಕುಮಾರ್,ಗಣೇಶ್, ಮುಕುಂದ, ವಿರೇಶ್, ಸ್ವಾಮಿ, ಶರತ್ ಇತರರಿದ್ದರು.

ರೋಟರಿ ಕಣ್ಣಿನ ಆಸ್ಪತ್ರೆಗೆ ಜಾಗ ಕೊಡಿಸುವೆ: ಶಿಲ್ಪಾನಾಗ್

ಚಾಮರಾಜನಗರ: ಸೇವಾ ಕಾರ್ಯ ಮಾಡುತ್ತಿರುವ ರೋಟರಿ ಸಂಸ್ಥೆಯ ಕಣ್ಣಿನ ಆಸ್ಪತ್ರೆಗೆ ಜಿಲ್ಲಾಡಳಿತ ವತಿಯಿಂದ ಜಾಗ ಕೊಡಿಸುವುದಾಗಿ ವರ್ಗಾವಣೆಗೊಂಡ ಜಿಲ್ಲಾಧಿಕಾರಿ ಶಿಲ್ಪಾನಾಗ್ ಹೇಳಿದರು.

ನಗರದ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ರೋಟರಿ ಸಿಲ್ಕ್ ಸಿಟಿ ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ರೋಟರಿ ಸಂಸ್ಥೆಯು ಚಾಮರಾಜನಗರದಲ್ಲಿ ಕಣ್ಣಿನ ಆಸ್ಪತ್ರೆಗೆ ಜಿಲ್ಲಾಡಳಿತ ವತಿಯಿಂದ ಜಾಗ ಕೊಡಿಸುವಂತೆ ಮನವಿ ಮಾಡಿದ್ದಾರೆ. ನಾನು ಬೇರೆಕಡೆ ವರ್ಗಾವಣೆಯಾಗಿದ್ದರು ಕೂಡ ಜಿಲ್ಲಾಡಳಿತದೊಂದಿಗೆ ಸಂಪರ್ಕದಲ್ಲಿದ್ದು, ರೋಟರಿ ಕಣ್ಣಿನ ಆಸ್ಪತ್ರೆಗೆ ಜಾಗ , ಸಿಎಸ್ ಆರ್ ಅನುದಾನ ಮುಂದುವರಿಸುವುದಾಗಿ ಭರವಸೆ ನೀಡಿದರು. ಯಾರೇ ಆಗಲಿ ಒಂದು ತಂಡವಾಗಿ ಕೆಲಸ ಮಾಡಿದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ನಮ್ಮೊಂದಿಗೆ ಎಲ್ಲ ಅಧಿಕಾರಿಗಳು ಒಗ್ಗಟ್ಟಾಗಿ ಕೆಲಸ ಮಾಡಿದ ಕಾರಣದಿಂದ ಜಿಲ್ಲೆಯಲ್ಲಿ ಅಭಿವೃದ್ಧಿಗಳು ಕಾರ್ಯಕ್ರಮಗಳು ಯಶಸ್ವಿಯಾಯಿತು. ಜಿಲ್ಲೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಆತ್ಮತೃಪ್ತಿ ನನಗಿದೆ. ಚಾಮರಾ ಜನಗರ ಜಿಲ್ಲೆಯು ನನ್ನ ಅಚ್ಚುಮೆಚ್ಚಿನ ಜಿಲ್ಲೆಯಾಗಿದ್ದು, ಇದನ್ನು ಮುಂದುವರೆದ ಜಿಲ್ಲೆಯಾಗಿ ನೋಡಬೇಕು ಆಗಾಗಿ ನಾನು ರಾಜ್ಯಮಟ್ಟದಲ್ಲಿದ್ದರು ಜಿಲ್ಲೆಗೆ ವಿಶೇಷ ಒತ್ತು ನೀಡುವುದಾಗಿ ತಿಳಿಸಿದರು.ರೋಟರಿ ಸಂಸ್ಥೆಯ ಜಿಲ್ಲಾ ಸಹಾಯಕ ಗೌರರ್‌ದೊಡ್ಡರಾಯಪೇಟೆ ಗಿರೀಶ್ ಮಾತನಾಡಿ, ಜಿಲ್ಲೆಯ ಅಭಿವೃದ್ಧಿ ಪಡಿಸಿದ ಸಾಲಿನಲ್ಲಿ ಹಿಂದಿನ ಜಿಲ್ಲಾಧಿಕಾರಿ ಹರ್ಷಗುಪ್ತ ನಂತರಶಿಲ್ಪಾನಾಗ್ ಅವರು ಹೆಚ್ಚಿನ ಒತ್ತು ನೀಡಿ ಹೆಸರುವಾಸಿಯಾಗಿದ್ದರು. ಸರಕಾರಿ ಸೇವೆಯಲ್ಲಿ ನಿವೃತ್ತಿ, ವರ್ಗಾವಣೆ ಸರ್ವೇ ಸಾಮಾನ್ಯವಾದದ್ದು, ಶಿಲ್ಪಾನಾಗ್ ಅವರು ಜಿಲ್ಲೆಯ ಅಭಿವೃದ್ಧಿಗಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬರುವಂತ ಅವಕಾಶ ದೊರೆಯಲಿ ಎಂದು ಆಶಿಸಿದರು.

ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ 25 ವರ್ಷದಿಂದ ಅನೇಕ ಜಿಲ್ಲಾಧಿಕಾರಿಗಳು ಬಂದು ಸೇವೆ ಸಲ್ಲಿಸಿ ಹೋಗಿದ್ದಾರೆ. ಅದರಲ್ಲಿ ಕೆಲವು. ಅಧಿಕಾರಿಗಳು ನೆನಪಿನಲ್ಲಿ ಉಳಿಸುವ ಸೇವೆ ಸಲ್ಲಿಸಿ ಹೋಗುತ್ತಾರೆ ಆ ಸಾಲಿನಲ್ಲಿ ಹರ್ಷಗುಪ್ತ, ಶಿಲ್ಪಾನಾಗ್ ಅವರು ಬರುತ್ತಾರೆ. ಅವರು ಜನಮಾನಸದಲ್ಲಿ ಉಳಿಯುವ ಕೆಲಸ. ಮಾಡಿದ್ದಾರೆ ಎಂದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಪ್ರಭಾಕರ ಮಾತನಾಡಿದರು. ಕಾರ್ಯಕ್ರಮದಲ್ಲಿ ರೋಟರಿ ಕಾರ್ಯದರ್ಶಿ ಸಿದ್ದರಾಜು, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಶಮಿತ್ಕುಮಾರ್,ಕಾರ್ಯದರ್ಶಿ ಸಂತೋಷ್, ಅಮೃತಾ ಪ್ರಭಾಕರ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಚಾಮರಾಜನಗರ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರನ್ನುಆತ್ಮೀಯವಾಗಿ ಬೀಳ್ಕೊಟ್ಟು ಸನ್ಮಾನಿಸಲಾಯಿತು.

ಆರ್ಥಿಕ ವಂಚನೆ ಪ್ರಕರಣಗಳ ಬಗ್ಗೆ ಜಾಗೃತರಾಗಿರಿ: ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ

ಮಡಿಕೇರಿ : ನಮ್ಮೊಳಗಿನ 'ದೌರ್ಬಲ್ಯ'ವನ್ನು ಬಳಸಿಕೊಂಡು, ಆಧುನಿಕ ಸಾಮಾಜಿಕ ಜಾಲತಾಣಗಳ ಮೂಲಕ ನಡೆಯುವ 'ಸೈಬರ್‌ಕ್ರೈಂ' 'ಡಿಜಿಟಲ್ ಅರೆಸ್ಟ್'' ಮೊದಲಾದ ಆರ್ಥಿಕ ವಂಚನೆ ಪ್ರಕರಣಗಳ ಬಗ್ಗೆ ಸದಾ ಜಾಗೃತರಾಗಿರಿ ಮತ್ತು ಇತರರಲ್ಲಿ ಅರಿವು ಮೂಡಿಸಿ ಎಂದು ಕೊಡಗು ಜಿಲ್ಲಾ ನೂತನ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಕರೆ ನೀಡಿದ್ದಾರೆ.

ನಗರದ ಪೊಲೀಸ್ ಮೈತ್ರಿ ಭವನದಲ್ಲಿ ನಡೆದ ಮಡಿಕೇರಿ ಉಪ ವಿಭಾಗದ 'ಜನ ಸಂಪರ್ಕ'' ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ಸಾಮಾಜಿಕ ಜಾಲತಾಣಗಳ ಮೂಲಕ ಹಣಕಾಸಿನ ವಂಚನೆ ಪ್ರಕರಣಗಳು, ಪ್ರಮುಖವಾಗಿ ಹಿರಿಯರು, ನಿವೃತ್ತ ಉದ್ಯೋಗಿಗಳನ್ನೆ ಗುರಿಯಾಗಿಸಿಕೊಂಡು ನಡೆಯುತ್ತಿದೆ. ತಮ್ಮನ್ನು ಸಂಪರ್ಕಿಸುವ ವಂಚಕರು ಹಣವನ್ನು ದುಪ್ಪಟ್ಟು ಮಾಡಿಕೊಡುವ ಆಮಿಷವನ್ನೊಡ್ಡಿ, ಆರಂಭಿಕ ಹಂತದಲ್ಲಿ ಸಣ್ಣ ಮೊತ್ತವನ್ನು ನೀವು ಅದರಲ್ಲಿ ತೊಡಗಿಸಿದಲ್ಲಿ ಹೆಚ್ಚಿನ ಮೊತ್ತವನ್ನು ನೀಡುತ್ತಾರೆ. ನಂತರದ ದಿನಗಳಲ್ಲಿ ನಿಮ್ಮಲ್ಲಿ ವಿಶ್ವಾಸವನ್ನು ಮೂಡಿಸುವ ಮೂಲಕ ದೊಡ್ಡ ಮೊತ್ತದ ಹಣವನ್ನು ಹೂಡುವಂತೆ ಪ್ರೇರೇಪಿಸಿ ವಂಚಿಸುತ್ತಾರೆ ಎಂದು ಎಚ್ಚರಿಕೆಯ ಮಾತುಗಳನ್ನಾಡಿದರು.

ನಿಮ್ಮಲ್ಲಿನ ದೌರ್ಬಲ್ಯಗಳನ್ನೆ ಬಳಸಿಕೊಂಡು ಸಾಮಾಜಿಕ ಜಾಲತಾಣದ ಮೂಲಕ ವಂಚಿಸುವ 'ಡಿಜಿಟಲ್ ಅರೆಸ್ಟ್''ನಂತಹ ಪ್ರಕರಣಗಳಲ್ಲಿ ಸಿಲುಕುವ ಬಹುತೇಕ ಮಂದಿ ಶಿಕ್ಷಣವಂತರೇ ಆಗಿದ್ದಾರೆ. ಯಾವುದೇ ಕಾರಣಕ್ಕೂ ನಿಮ್ಮ ವಾಟ್ಸ್ ಅಪ್, ಫೇಸ್ ಬುಕ್ ಸೇರಿದಂತೆ ಯಾವುದೇ ಸಾಮಾಜಿಕ ಜಾಲತಾಣಗಳ ಮೂಲಕ ಬರುವ ಅನಾಮಧೇಯ 'ಲಿಂಕ್''ಗಳನ್ನು ಬಳಸುವ ಪ್ರಯತ್ನ ಮಾಡಬೇಡಿ ಎಂದು ಮನವಿ ಮಾಡಿದ ಅವರು, ಇಂತಹ ಯಾವುದೇ ಸಂಕಷ್ಟಕ್ಕೆ ಸಿಲುಕಿದಲ್ಲಿ ತಕ್ಷಣವೆ ಪೊಲೀಸ್ ಇಲಾಖೆಯ '1930'' ನೆರವಿಗೆ ದೂರನ್ನು ದಾಖಲಿಸುವಂತೆ ಮನವಿ ಮಾಡಿದರು.

ಸಾರ್ವಜನಿಕರು ತಮ್ಮ ಸಮಸ್ಯೆಗಳ ಬಗೆಹರಿಕೆಗೆ ಸಹಾಯವಾಣಿ '112''ನ್ನು ಬಳಸುವಂತೆ ಕರೆ ನೀಡಿದ ಅವರು, ಮಕ್ಕಳ ಮೇಲಿನ ದೌರ್ಜನ್ಯ, ಬಾಲ್ಯ ವಿವಾಹ ಮೊದಲಾದ ಯಾವುದೇ ಕಾನೂನು ಬಾಹಿರಯ ಕೃತ್ಯಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಹಾಯವಾಣಿ '1098''ಗೆ ಹಾಗೂ ಕೌಟುಂಬಿಕ ಸಮಸ್ಯೆಗಳಿಗೆ ಸಿಲುಕಿ ಸಂಕಷ್ಟಕ್ಕೆ ಒಳಗಾಗುವ ಮಹಿಳೆಯರ ನೆರವಿಗಾಗಿಯೇ ಇರುವ ಸಹಾಯವಾಣಿ '181'' ಗೆ ಕರೆ ಮಾಡಿ ನೆರವನ್ನು ಪಡೆಯಬೇಕೆಂದು ಎಸ್ಪಿ ಬಿಂದುಮಣಿ ತಿಳಿಸಿದರು.ಕೊಡಗು ಜಿಲ್ಲೆ ಜನ ವಿರಳವಾದ ಪ್ರದೇಶವಾಗಿದೆ. ದೂರ ದೂರದಲ್ಲಿ ಮನೆಗಳು ಇರುವ ಹಿನ್ನೆಲೆಯಲ್ಲಿ ತಮ್ಮ ಮನೆಗಳಿಗೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಿ. ಮನೆಯಿಂದ ಸಾಕಷ್ಟು ದಿನಗಳ ಕಾಲ ಹೊರಗೆ ಇರಬೇಕಾದ ಪ್ರಸಂಗಗಳು ಉದ್ಭವಿಸಿದಾಗ, ತಮ್ಮ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿಯನ್ನು ನೀಡಿ. ಪ್ರಮುಖವಾಗಿ ತಮ್ಮ ಮನೆಗಳಲ್ಲಿ ಇರಬಹುದಾದ ಬೆಲೆಬಾಳುವ ವಸ್ತುಗಳನ್ನು ಬ್ಯಾಂಕ್ ಲಾಕರ್‌ನಲ್ಲಿ ಸುರಕ್ಷಿತವಾಗಿಡುವಂತೆ ಸಲಹೆ ನೀಡಿದರು.

ಮಡಿಕೇರಿ ಉಪ ವಿಭಾಗದ 'ಜನ ಸಂಪರ್ಕ'' ಸಭೆಯ ಅಧ್ಯಕ್ಷತೆ ವಹಿಸಿ ಎಸ್ ಪಿ ಆರ್.ಎನ್.ಬಿಂದುಮಣಿ ಅವರು ಮಾತನಾಡಿದರು.

> **ನಿಮ್ಮಲ್ಲಿನ ದೌರ್ಬಲ್ಯಗಳನ್ನೆ ಬಳಸಿಕೊಂಡು ಸಾಮಾಜಿಕ ಜಾಲತಾಣದ ಮೂಲಕ ವಂಚಿಸುವ 'ಡಿಜಿಟಲ್ ಅರೆಸ್ಟ್''ನಂತಹ ಪ್ರಕರಣಗಳಲ್ಲಿ ಸಿಲುಕುವ ಬಹುತೇಕ ಮಂದಿ ಶಿಕ್ಷಣವಂತರೇ ಆಗಿದ್ದಾರೆ. ಯಾವುದೇ ಕಾರಣಕ್ಕೂ ನಿಮ್ಮ ವಾಟ್ಸ್ ಅಪ್, ಫೇಸ್ ಬುಕ್ ಸೇರಿದಂತೆ ಯಾವುದೇ ಸಾಮಾಜಿಕ ಜಾಲತಾಣಗಳ ಮೂಲಕ ಬರುವ ಅನಾಮಧೇಯ 'ಲಿಂಕ್''ಗಳನ್ನು ಬಳಸುವ ಪ್ರಯತ್ನ ಮಾಡಬೇಡಿ.**
> **-ಆರ್.ಎನ್.ಬಿಂದುಮಣಿ, ಕೊಡಗು ಜಿಲ್ಲಾ ಎಸ್ ಪಿ**

ಪ್ರವಾಸಿ ಕೇಂದ್ರವಾಗಿರುವ ಕೊಡಗು ಜಿಲ್ಲೆಯಲ್ಲಿ 'ಹೋಂ ಸ್ಟೇ'' ಉದ್ಯಮ ದೊಡ್ಡ ಪ್ರಮಾಣದಲ್ಲಿದೆ. ಅನುಮತಿ ರಹಿತವಾಗಿ ಹೋಂಸ್ಟೇಗಳನ್ನು ನಡೆಸುತ್ತಿದ್ದಲ್ಲಿ ಅಂತಹವರ ವಿರುದ್ಧ ಕಾನೂನು ಬದ್ಧವಾಗಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಬಿಂದುಮಣಿ ಎಚ್ಚರಿಕೆ ನೀಡಿದರು.

ಕಾರ್ಮಿಕರ ಮಾಹಿತಿ ಒದಗಿಸಿ:ಜಿಲ್ಲೆಯ ತೋಟಗಳಲ್ಲಿ ಕಾರ್ಯ ನಿರ್ವಹಿಸಲು ಹೊರ ಜಿಲ್ಲೆ, ರಾಜ್ಯಗಳಿಂದ ಸಾಕಷ್ಟು ಕಾರ್ಮಿಕರು ಆಗಮಿಸುತ್ತಾರೆ. ಯಾವುದೇ ತೋಟಗಳಲ್ಲಿ ಇಂತಹ ಕಾರ್ಮಿಕರನ್ನು ಇರಿಸಿಕೊಳ್ಳುವ ಸಂದರ್ಭ ಅವರ ಆಧಾರ್‌ಕಾರ್ಡ್ ಸೇರಿದಂತೆ ಅಗತ್ಯ ದಾಖಲೆಗಳನ್ನು ಪರಿಶೀಲಿಸಬೇಕು. ಅವರು ಎಲ್ಲಿಂದ ಬಂದವರೆನ್ನುವುದನ್ನು ಖಚಿತಪಡಿಸಿಕೊಳ್ಳುವುದಲ್ಲದೆ, ಈ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿಯನ್ನು ಒದಗಿಸುವುದು ತೋಟ ಮಾಲೀಕರ ಜವಾಬ್ದಾರಿಯೂ ಆಗಿದೆ ಎಂದರು.

ಮಡಿಕೇರಿ ಸೇರಿದಂತೆ ಜಿಲ್ಲೆಯ ಪಟ್ಟಣ ಪ್ರದೇಶಗಳಲ್ಲಿ ವಾಹನ ನಿಲುಗಡೆ ದೊಡ್ಡ ಸಮಸ್ಯೆಯಾಗಿದೆ. ಈ ಹಿನ್ನೆಲೆಯಲ್ಲಿ ಮಹತ್ತರವಾದ ಬದಲಾವಣೆಗೆ ಚಿಂತನೆಯನ್ನು ನಡೆಸಲಾಗಿದ್ದು, ಇದಕ್ಕೆ ಎಲ್ಲರ ಸಹಕಾರ ಅತ್ಯವಶ್ಯವೆಂದು ಎಸ್ಪಿ ಬಿಂದುಮಣಿ ಮನವಿ ಮಾಡಿದರು.

ಗ್ರಾಮೀಣ ಭಾಗಗಳ ಅಂಗಡಿ ಮುಂಗಟ್ಟುಗಳಲ್ಲಿ ಸಿಗರೇಟ್ ಸೇರಿದಂತೆ ಮಾದಕ ಪದಾರ್ಥಗಳ ಮಾರಾಟ ನಡೆಯುತ್ತಿದೆ. ಇದರಿಂದ ವಿದ್ಯಾರ್ಥಿಗಳು ಹಾದಿ ತಪ್ಪುತ್ತಿದ್ದಾರೆ, ಪ್ರತಿ ಅಂಗಡಿಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವಂತೆ, ಹೊರ ರಾಜ್ಯದ ಕಾರ್ಮಿಕರಿಂದ ಗೋಹತ್ಯೆ, ದರೋಡೆ, ಕಳ್ಳತನ ಪ್ರಕರಣಗಳು ನಡೆಯುತ್ತಿದ್ದು, ಇದನ್ನು ನಿಯಂತ್ರಿಸಬೇಕು, ಪೊಲೀಸ್ ಇಲಾಖೆಯ ಸೈಬರ್‌ವಿಭಾಗಕ್ಕೆ ದೂರು ಸಲ್ಲಿಸಿದಲ್ಲಿ ಸೂಕ್ತ ಸ್ಪಂದನ ದೊರಕುತ್ತಿಲ್ಲ, ಜಿಲ್ಲೆಯಲ್ಲಿ ಅಕ್ರಮ ಬಾಂಗ್ಲಾದೇಶಿಗರಿದ್ದು, ಪೊಲೀಸರು ಅವರ ದಾಖಲಾತಿಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆನ್ನುವ ಒತ್ತಾಯ ಸಾರ್ವಜನಿಕರಿಂದ ಕೇಳಿ ಬಂತು. ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಪಿ.ದಿನೇಶ್ ಕುಮಾರ್,ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

ಡಾ.ಎಂಎನ್‌ಆರ್‌ಗೆ ವಿಷನರಿ ಲೀಡರ್ ಶಿಪ್ ಅವಾರ್ಡ್

ಎಸ್‌ಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರದಾನ | ನಾನಾ ಗಣ್ಯರು ಭಾಗಿ

ಮಂಗಳೂರು: ಮಹಿಳಾ ಸಬಲೀಕರಣದಲ್ಲಿ ಸಲ್ಲಿಸಿದ ಮಹತ್ ಸಾಧನೆಯನ್ನು ಗುರುತಿಸಿ ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ವತಿಯಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ಎಸ್ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಮತ್ತು ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟನ ಸ್ಥಾಪಕ ಟ್ರಸ್ಟಿ ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರಕುಮಾರ್‌ಅವರಿಗೆ 'ವಿಷನರಿ ಲೀಡರ್‌ಪ್ ಅವಾರ್ಡ್ ಇನ್ ವುಮೆನ್ ಎಂಪವರ್‌ಮೆಂಟ್'ನ್ನು ಮಂಗಳವಾರ ಎಸ್ಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಪ್ರದಾನ ಮಾಡಲಾಯಿತು.

ಜನಸಾಮಾನ್ಯರಲ್ಲಿ ಆರ್ಥಿಕಾಭಿವೃದ್ದಿಯ ಛಾಪನ್ನು ಮೂಡಿಸಿರುವ ನವೋದಯ ಸ್ವಸಹಾಯ ಗುಂಪುಗಳ ಕಾರ್ಯ ದಕ್ಷತೆ ಹಾಗೂ ಸಂಘಟನೆಯ ವಿಶೇಷ ಅಧ್ಯಯನಕ್ಕೆ ಅಮೆರಿಕದ ಪ್ರತಿಷ್ಠಿತ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಅಧ್ಯಯನ ತಂಡ ಎಸ್ಸಿಡಿಸಿಸಿ ಬ್ಯಾಂಕಿಗೆ ಮಂಗಳವಾರ ಆಗಮಿಸಿದ್ದು, ಈ ವೇಳೆ ಡಾ.ಎಂ.ಎನ್. ರಾಜೇಂದ್ರಕುಮಾರ್‌ಅವರಿಗೆ ಪ್ರಶಸ್ತಿ ಪ್ರದಾನ ನೆರವೇರಿಸಲಾಯಿತು. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯ ವತಿಯಿಂದ ಪ್ರೊಫೆಸರ್ ಫೆಮಿಡಾ ಹ್ಯಾಂಡಿ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಪ್ರೊ. ಫೆಮಿಡಾ ಹ್ಯಾಂಡಿ, ಡಾ.ಎಂ.ಎನ್.ರಾಜೇಂದ್ರ ಕುಮಾರ್‌ಅವರು ದೇಶದ ವಿವಿಧ ಭಾಗಗಳಲ್ಲಿ ಪ್ರವಾಸ ಮಾಡಿ ನವೋದಯ ಸ್ವಸಹಾಯ ಸಂಘ ಚಳವಳಿಯ ಮೂಲಕ ಹಿಂದುಳಿದ ವರ್ಗಗಳ, ವಿಶೇಷವಾಗಿ ಮಹಿಳೆಯರ ಸಬಲೀಕರಣಕ್ಕಾಗಿ ಅಹೋರಾತ್ರಿ ಶ್ರಮಿಸುತ್ತಿದ್ದಾರೆ. ಸ್ಥಾನಕ್ಕಿಂತ ಪ್ರಭಾವವೇ ನಿಜವಾದ ನಾಯಕತ್ವ ಎಂಬ ನಂಬಿಕೆಯನ್ನು ಅವರ ಜೀವನ ಪ್ರತಿಬಿಂಬಿಸುತ್ತದೆ. ಅಸಂಖ್ಯಾತ ಜನರ ಬದುಕಿಗೆ ಬೆಳಕು ನೀಡಿದ ಅವರ ದೃಷ್ಟಿ, ಕರುಣೆ ಮತ್ತು ಸೇವಾ ಮನೋಭಾವವನ್ನು ಗೌರವಿಸುವ ಸಲುವಾಗಿ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ ಎಂದರು

ಎಸ್ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ, ಕಳೆದ 15 ವರ್ಷಗಳಿಂದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ತಂಡ ಪ್ರೊ. ಫೆಮಿಡಾ ಹ್ಯಾಂಡಿ ಅವರ ನೇತೃತ್ವದಲ್ಲಿ ಎಸ್ಸಿಡಿಸಿಸಿ ಬ್ಯಾಂಕ್ ಹಾಗೂ ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್‌ಗೆ ನಿರಂತರವಾಗಿ ಭೇಟಿ ನೀಡುತ್ತಿದೆ. ಸ್ವಸಹಾಯ ಸಂಘಗಳ ಮೂಲಕ ಜಾರಿಗೊಳಿಸಿರುವ ಮಹಿಳಾ ಸಬಲೀಕರಣ ಹಾಗೂ ಸೂಕ್ಷ್ಮ ಹಣಕಾಸು (ಮೈಕ್ರೋ ಫೈನಾನ್ಸ್) ಮಾದರಿಯ ಯಶಸ್ಸನ್ನು ಅಧ್ಯಯನ ಮಾಡುತ್ತಿದೆ ಎಂದರು. ಅಮೆರಿಕದ ಪ್ರತಿಷ್ಠಿತ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಅಧ್ಯಯನ ತಂಡ ಪ್ರೊಫೆಸರ್‌ಫೆಮಿಡಾ ಹ್ಯಾಂಡಿ , ಪ್ರೊಫೆಸರ್‌ಲ್ಯೂಕಸ್ ವಿನೋದ್ ದೀಕ್ಷಿತ್, ನಿಕೋಲ್, ಅಲೆಸ್ಸಾಂಡ್ರೊ (ಅಲೆಕ್ಸ್), ಅಬಿಗೈಲ್ (ಪ್ರೊಫೆಸರ್‌ಫೆಮಿಡಾ ಅವರ ಬೋಧನಾ ಸಹಾಯಕ), ಬಿಜಾನ್ ಚಾನೆಲ್ ಆಂಡರ್ಸನ್, ಗ್ರೇಸ್ ಕ್ಯಾಂಪ್ಬೆಲ್, ಎಲಿಷಾ ಚೋಯ್, ಎಮ್ಮಾ ಕ್ಲಾರ್ಕ್, ಜೆನ್ನಿ ಬೆತ್, ಕ್ರಿಸ್ಟಾ ಸ್ಮಿತ್, ಮಂಡಿಸಾ ಥಾಮಸ್, ಎಲಿಜಬೆತ್ ರೀಲಿ, ಎಸ್ಸಿಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ , ಬ್ಯಾಂಕ್ ನಿರ್ದೇಶಕರಾದ ಎಂ.ವಾದಿರಾಜ ಶೆಟ್ಟಿ , ಶಶಿಕುಮಾರ್ ರೈ ಬಾಲ್ಯೋಟ್ಟು , ಸದಾಶಿವ ಉಳ್ಳಾಲ್, ಎಸ್.ಬಿ. ಜಯರಾಮ್ ರೈ, ಅಶೋಕ್ ಕುಮಾರ್ ಶೆಟ್ಟಿ, ಎಂ.ಮಹೇಶ್ ಹೆಗ್ಡೆ, ಕೆ.ಜೈರಾಜ್ ಬಿ ರೈ, ರಾಜೇಶ್ ರಾವ್, ಸದಾಶಿವ ಉಳ್ಳಾಲ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್, ನವೋದಯ ಗ್ರಾಮ ವಿಕಾಸ ಚಾರಿಟೇಬಲ್

ಟ್ರಸ್ಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರ್ಣಿಮಾ ಶೆಟ್ಟಿ ಮತ್ತಿತರರಿದ್ದರು.

ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರಕುಮಾರ್‌ಅವರಿಗೆ 'ವಿಷನರಿ ಲೀಡರ್ ಶಿಪ್ ಅವಾರ್ಡ್ ಇನ್ ವುಮೆನ್ ಎಂಪವರ್‌ಮೆಂಟ್'ನ್ನು ಎಸ್ಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಪ್ರದಾನ ಮಾಡಲಾಯಿತು.

ವಿಶ್ವದ ಅಗ್ರಗಣ್ಯ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಪೆನ್ಸಿಲ್ವೇನಿಯಾ

ವಿಶ್ವವಿದ್ಯಾಲಯದ ತಂಡದ ನಿರಂತರ ಭೇಟಿ, ಎಸ್ಸಿಡಿಸಿಸಿ ಬ್ಯಾಂಕ್ ಹಾಗೂ ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್‌ಗಳು ಗ್ರಾಮೀಣ ಮಟ್ಟದಲ್ಲಿ ನಡೆಸುತ್ತಿರುವ ನೈಜ ಹಾಗೂ ಪರಿಣಾಮಕಾರಿ ಕಾರ್ಯಗಳಿಗೆ ದೊರೆತ ಮಹತ್ವದ ಮಾನ್ಯತೆಯಾಗಿದೆ ಎಂದು ಡಾ.ರಾಜೇಂದ್ರ ಕುಮಾರ್‌ಹೇಳಿದರು.

ಹಿಂದುಳಿದ ವರ್ಗಗಳ, ವಿಶೇಷವಾಗಿ ಮಹಿಳೆಯರ ಜೀವನಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಕೈಗೊಂಡಿರುವ ನಮ್ಮ ಮುಂದಾಳತ್ವಗಳನ್ನು ಗುರುತಿಸಿರುವುದಕ್ಕೆ ನಾನು ವಿನಮ್ರನಾಗಿದ್ದೇನೆ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ಭವಿಷ್ಯದಲ್ಲಿ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯ ಹಾಗೂ ಎಸ್ಸಿಡಿಸಿಸಿ ಬ್ಯಾಂಕ್ ನಡುವಿನ ಈ ಶೈಕ್ಷಣಿಕ ಹಾಗೂ ಸಾಮಾಜಿಕ ಸಹಕಾರವನ್ನು ಇನ್ನೂ ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಆಶಯವಿದೆ ಎಂದು ಹೇಳಿದರು.

ರಾಮಕೃಷ್ಣ ಮಿಷನ್ ಅಮೃತ ಮಹೋತ್ಸವ 11ಕ್ಕೆ

ಮಂಗಳೂರು: ನಗರದ ರಾಮಕೃಷ್ಣ ಮಿಷನ್ ತನ್ನ 75ನೇ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದು, ಇದರ ಅಂಗವಾಗಿ ಜ11ರಂದು ಭಕ್ತಿ ಮತ್ತು ಸಂಸ್ಕೃತಿಯ ಸಮ್ಮಿಲನದ ಎರಡು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಮಧ್ಯಾಹ್ನ: ವೀರ ಸನ್ಯಾಸಿ' ತಾಳ ಮದ್ದಳೆ ಮಧ್ಯಾಹ್ನ 1ರಿಂದ 4 ಗಂಟೆಯವರೆಗೆ ರಾಮಕೃಷ್ಣ ಮಠದ ಅಮೃತ ಭವನ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದರ ಜೀವನ ಆಧಾರಿತ ''ವೀರ ಸನ್ಯಾಸಿ'' ಎಂಬ ತಾಳಮದ್ದಳೆ ನಡೆಯಲಿದೆ. ಹಿಮ್ಮೇಳದಲ್ಲಿ ರವಿಚಂದ್ರ ಕನ್ನಡಿಕಟ್ಟೆ ಮತ್ತು ಬಳಗ ಸಾಥ್ ನೀಡಲಿದ್ದು,

ಮುಮ್ಮೇಳದಲ್ಲಿ ವಾಸುದೇವ ರಂಗ ಭಟ್, ಪವನ್ ಕಿರಣ್ ಕೆರೆ ಭಾಗವಹಿಸಲಿದ್ದಾರೆ. ಸಂಜೆ: 'ವಿವೇಕ ಚಿಂತನ' ಮತ್ತು ಪ್ರೇರಣಾದಾಯಿ ಉಪನ್ಯಾಸ ಸಂಜೆ 5 ಗಂಟೆಗೆ ಕಾರ್ಯಕ್ರಮದ ಉದ್ಘಾಟನೆಯನ್ನು ಕ್ಯಾಂಪ್ಕೋ ಅಧ್ಯಕ್ಷ ಸತೀಶ್ಚಂದ್ರ ಎಸ್.ಆರ್. ನೆರವೇರಿಸಲಿದ್ದಾರೆ.

ರಾಮಕೃಷ್ಣ ಮಿಷನ್ನ ಕಾರ್ಯದರ್ಶಿ ಸ್ವಾಮಿ ಜಿತಕಾಮಾನಂದಜಿ ಅಧ್ಯಕ್ಷತೆ ವಹಿಸಲಿದ್ದಾರೆ. ನಂತರ ಸಂಜೆ 5.30 ರಿಂದ 7.30 ರವರೆಗೆ ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರಿಂದ ''ವೀರ ಸನ್ಯಾಸಿ ವಿವೇಕಾನಂದ ಯುಗಪ್ರೇರಕ ಸಂದೇಶ'' ವಿಷಯದ ಕುರಿತು ವಿಶೇಷ ಉಪನ್ಯಾಸ ಹಾಗೂ ಸಂವಾದ ನಡೆಯಲಿದೆ.

ಶಾಸಕ ಬೈರತಿ ನಿರೀಕ್ಷಣಾ ಜಾಮೀನು ರದ್ದಿಗೆ ಮನವಿ

ಜಾಮೀನು ವಿಸ್ತರಣೆ ಮಾಡದಂತೆ ಹೈಕೋರ್ಟ್‌ಗೆ ರಾಜ್ಯ ಸರಕಾರ ತಾಕೀತು

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಮಾಜಿ ಸಚಿವ ಬೈರತಿ ಬಸವರಾಜು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಾಗಿದ್ದು, ಅವರಿಗೆ ಈಗಾಗಲೇ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನನ್ನು ವಿಸ್ತರಣೆ ಮಾಡದಂತೆ ಕೋರಿ ರಾಜ್ಯ ಸರಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಂಧನ ಭೀತಿಯಲ್ಲಿದ್ದ ಬೈರತಿ ಬಸವರಾಜು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ರಜಾ ಕಾಲದ ನ್ಯಾಯಪೀಠ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದ ಮಧ್ಯಂತರ ಆದೇಶ ರದ್ದುಪಡಿಸಬೇಕು ಎಂದು ಕೋರಿ ಸರಕಾರ ಸಲ್ಲಿಸಿದ್ದ ಮನವಿಯನ್ನು ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ, ಮಧ್ಯಂತರ ಜಾಮೀನು ರದ್ದುಕೋರಿ ಆಕ್ಷೇಪಣೆ ಸಲ್ಲಿಸಿದ ಸರಕಾರದ ಪರ ವಕೀಲರು, ಅರ್ಜಿದಾರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಾದ ಅಗತ್ಯವಿದೆ. ಆದ್ದರಿಂದ ಈಗಾಗಲೇ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನು ರದ್ದುಪಡಿಸಬೇಕು ಎಂದು ಕೋರಿದರು. ಇದಕ್ಕೆ ಅರ್ಜಿದಾರರ ಪರ ವಕೀಲರು ಆಕ್ಷೇಪಿಸಿದರು.

ಈ ವೇಳೆ ಪ್ರಾಸಿಕ್ಯೂಷನ್ ವಾದ ಮಾಡಲು ಅವಕಾಶ ನೀಡದೆ ನಿರೀಕ್ಷಣಾ ಜಾಮೀನು ಮಂಜೂರಾದ ಕುರಿತಂತೆ ನ್ಯಾಯಪೀಠ, ಅರ್ಜಿದಾರರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ತನಿಖಾ ವರದಿಯನ್ನು ಪೀಠಕ್ಕೆ ಸಲ್ಲಿಸಿಲ್ಲ ಎಂಬುದಾಗಿ ರಜಾ ಕಾಲದ ಪೀಠ ತನ್ನ ಆದೇಶದಲ್ಲಿ ತಿಳಿಸಿದೆ. ವಿಶೇಷ ಸರಕಾರಿ ಅಭಿಯೋಜಕರು ಹಾಜರಿಲ್ಲದ ವೇಳೆ ಈ ರೀತಿಯಲ್ಲಿ ತಿಳಿಸಲು ಸಾಧ್ಯವೇ? ಪ್ರಾಸಿಕ್ಯೂಷನ್ ಕುರಿತು ಪೂರ್ವಾಗ್ರಹಕ್ಕೊಳಗಾಗಿ ಈ ರೀತಿಯ ಅಭಿಪ್ರಾಯ ವ್ಯಕ್ತಪಡಿಸಬಹುದೇ ಎಂದು ಪ್ರಶ್ನಿಸಿತು.

ಅಲ್ಲದೆ, ಈಗಾಗಲೇ ನಿರೀಕ್ಷಣಾ ಜಾಮೀನನ್ನು ತಿರಸ್ಕರಿಸಿರುವ ಸಂದರ್ಭದಲ್ಲಿ ಮತ್ತೆ ಜಾಮೀನು ನೀಡುವಾಗ ಸರಕಾರದ ಪರ ವಕೀಲರ ವಾದ ಕೇಳುವುದು ಬೇಡವೇ?, ರಜಾ ಕಾಲದ ಪೀಠದಲ್ಲಿ ಜಾಮೀನು ಮಂಜೂರು ಮಾಡುವ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ ಪರ ವಕೀಲರ ವಾದ ಆಲಿಸುವುದಕ್ಕಾಗಿ ವಿಚಾರಣೆಯನ್ನು ಕನಿಷ್ಠ ಮತ್ತೊಂದು ದಿನಕ್ಕೆ ನಿಗದಿ ಮಾಡಬಹುದಾಗಿತ್ತಲ್ಲವೇ? ಅಷ್ಟೊಂದು ಆತುರವಾಗಿ ತರಾತುರಿಯಲ್ಲಿ ಆದೇಶ ಮಾಡುವ ಅಗತ್ಯವೇನಿತ್ತು ಎಂದು ಪೀಠ ಪ್ರಶ್ನಿಸಿತು.

ಮೃಣಾಲ್ ಹೆಬ್ಬಾಳ್ಕರ್ ಕಾರು ಚಾಲಕನಿಗೆ ಚಾಕು ಇರಿತ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ ಕಾರು ಚಾಲಕನ ಮೇಲೆ ದುಷ್ಕರ್ಮಿಗಳು ಚಾಕುವಿನಿಂದ ಇರಿದು ಪರಾರಿಯಾದ ಘಟನೆ ನಗರದ ಕ್ಲಬ್ ರಸ್ತೆಯಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.

ತಾಲೂಕಿನ ಬೆಳಗುಂದಿ ಗ್ರಾಮದ ಕಾರು ಚಾಲಕ ಬಸವಂತ ಕಡೋಲಕರ್ ಚಾಕು ಇರಿತಕ್ಕೆ ಒಳಗಾಗಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಇಬ್ಬರು ದುಷ್ಕರ್ಮಿಗಳು ಬೈಕ್ ಮೇಲೆ ಬಂದು ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಕಾರು ಚಾಲಕನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಘಟನೆ ಕುರಿತು ಪ್ರತಿಕ್ರಿಯೆ ನೀಡಿದ ಗಾಯಾಳು ಬಸವಂತ, ಗೋಜಗಾ ಗ್ರಾಮದ ಶಿವಾ ಪೂಜಾರಿ, ಪರಶುರಾಮ ಹಾಗೂ ಮೋನಪ್ಪಾ ಪೂಜಾರಿ ಎಂಬುವವರು ದಾಳಿ ಮಾಡಿದ್ದಾರೆ. ಮೈನಿಂಗ್ ವಿಚಾರವಾಗಿ ಪದೇ, ಪದೇ ಜಗಳವಾಡುತ್ತಿದ್ದರು ಎಂದು ಹೇಳಿದ್ದಾನೆ. ಹಣಕಾಸಿನ ವಿಚಾರವಾಗಿ ವೈಯಕ್ತಿಕ ಜಗಳ ನಡೆದಿರಬಹುದು ಎಂದು ಹೇಳಲಾಗುತ್ತಿದೆ.

ಸ್ಥಳಕ್ಕೆ ಮೃಣಾಲ್ ಹೆಬ್ಬಾಳ್ಕರ್ ಭೇಟಿ ನೀಡಿ ಗಾಯಾಳು ಆರೋಗ್ಯ ವಿಚಾರಿಸಿದರು. ಪ್ರಕರಣದ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಬ್ಯಾನರ್ ತೆರವು ಮಾಡಿದ್ದೇ ಗಲಭೆಯ ಮೂಲ: ಡಿಕೆಶಿ

← ಮೊದಲ ಪುಟದಿಂದ

ಧಾರ್ಮಿಕವಾಗಿ ಇದನ್ನು ಉದ್ಘಾಟನೆ ಮಾಡಬೇಕು ಎಂಬ ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಇಲಾಖೆಗೆ ನೀಡಲಾಗಿತ್ತು. ಆದರೆ ಅನುಮತಿ ನೀಡುವುದು ಬಾಕಿ ಇತ್ತು. ಅರುಣ್ ಯೋಗಿರಾಜ್ ಅವರು ನಿರ್ಮಿಸಿರುವ ಪುತ್ಥಳಿ ಸ್ವಾಗತಿಸುವ ಕಾರ್ಯಕ್ರಮದಲ್ಲಿ ಎಲ್ಲಾ ಪಕ್ಷದ ನಾಯಕರು ಭಾಗವಹಿಸಿದ್ದರು. ಮೂರು ದಿನಗಳ ಮುಂಚೆ ನಮ್ಮ ಮಿತ್ರ ಶ್ರೀರಾಮುಲು ಅವರು ಇದರ ಅಗತ್ಯವಿಲ್ಲ, ನನ್ನನ್ನು ಕರೆಯಬೇಡಿ ಎಂದು ಹೇಳಿದ್ದರು. ಇದು ಅವರ ವೈಯಕ್ತಿಕ ವಿಚಾರ ಎಂದರು.

ಝಡ್ ಕೆಟಗರಿ ಭದ್ರತೆ ಪಡೆಯಲಿ: ಭದ್ರತಾ ಸಿಬ್ಬಂದಿ ನಡೆ ಸರಿ ಎಂದು ನಾನು ಹೇಳುವುದಿಲ್ಲ. ಕಾನೂನು ಸೂಕ್ತ ಕ್ರಮ ಕೈಗೊಳ್ಳಲಿದೆ. ಪೊಲೀಸ್ ಅಧಿಕಾರಿಗಳು ಸಂಬಂಧಪಟ್ಟವರನ್ನು ಬಂಧಿಸಿದ್ದಾರೆ. ವ್ಯಕ್ತಿಗಳು ಖಾಸಗಿ ಭದ್ರತಾ ಸಿಬ್ಬಂದಿ ಹೊಂದಿರುವ ಬಗ್ಗೆ ಚರ್ಚೆ ಮಾಡಲಾಗುತ್ತಿದೆ. ಶಾಸಕರು ಹಾಗೂ ಸಂಸದರಿಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಜನಾರ್ದನ ರೆಡ್ಡಿ ಕುಟುಂಬಕ್ಕೆ ಐವರು ಭದ್ರತಾ ಸಿಬ್ಬಂದಿಗಳಿದ್ದಾರೆ. ಅವರತಿಗೆ ಝಡ್ ಕೆಟಗೆರಿ ಭದ್ರತೆ ಬೇಕಿದ್ದರೆ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಲಿ. ನಮ್ಮ ಅಭ್ಯಂತರವಿಲ್ಲ ಎಂದು ತಿರುಗೇಟು ನೀಡಿದರು.

ದಾಖಲೆ ಬರೆದ ಬೆನ್ನಲ್ಲೇ ಪೂರ್ಣಾವಧಿಯತ್ತ ಚಿತ್ತ

← ಮೊದಲ ಪುಟದಿಂದ

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ ಅವರು, ದಾಖಲೆಗಳನ್ನು ಮುರಿಯಲೆಂದು ರಾಜಕೀಯ ಮಾಡಿಲ್ಲ. ಈ ದಾಖಲೆ ಕಾಕತಾಳೀಯ. ದೇವರಾಜ ಅರಸು ಅವರು ಎಷ್ಟು ವರ್ಷ ಆಡಳಿತ ಮಾಡಿದ್ದಾರೆಂದು ತಿಳಿದಿರಲಿಲ್ಲ. ಜನರ ಆಶೀರ್ವಾದದಿಂದ ದೇವರಾಜ ಅರಸು ಅವರ ದಾಖಲೆಯನ್ನು ಮುರಿಯಲು ಸಾಧ್ಯವಾಗಿದೆ. ದೇವರಾಜ ಅರಸು ಹಾಗೂ ನಾನು ಮೈಸೂರಿನವರೇ. ಇಬ್ಬರೂ ದೀರ್ಘಾವಧಿ ಮುಖ್ಯಮಂತ್ರಿಗಳಾಗಿದ್ದು, ಕಾಲಘಟ್ಟ ಬೇರೆ ಬೇರೆ. ದೇವರಾಜ ಅರಸು ಅವರು 1972 ರಿಂದ 80ವರೆಗೆ ಮುಖ್ಯಮಂತ್ರಿಯಾಗಿದ್ದರು. ನಾನು ಎರಡನೇ ಅವಧಿಗೆ ಸಿಎಂ ಆಗಿದ್ದೇನೆ ಎಂದರು.

ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಮುಗಿಸುತ್ತೀರಾ ಎಂಬ ಮಾಧ್ಯಮಗಳ ಪ್ರಶ್ನೆಗೆ, ಈ ಕುರಿತು ಪಕ್ಷದ ವರಿಷ್ಠರು ತೀರ್ಮಾನಿಸಬೇಕಿದೆ. ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಮುಗಿಸುವ ವಿಶ್ವಾಸವಿದೆ ಎಂದರು. ಇದೇ ವೇಳೆ ಸಂಪುಟ ಪುನಾರಚನೆ ಬಗ್ಗೆ ದೆಹಲಿಯಿಂದ ಕರೆ ಬಂದಾಗ ಮಾತನಾಡುವುದಾಗಿ ಸಿಎಂ ತಿಳಿಸಿದರು.

ಆಲ್ ದಿ ಬೆಸ್ಟ್ ಎಂದ ಡಿಕೆ

ಇನ್ನು ಸಿದ್ದರಾಮಯ್ಯ ಅವರು ದಾಖಲೆ ಬರೆದಿರುವುದಕ್ಕೆ ಪ್ರತಿಕ್ರಿಯಿಸಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರು ದೀರ್ಘಾವಧಿ ಆಡಳಿತ ಮಾಡಿದ ದಾಖಲೆ ಬರೆಯುತ್ತಿದ್ದಾರೆ. ಇದು ಬಹಳ ಸಂತೋಷದ ವಿಷಯ. ನಮಗೆ, ನಿಮಗೆ ಎಲ್ಲರಿಗೂ ಸಂತೋಷದ ವಿಚಾರ. ನೀವು(ಮಾಧ್ಯಮ) ಈ ಬಗ್ಗೆ ಉತ್ತಮವಾಗಿ ಪ್ರಚಾರ ಮಾಡಿ. ನಾನು ಅವರಿಗೆ ತುಂಬು ಹೃದಯದಿಂದ ಶುಭ ಹಾರೈಸುತ್ತೇನೆ. ಜೀವನದಲ್ಲಿ ಸಾಧನೆ ಮಾಡಬೇಕು ಎಂಬ ಬಯಕೆ ಎಲ್ಲರಿಗೂ ಇರುತ್ತದೆ. ನಮ್ಮ ಮುಖ್ಯಮಂತ್ರಿಗಳು ಇತಿಹಾಸದ ಪುಟಕ್ಕೆ ಹಿಂದೆಯೂ ಸೇರಿದ್ದಾರೆ, ಮುಂದೆಯೂ ಸೇರುತ್ತಾರೆ ಎಂದರು. ಇದರಿಂದ ನಿಮ್ಮ ಹಾದಿ ಸುಗಮವಾಗುತ್ತದೆಯೇ ಎನ್ನುವ ಪ್ರಶ್ನಿಸಿ, ಹಳ್ಳಿಯಿಂದ ಬಂದ ನಾನು ಇಲ್ಲಿಯವರೆಗೂ ತಲುಪಿದ್ದೇನೆ. ಇದಕ್ಕಿಂತ ಇನ್ನೇನು ಬೇಕು ನನಗೆ. ಯಾವುದನ್ನೂ ಹುಡುಕಿಕೊಂಡು ಹೋಗುವ ಅವಶ್ಯಕತೆ ಇಲ್ಲ. ನನ್ನ ಬಾಯಲ್ಲಿ ಏನೇನೋ ಮಾತನಾಡಿಸಲು ಪ್ರಯತ್ನಿಸಬೇಡಿ ಎಂದರು.

ಹೊಸ ನಾಯಕತ್ವಕ್ಕೆ ಅವಕಾಶ ಕೊಡಬೇಕು

ಸಿದ್ದರಾಮಯ್ಯ ಅವರು ಅರಸು ದಾಖಲೆ ಮುರಿದಿರುವ ಬಗ್ಗೆ ಮಾತನಾಡುವ ಜತೆಗೆ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಪರೋಕ್ಷವಾಗಿ ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಪ್ರತಿಕ್ರಿಯಿಸಿದ್ದಾರೆ. ಈ ಬಗ್ಗೆ ಮಾತನಾಡಿದ ಬಾಲಕೃಷ್ಣ, ಸಿದ್ದರಾಮಯ್ಯ ದಾಖಲೆ ಬರೆದಿದ್ದಾರೆ. ಅವರ ಆಡಳಿತದ ಬಗ್ಗೆ ಚರ್ಚೆ ಅವಶ್ಯಕತೆಯಿಲ್ಲ. ಅವರ ಆಡಳಿತದ ಬಗ್ಗೆ ಯಾರೂ ಪ್ರಶ್ನೆ ಮಾಡಲ್ಲ. ಅವರು ದಾಖಲೆ ಬರೆದಿದ್ದಾಯಿತು. ಹೊಸ ನಾಯಕತ್ವಕ್ಕೆ ಅವಕಾಶ ಮಾಡಿಕೊಡುತ್ತಾರೆ. ಅಂತಹ ವಿಶ್ವಾಸ ನಮಗಿದೆ. ಮುಂದಿನ ನಾಯಕತ್ವ ಬೆಳೆಸುತ್ತಾರೆಂಬ ವಿಶ್ವಾಸವಿದೆ. ಹೈಕಮಾಂಡ್ ಸುಮ್ಮನೆ ಕುಳಿತಿಲ್ಲ. ಹೈಕಮಾಂಡ್ ಸುಮ್ನೆ ಇದೆ ಅಂತ ನಿಮಗ್ಯಾರು ಹೇಳಿದ್ರು. ಸಿದ್ದರಾಮಯ್ಯ ಆಡಳಿತ ಮೆಚ್ಚಿಯೇ ಜನ ವೋಟು ಕೊಟ್ಟಿದ್ದು. ಹೈಕಮಾಂಡ್ ಸಾಧಕ ಬಾಧಕ ಬಗ್ಗೆ ಚರ್ಚೆ ನಡೆಸುತ್ತಿದೆ ಎಂದರು.

ಕರ್ತವ್ಯಕ್ಕೆ ಅಡ್ಡಿ: ಕ್ರೀಡಾಪಟು ವಿರುದ್ಧ ಕೇಸ್

ಯಾದಗಿರಿ: ಇಲ್ಲಿನ ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿಗೆ ಆಗ್ರಹಿಸಿ ಡಿಸಿ ಕಚೇರಿ ಎದುರು ನಡೆದಿದ್ದ ಪ್ರತಿಭಟನೆ ವೇಳೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ಖೇಲೋ ಇಂಡಿಯಾ ಖ್ಯಾತಿಯ ಕ್ರೀಡಾಪಟು ಲೋಕೇಶ್ ರಾಠೋಡ್ ಹಾಗೂ ಪುನೀತ್ ರಾಜ್ ಕಾಮತಗಿ ಮೇಲೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಲ್ಯಾಣ ಕರ್ನಾಟಕ ಯೂತ್ ಅಸೋಸಿಯೇಷನ್ ಸಂಘಟನೆ ವತಿಯಿಂದ ಪುನೀತ್ ರಾಜ್ ಕಾಮತಗಿ ಅವರ ನೇತೃತ್ವದಲ್ಲಿ ಸೋಮವಾರ 1820 ಮಂದಿ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿ ಗೇಟ್ ಬಳಿ ಆಗಮಿಸಿದರು. ಶಾಂತಿವಾಗಿ ಪ್ರತಿಭಟನೆ ನಡೆಸುವಂತೆ ಪೊಲೀಸರು ಸೂಚಿಸಿದರೂ, ಪ್ರತಿಭಟನಾಕಾರರು ಪೊಲೀಸರ ವಿರುದ್ಧ ಧಿಕ್ಕಾರ ಕೂಗಿ, ಬಲವಂತವಾಗಿ ಗೇಟ್ ತೆರೆಯಿಸಿ ಕಚೇರಿಯ ಮುಖ್ಯ ದ್ವಾರಕ್ಕೆ ನುಗ್ಗಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಇದರಿಂದ ಸಾರ್ವಜನಿಕರು ಹಾಗೂ ಸರಕಾರಿ ನೌಕರರಿಗೆ ಕಚೇರಿಗೆ ತೆರಳಲು ಅಡಚಣೆ ಉಂಟಾಯಿತು ಎನ್ನಲಾಗಿದೆ.

ಮಧ್ಯಾಹ್ನ 1.20ರ ಸುಮಾರಿಗೆ ಜಿಲ್ಲಾಧಿಕಾರಿಗಳು ಪ್ರತಿಭಟನಾಕಾರರ ಮನವಿ ಸ್ವೀಕರಿಸಲು ಮುಂದಾದಾಗ, ಅವರಿಗೆ ವಿರೋಧವಾಗಿ ಮಾತನಾಡಿ ಮನವಿ ನೀಡದೆ ಪ್ರತಿಭಟನೆ ಮುಂದುವರಿಸಲಾಗಿದೆ.

ಈ ವೇಳೆ ಪುನೀತ್ ರಾಜ್ ಕಾಮತಗಿ ಅವರು ಒಬ್ಬ ಯುವಕನಿಗೆ ಹಣ ನೀಡಿ ಪೆಟ್ರೋಲ್‌ತರಿಸಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿ ಜಿಲ್ಲಾಧಿಕಾರಿಗಳಿಗೆ ಬೆದರಿಕೆ ಹಾಕಿದ್ದಾರೆ ಹಾಗೂ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ ಎಂಬ ಆರೋಪವೂ ಮಾಡಲಾಗಿದೆ.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/105/2025–26 ದಿನಾಂಕ: 05–01–2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಮಂಟನಕುರ್ಚಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಅಶೋಕ್. ಎಂ.ಕೆ ಬಿನ್ ಕಾಡಯ್ಯ	ನೆಲಮಂಗಲ / ಕಸಬಾ / ಮಂಟನಕುರ್ಚಿ	211/3	04-35 (00–01 ಗುಂಟೆ 'ಎ' ಖರಾಬು)	ವ್ಯವಸಾಯ	ವಸತಿ
		211/4	04-35 (00–01 ಗುಂಟೆ 'ಎ' ಖರಾಬು)		

ಷರಾ:– ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/4887/ಅಡ್ವರ್ಟೋ/2025–26

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123
ಇ–ಮೇಲ್: nelamangala.pa@gmail.com Phone No: 96630 46622

ಸಂಖ್ಯೆ: ನೆಯೋಪ್ರಾ: CLU:97:2025-26 ದಿನಾಂಕ: 05–01–2026

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ:13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಹನುಮಂತಪುರ** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ಗ್ರಾಮ	ಸ.ನಂ	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಡಿ.ಹೆಚ್.ಬೈರೇಗೌಡ ಬಿನ್ ಲೇಟ್ ಈ. ಹನುಮಂತಯ್ಯ	ನೆಲಮಂಗಲ, ಸೋಂಪುರ, ಹನುಮಂತಪುರ	25/3ಎ1	00–23½	ವ್ಯವಸಾಯ	ಕೈಗಾರಿಕೆ
			25/4	00–04		
2	ಶ್ರೀಮತಿ ಎ.ಶೋಭ ಕೋಂ ಡಿ.ಹೆಚ್.ಬೈರೇಗೌಡ		25/5	00–19½		

ಷರಾ:– ಪ್ರಶ್ನಿತ ಜಮೀನುಗಳಲ್ಲಿ **ಕೈಗಾರಿಕೆ** ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **"ವ್ಯವಸಾಯ** ವಲಯದಿಂದ **ಕೈಗಾರಿಕೆ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾ.ಸಾ.ಸಂ.ಇ/ವಾಪ್ರ/4880/ಆಕಾರ್/2025–26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ 1994" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ ರಾಜ್ಯ ಫೋನ್: (0831)2405468 ಫ್ಯಾಕ್ಸ್: (0831)2405467

ಉಲ್ಲೇಖ : ವಿತಾವಿ/ಆ.ಸ./2025–26/788 ದಿನಾಂಕ: 05–01–2026

ಅಧಿಸೂಚನೆ

ವಿಷಯ :ವಿ.ತಾ.ವಿ.ಯ ಇಪ್ಪತ್ತೈದನೇಯ ವಾರ್ಷಿಕ ಘಟಿಕೋತ್ಸವ (ಭಾಗ–II) ಸಮಾರಂಭ – ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ತೈದನೇಯ ಘಟಿಕೋತ್ಸವ (ಭಾಗ–II) ಸಮಾರಂಭವು, ಸೋಮವಾರ, ದಿನಾಂಕ 02 ಫೆಬ್ರುವರಿ, 2026ರಂದು, ಪೂರ್ವಾಹ್ನ 11–30 ಗಂಟೆಗೆ ವಿ.ತಾವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಪ್ರೇಕ್ಷಾಗೃಹ, "ಜ್ಞಾನ ಸಂಗಮ", ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಈ ಘಟಿಕೋತ್ಸವ ಸಮಾರಂಭದಲ್ಲಿ 2024–25ನೇ ಸಾಲಿನ ಸ್ನಾತಕೋತ್ತರ (PG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ್‍ಯಾಂಕ್ ವಿಜೇತರಿಗೆ ಮತ್ತು ಪಿಹೆಚ್.ಡಿ. ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು.
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು.
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರಲು ಸಲಹೆ ನೀಡಲಾಗಿದೆ.
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು.
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು.
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು.
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು.
* ಕುಲಸಚಿವರು (ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು.

ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಮಾರನೇಯ ದಿನ, ಅಂದರೆ ದಿ: 03–02–2026 ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ತೋರಿಸಿ ವಿ.ತಾ.ವಿ.ಯ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು. ಇನ್ನುಳಿದ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ. ಪ್ರಸಾದ ಬಿ. ರಾಂಪುರೆ)
ಕುಲಸಚಿವರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾರ್ಯಪಾಲಕ ಅಭಿಯಂತರರವರ ವಿಭಾಗ, ಕಛೇರಿ ಕೋಟೆ, ಬಳ್ಳಾರಿ–583 102.

ದೂರವಾಣಿ: 08392 267762 Email: eekwbbellary@gmail.com

ಟೆಂಡರ್ ಪ್ರಕಟಣೆ

ಬಿಡ್ ದಾಖಲೆಯಲ್ಲಿ ವಿವರಿಸಲಾದ ಅರ್ಹತಾ ಅವಶ್ಯಕತೆಗಳನ್ನು ಪೂರೈಸುವ ಗುತ್ತಿಗೆದಾರರು/ಫರ್ಮ್ಸ್ ರವರಿಂದ ಕೆಳಕಂಡ ಕಾಮಗಾರಿಯ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಮತ್ತು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **(https://kppp.karnataka.gov.in)** ನಲ್ಲಿ ಪಡೆಯಬಹುದಾಗಿರುತ್ತದೆ.

ಕೆ.ಪಿ.ಪಿ. ಪೋರ್ಟಲ್ ಇಂಡೆಂಟ್ ನಂ.: 1.KUWSDB/2025-26/WS/WORK_INDENT406/Call-4. **ಟೆಂಡರ್‌ಗಿಟ್ಟ ಮೊತ್ತ ರೂ. (ಜಿಎಸ್‌ಟಿ ಹೊರತುಪಡಿಸಿ):** 67,34,051–00. **ಇಎಂಡಿ ಮೊತ್ತ ರೂ:** 1,35,000–00. **ಟೆಂಡರ್ ಅವಧಿ:** 06 ತಿಂಗಳು. 2.KUWSDB/2025-26/EL/WORK_ INDENT412//Call-3. **ಟೆಂಡರ್‌ಗಿಟ್ಟ ಮೊತ್ತ ರೂ. (ಜಿಎಸ್‌ಟಿ ಹೊರತುಪಡಿಸಿ):** 20,08,412–00. **ಇಎಂಡಿ ಮೊತ್ತ ರೂ:** 50,000–00. **ಟೆಂಡರ್ ಅವಧಿ:** 03 ತಿಂಗಳು

ಸಹಿ/–ಕಾರ್ಯಪಾಲಕ ಅಭಿಯಂತರರು
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/873/ಕೆಎಸ್‌ಎಂಸಿಎ/2025–26

ನೆಫ್ರೋ–ಯುರಾಲಜಿ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ. ನೋಂ. ಸಂ.1052/03–04)
(ಉನ್ನತ ವೈದ್ಯಕೀಯ ವಿಜ್ಞಾನದ ಒಂದು ಸ್ನಾತಕೋತ್ತರ ಸಂಸ್ಥೆ, ರಾಜೀವ್‌ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇದರ ಅಂಗಸಂಸ್ಥೆಯಾಗಿದ್ದು ಭಾರತೀಯ ವೈದ್ಯಕೀಯ ಪರಿಷತ್ತಿನೊಂದಿಗೆ ಗುರುತಿಸಿಕೊಂಡಿದೆ) ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560 002.
ಇ–ಮೇಲ್: nephrourology.institute@gmail.com ವೆಬ್‌ಸೈಟ್ www.nephrourology.in
ದೂರವಾಣಿ: 080–26700460 ಫ್ಯಾಕ್ಸ್: 080–26706777

H-2025-1631

ಸಂಖ್ಯೆ: ನೆಯುಸಂ/ಟೆಂಡರ್/ಎಂವೈಡಿಎಸ್/11/2025–26 ದಿನಾಂಕ: 05.01.2026

ಟೆಂಡರ್ ಪ್ರಕಟಣೆ

ನೆಫ್ರೋ–ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560 002. ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1. Procurement of Drugs, Disposables, Sutures and Misc., Items for Institute of Nephro-Urololgy Unit, Mysore **(Call-II)**.

Last Date For Online Submission of Tender is **03.02.2026 at 5.30 P.M**

ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ **https://kppp.karnataka.gov.in** ದಲ್ಲಿ ಪಡೆದುಕೊಳ್ಳಬಹುದು.

ಸೂಚನೆ: ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ (further information and announcements) ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ **https://nephrourology.karnataka.gov.in** ದಲ್ಲಿ ವೀಕ್ಷಿಸಬಹುದು.

ಸಹಿ/– ನಿರ್ದೇಶಕರು, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು.

ಕರ್ನಾಟಕ ಸರ್ಕಾರ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.

ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂಡರ್/2025–26/2186
ದಿನಾಂಕ:–6/1/2026

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

("ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗದ 2025–26ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿ ವಿಶೇಷ ಯೋಜನೆಯಡಿ ಮೂಲಭೂತ ಸೌಕರ್ಯ ಅಭಿವೃದ್ಧಿಯೋಜನೆ ಮತ್ತು ಇತರೆ ವಿವಿದಲೆಕ್ಕ ಶೀರ್ಷಿಕೆ ಯೋಜನೆಯಡಿಲ್ಲಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪೊಕ್ಯೂರ್‌ಮೆಂಟ್ ಇಂಡೆಂಟ್ ನಂ: 20933, 20934, 20938, 21752, 21749, 22579, 22580, 22,657, 22660, 22661, 22664, 22667, 22668, 22671, 22673, 22675, 22676, 22679, 22681, 22682, 22684, 22686, 22688, 22743, 22745, 22747 & 22640 ಮುಖಾಂತರ ಐಟಂವಾರು ಏಕ & ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ–1,2 & 3ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ: 27 ಟೆಂಡರ್‌ಗಿಟ್ಟ ಮೊತ್ತ ರೂ.6.70 ಲಕ್ಷಗಳಿಂದ 83.90 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಸ್ವರೂಪ ಕಟ್ಟಡ ನಿರ್ಮಾಣ ಮತ್ತು ಚರಂಡಿ ಹಾಗೂ ರಸ್ತೆ ಕಾಮಗಾರಿಗಳು. ಟೆಂಡರ್ ಫಾರಂಗಳನ್ನು ದಿನಾಂಕ: 6/1/2026 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 14/1/2026 ಸಂಜೆ 5.00 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/624/ ಕೆಎಸ್‌ಎಂಸಿಎ/2025–26

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ

ಪೊಲೀಸ್ ಅಧೀಕ್ಷಕರ ಕಛೇರಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ

E-mail ID: spkwr@ksp.gov.in & storeskwr@ksp.gov.in

ಸಂಖ್ಯೆ: ಸಂಗ್ರಹ/ರಸ್ತೆ ಸುರಕ್ಷತೆ/303(2)/2025–26 ದಿನಾಂಕ: 05–01–2026

ಇ–ಟೆಂಡರ್ ನೋಟಿಸ್

ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಘಟಕಕ್ಕೆ ಅವಶ್ಯಕವಿರುವ ರಸ್ತೆ ಸಂಚಾರ ಮತ್ತು ಸುರಕ್ಷತಾ ಸಾಮಗ್ರಿಯಾದ **Body Worn Cameras With Docking Station** ನ್ನು ಸರಬರಾಜು ಮಾಡುವ ಕುರಿತು ಕೆ.ಟಿ.ಪಿ.ಪಿ ಕಾಯ್ದೆ–1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ **(www.kppp.karnataka.gov.in)** ಇ–ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿ ಲಕೋಟೆ ಪದ್ದತಿಯಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್ ಸಂಕ್ಷಿಪ್ತ ವಿವರ: (1) ಟೆಂಡರ್ ಅಧಿಸೂಚನೆ ಸಂಖ್ಯೆ: **No:Store/Road Safety/303(2)2025-26** (2) ಟೆಂಡರ್ ಅಧಿಸೂಚನೆ ದಿನಾಂಕ: **03–01–2026** (3) ಟೆಂಡರ್ ಮೊತ್ತ: **23.23 Lakhs** (4) ಟೆಂಡರ್‌ನ ಪೂರ್ವ ಸಭೆಯ ದಿನಾಂಕ & ಸಮಯ: **09-01-2026 11:30Hrs** (5) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **17-01-2026 17:30 Hrs** (6) ಟೆಂಡರ್ ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **19-01-2026 17:30 Hrs** (7) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **21-01-2026 17:30 Hrs** (8) **EMD ಮೊತ್ತ: 58,000/–** (9) ಟೆಂಡರ್‌ನ ಪೂರ್ವ ಸಭೆಯ ವಿಳಾಸ: ಜಿಲ್ಲಾ ಪೊಲೀಸ್ ಕಛೇರಿ, ಎಮ್.ಜಿ ರೋಡ್ ಕಾಜುಬಾಗ, ಕಾರವಾರ. ಉತ್ತರ ಕನ್ನಡ ಜಿಲ್ಲೆ, 581 301

ರಸ್ತೆ ಸಂಚಾರ ಮತ್ತು ಸುರಕ್ಷತಾ ಸಾಮಗ್ರಿಯಾದ **Body Worn Cameras With Docking Station** ನ್ನು ಸರಬರಾಜು ಮಾಡಲು ಇಚ್ಛಿಸುವವರು ಇ–ಖರೀದಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ–ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ–ಖರೀದಿ ಫ್ಲಾಟ್ ಫಾರಂನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ **www.kppp.karnataka.gov.in** ಅಥವಾ ಜಿಲ್ಲಾ ಪೊಲೀಸ್ ಕಛೇರಿಯ ದೂರವಾಣಿ ಸಂಖ್ಯೆ: 08382–226307 ಗೆ ಸಂಪರ್ಕಿಸಬಹುದು.

ಸಹಿ/– ಅಧ್ಯಕ್ಷರು ಹಾಗೂ ಪೊಲೀಸ್ ಅಧೀಕ್ಷಕರು.
ಟೆಂಡರ್ ಆಹ್ವಾನ ಸಮಿತಿ, ಉತ್ತರ ಕನ್ನಡ ಜಿಲ್ಲೆ, ಕಾರವಾರ.

DIPR/KWR/KSMCA/920/ 25-26 Dt.06.01.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಘಟಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ–2 ಜಮಖಂಡಿ,

ಸಂ: ಘ.ಎ.ದಂ.ಕಾ./ವಿ–2/ಪಿಬಿ/2025–26/1245 & 1246 ದಿನಾಂಕ: 03.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕರ್ನಾಟಕ ಸರಕಾರದ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರರು, ಜಿಎಲ್‌ಬಿಸಿ ವಿಭಾಗ ನಂ. 2 ಜಮಖಂಡಿ ಕಚೇರಿ ವ್ಯಾಪ್ತಿಯಲ್ಲಿ Standard Tender Document / Works / (KW- 1 & KW- 2) ಏಕ ಲಕೋಟೆ ಪದ್ಧತಿಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಗಿನಂತೆ ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	KNNL/2025-26/CN/WORK_INDENT 3758	19.48
2	KNNL/2025-26/CN/WORK_INDENT 3752	4.23
3	KNNL/2025-26/CN/WORK_INDENT 3759	6.77
4	KNNL/2025-26/CN/WORK_INDENT 3760	16.94
5	KNNL/2025-26/OW/WORK_INDENT 3416 Call-2	4.85
6	KNNL/2025-26/BD/WORK_INDENT 3410 Call-2	8.46
7	KNNL/2025-26/IW/WORK_INDENT 3787	34.71
8	KNNL/2025-26/IW/WORK_INDENT 3788	22.86
9	KNNL/2025-26/IW/WORK_INDENT 3785	5.93
10	KNNL/2025-26/OW/WORK_INDENT 3700	8.47
11	KNNL/2025-26/IW/WORK_INDENT 3786	12.70

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ KPP Portal ನಲ್ಲಿಇರುವಂತೆ. 2. ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 14.01.2026 [17.30 ಗಂಟೆಗೆ]. 3. KPP Portal ಮುಖಾಂತರ ತಾಂತ್ರಿಕ ಬಿಡ್ / ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.01.2026 [11.00 ಗಂಟೆಗೆ].

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು KPP Portal ನಲ್ಲಿ ನೊಡಿಕೊಳ್ಳಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
ಘ.ಎ.ದಂ ಕಾಲುವೆ ವಿಭಾಗ ನಂ–2, ಜಮಖಂಡಿ

DIPR/BGK/RO-NO-491/KSMCA/2025-26

ಸಾಮಾಜಿಕ ನ್ಯಾಯದ ನವಪರ್ವ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಕೀಯ ಪ್ರವೇಶಿಸುವ ನೂರು ಜನರಲ್ಲಿ ಜನಪ್ರತಿನಿಧಿ ಎನ್ನುವ 'ಗೌರವ' ಸಿಗುವುದು ಕೆಲವೇ ಕೆಲವರಿಗೆ ಮಾತ್ರ. ಈ ರೀತಿಯ ಗೌರವ ಪಡೆಯುವ ಜತೆಗೆ ಮುತ್ಸದ್ದಿ ರಾಜಕಾರಣಿಯಾಗಿ ಬೆಳೆಯುವುದು ತೀರಾ ಬೆರಳೆಣಿಕೆಯಷ್ಟು ಮಂದಿ. ಮುತ್ಸದ್ದಿತನ ಸಿಗುವುದು ಅಧಿಕಾರವಿದ್ದಾಗ ಹೇಗೆ ನಡೆದುಕೊಂಡರು ಎನ್ನುವುದಕ್ಕಿಂತ ಅಧಿಕಾರ ಮೀರಿ ಜನರೊಂದಿಗೆ ಹೇಗೆ ಬೆರೆತರು, ರಾಜ್ಯಕ್ಕೆ, ದೇಶಕ್ಕೆ ನೀಡಿದ ಕೊಡುಗೆ ಏನು ಎನ್ನುವುದರ ಆಧಾರದಲ್ಲಿ ನಿರ್ಧಾರವಾಗುತ್ತದೆ.

ಕರ್ನಾಟಕದಲ್ಲಿರುವ ಇಂತಹ ಮುತ್ಸದ್ದಿ ರಾಜಕಾರಣಿಗಳ ಪಟ್ಟಿ ಮಾಡುವ ಸಮಯದಲ್ಲಿ ಸಿಗುವ ಮೊದಲ ಹೆಸರು ದೇವರಾಜ ಅರಸು! ಅರಸು ಮುಖ್ಯಮಂತ್ರಿಯಾಗಿ ಆಳ್ವಿಕೆ ನಡೆಸಿ ದಶಕಗಳೇ ಕಳೆದರೂ, ಈಗಲೂ ಸಮಾಜಕ್ಕೆ, ಹಿಂದುಳಿದವರಿಗೆ ಅರಸು ನೀಡಿದ ಕೊಡುಗೆಯನ್ನು ಜನ ಮರೆತಿಲ್ಲ. ಅರಸು ಪರಂಪರೆಯ ಚಿಂತನೆಯನ್ನು ಹೊತ್ತು ಸಾಗಿದ ಮತ್ತೊಬ್ಬ ಮುತ್ಸದ್ದಿ ಎಂದರೆ ಅದು ಸಿದ್ದರಾಮಯ್ಯ. ಈ ಕಾರಣಕ್ಕಾಗಿಯೇ ಇಬ್ಬರೂ ನಾಯಕರು ಒಂದು ಕ್ಷೇತ್ರ, ಜಿಲ್ಲೆ ಅಥವಾ ಪ್ರಾಂತ್ಯಕ್ಕೆ ಸೀಮಿತವಾಗದೇ ಇಡೀ ರಾಜ್ಯದ 'ಮಾಸ್ ಲೀಡರ್' ಆಗಿ ಕಾಣಿಸಿಕೊಂಡರು.

ದಶಕಗಳ ಕಾಲ ಸಾರ್ವಜನಿಕ ಜೀವನದಲ್ಲಿ ಸಿದ್ದರಾಮಯ್ಯ ಅವರು ಸವೆದಿದ್ದಾರೆ. ಈ ಅವಧಿಯಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಆಡಳಿತದಲ್ಲಿ ಹತ್ತಾರು ಬದಲಾವಣೆಗಳಾಗಿವೆ. ಆದರೆ ಈಗಲೂ ಸಿದ್ದರಾಮಯ್ಯ ಅವರು 'ಪ್ರಸ್ತುತ' ಎನಿಸಲು, 'ಮಾಸ್ ಲೀಡರ್' ಆಗಿ ಈಗಲೂ ರಾಜ್ಯಾದ್ಯಂತ ಹೆಸರು ಮಾಡಲು ಅವರ ವ್ಯಕ್ತಿತ್ವವೇ ಕಾರಣ. ನಾಡಿದ ಜನರ ಮನ ಗೆದ್ದಿರುವ ಸಿದ್ದರಾಮಯ್ಯ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ತಮ್ಮದೇಯಾದ ಛಾಪನ್ನು ಮೂಡಿಸಿದ್ದಾರೆ.

70–80ರ ದಶಕದಲ್ಲಿ ಕರ್ನಾಟಕದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು, ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕೈಗೊಂಡ ಕಾರ್ಯ ನೋಡಿಕೊಂಡು ಹಾಗೂ ಅರಸು ಅವರ ಸಾಮಾಜಿಕ ನ್ಯಾಯದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಈ ದಶಕದ ಹಾದಿಯಲ್ಲಿ ಸಾಕಷ್ಟು ಏಳುಬೀಳು ಬಂದರೂ ಎಂದಿಗೂ ತಮ್ಮ ತತ್ವ ಸಿದ್ಧಾಂತದಲ್ಲಿ ರಾಜಿಯಾಗದೇ ಸಾಗಿದ್ದರಿಂದಲೇ ಇಂದು 'ಸುದೀರ್ಘ ಮುಖ್ಯಮಂತ್ರಿ' ಎನ್ನುವ ದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ.

ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಈ ದಾಖಲೆಯನ್ನು ಮುರಿಯಲು 'ಕಷ್ಟಸಾಧ್ಯ' ಎನ್ನುವುದು ಗೊತ್ತಿದ್ದರೂ, ಸಿದ್ದರಾಮಯ್ಯ ಎಂದಿಗೂ ಈ ವಿಷಯದಲ್ಲಿ ಹಮ್ಮು ಪಟ್ಟಿಲ್ಲ. ಮೈಸೂರಿನಲ್ಲಿ ಸೋಮವಾರ ಮಾತನಾಡುವಾಗಲೂ, 'ಜನರ ಆಶೀರ್ವಾದದಿಂದ ಇದು ಸಾಧ್ಯವಾಗಿದೆ. ದಾಖಲೆಗಳು ಮುರಿಯಲೆಂದೇ ನಿರ್ಮಾಣವಾಗುತ್ತವೆ. ಪ್ರಸ್ತುತ ನಾನು ಪೂರೈಸಲಿರುವ ಅವಧಿಯನ್ನು ಮೀರಲಿರುವ ಮತ್ತೊಬ್ಬ ನಾಯಕರೂ ಬರಬಹುದು. ನನಗಿಂತ ಹೆಚ್ಚಿನ ಬಾರಿ ಬಜೆಟ್ ಮಂಡಿಸುವ ನಾಯಕರೂ ಮುಂದೆ ಬರಬಹುದು' ಎನ್ನುವ ಮೂಲಕ ತಾವೆಂದಿಗೂ ಈ ದಾಖಲೆಗಳನ್ನು ಹೆಚ್ಚು ನಂಬಿಲ್ಲ ಎನ್ನುವ ಸ್ಪಷ್ಟ ಸಂದೇಶವನ್ನು ರವಾನಿಸಿದರು.

ರಾಜ್ಯದಲ್ಲಿ ಸಾಮಾಜಿಕ ಬದಲಾವಣೆಯ ಹರಿಕಾರ ಎನಿಸಿಕೊಂಡಿದ್ದ ಡಿ. ದೇವರಾಜ ಅರಸು ಎರಡು ಅವಧಿಗಳಲ್ಲಿ ಒಟ್ಟು 2,792 ದಿನಗಳ ಕಾಲ (ಸುಮಾರು 7 ವರ್ಷ 7 ತಿಂಗಳು) ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. ಈ ದಾಖಲೆಯನ್ನು ಸರಿಗಟ್ಟುವ ಮೂಲಕ ಸಿದ್ದರಾಮಯ್ಯ ಅವರು ಕರ್ನಾಟಕದ ಸುದೀರ್ಘ ಅವಧಿಯ ನಾಯಕ ಎನಿಸಿಕೊಂಡಿದ್ದಾರೆ. ಆದರೆ ಈ ಇಬ್ಬರೂ ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟ ಎಂಬ ಕನಸನ್ನು ನನಸು ಮಾಡುವ ದಾರಿಯಲ್ಲಿಯೇ ಸಾಗಿರುವುದು ವಿಶೇಷ.

ಇಬ್ಬರಲ್ಲಿಯೂ ಹಲವು ಸಾಮ್ಯತೆ

ದೇವರಾಜ ಅರಸು ಮತ್ತು ಸಿದ್ದರಾಮಯ್ಯ ನಡುವಿನ ರಾಜಕೀಯ ಸಾಮ್ಯತೆಯನ್ನು ವಿಶ್ಲೇಷಕರು ಅನೇಕ ಬಗೆಗಳಲ್ಲಿ ಗುರುತಿಸುತ್ತಾರೆ. ಅರಸು ಅವರು ಮೇಲ್ವರ್ಗದಲ್ಲೇ ಹಂಚಿಹೋಗಿದ್ದ ಅಧಿಕಾರ ಮತ್ತು ಸರಕಾರದ ಸೌಲಭ್ಯವನ್ನು ಹಿಂದುಳಿದ ವರ್ಗದ ಕೈಗೆ ಕೊಡಿಸುವಲ್ಲಿ ಸಫಲರಾದರೆ, ಸಿದ್ದರಾಮಯ್ಯ ಅವರು ಆ ಅಧಿಕಾರ ಮತ್ತು ಸರಕಾರದ ಸೌಲಭ್ಯಗಳು ಹಿಂದುಳಿದ ವರ್ಗ, ಅದಕ್ಕಿಂತ ಕೆಳವರ್ಗದ ಜನರ ಕೈಗೆ ಸಿಗುವಂತೆ ಮಾಡುವಲ್ಲಿ ಯಶಸ್ಸು ಕಂಡಿದ್ದಾರೆ. ಹೀಗಾಗಿಯೇ, ಅವರನ್ನು ದೇವರಾಜು ಅರಸು ಅವರ ಜತೆಗೆ ಹೋಲಿಸುವ ಪರಿಪಾಠ ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಆರಂಭವಾಗಿದೆ. ಸಿದ್ದರಾಮಯ್ಯ ಅವರು ತಾವೇ ಹೇಳಿಕೊಂಡಂತೆ, 'ಬಡವರು, ಬೀದಿಯ ಜನರು ಹಬ್ಬ-ಹುಣ್ಣಿಮೆಯಲ್ಲಿ ಮಾತ್ರ ಅನ್ನ ಮಾಡುತ್ತಿದ್ದರು. ಅನಾರೋಗ್ಯ ಪೀಡಿತ ಮಕ್ಕಳಿಗೆ ಅನ್ನ ಉಣ್ಣಿಸಲು ನಿತ್ಯ ಅನ್ನ ಉಣ್ಣುವ ಸಿರಿವಂತರ ಮನೆಯ ಬಾಗಿಲಲ್ಲಿ ಕಾದು ಕುಳಿತು, ಒಂದು ಮಿದಿಕೆ ಅನ್ನ ಪಡೆದು ಮಕ್ಕಳಿಗೆ ಕೊಡುತ್ತಿದ್ದರು. ಇಂತಹ ಸ್ಥಿತಿಯನ್ನು ಕಣ್ಣಾರೆ ಕಂಡು, ನಾನು ಅನ್ನಭಾಗ್ಯವನ್ನು ಜಾರಿಗೊಳಿಸಿದೆ' ಎಂಬ ಮಾತಿನಂತೆ, ಬಡತನ, ಜಾತೀಯತೆ ಅವಮಾನಗಳೆಲ್ಲವನ್ನು ಸ್ವತಃ ಅನುಭವಿಸಿದ್ದರು. ಅವರ ಈ ಅವಮಾನ ಮತ್ತು ಅನುಭವವೇ ಮುಂದೆ ಅವರು ಮುಖ್ಯಮಂತ್ರಿಯಾಗಿ ಬಡವರ, ದಲಿತರ ಪರವಾದ ಚಿಂತನೆ ಮಾಡಲು ಪ್ರೇರಕವಾಯಿತು ಎನ್ನಬಹುದು. ಮೊದಲ ಅವಧಿಯ ಐದು ವರ್ಷದಲ್ಲಿ ಬಡವರ ಕಾಳಜಿಯ ಭಾಗ್ಯಗಳ ಜತೆಗೆ, ರಾಜ್ಯದ ಅಭಿವೃದ್ಧಿ, ಆರ್ಥಿಕ ಸ್ಥಿತಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರದ ಸಾಧನೆ ಅಮೋಘ. ಬಂಡವಾಳ ಹೂಡಿಕೆಯಲ್ಲಿ ರಾಜ್ಯ ನಂ.1 ಸ್ಥಾನ ಪಡೆದರೆ, ಆರೋಗ್ಯ, ನೀರಾವರಿ, ಪಡಿತರ ವ್ಯವಸ್ಥೆ ಹಾಗೂ ದಲಿತ ಪರವಾದ ಯೋಜನೆಗಳನ್ನು ರೂಪಿಸುವಲ್ಲಿ ಸರಕಾರ ಅತ್ಯುತ್ತಮ ಸಾಧನೆ ಮಾಡಿದೆ. ಇದೆಲ್ಲವೂ ಸಾಧ್ಯವಾಗಿದ್ದು ಸಿದ್ದರಾಮಯ್ಯ ಅವರ ಸಮಾಜವಾದಿ ಚಿಂತನೆ ಮತ್ತು ಬಡವರ ಪರವಾದ ಕಾಳಜಿಯಿಂದ ಎಂಬುದು ಮಾತ್ರ ಗಮನಿಸಬಹುದಾದ ಅಂಶ.

ಅಧಿಕಾರ ಮೀರಿದ ವ್ಯಕ್ತಿತ್ವ

ಕೆಲವೊಮ್ಮೆ ಸ್ಥಾನದಿಂದ ವ್ಯಕ್ತಿಗೆ ಗೌರವ ಸಿಕ್ಕರೆ, ಇನ್ನು ಕೆಲವೊಮ್ಮೆ ವ್ಯಕ್ತಿಯಿಂದ ಸ್ಥಾನಕ್ಕೆ ಗೌರವ ಸಿಗುತ್ತದೆ. ಎರಡನೇ ಸಾಲಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿಲ್ಲುತ್ತಾರೆ. ಈ ಹಿಂದೆ ವಿವಿಧ ಇಲಾಖೆ ಸಚಿವರಾಗಿ, ಉಪಮುಖ್ಯಮಂತ್ರಿಯಾಗಿ, ಪ್ರತಿಪಕ್ಷ ನಾಯಕನಾಗಿ, ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಸಮನ್ವಯ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಎಲ್ಲ ಅವಧಿಯಲ್ಲಿಯೂ ಆ ಸ್ಥಾನಗಳಿಗೆ ಗೌರವ ಹೆಚ್ಚುವಂತೆ ಕಾರ್ಯನಿರ್ವಹಿಸಿದ್ದು ಇತಿಹಾಸ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಸಿದ್ದರಾಮಯ್ಯ ಎಂಬ ಹೆಸರು ಕೇವಲ ಅಧಿಕಾರದ ಸಂಕೇತವಲ್ಲ, ಅದು ಸಮಾಜಮುಖಿ ಚಿಂತನೆ ಮತ್ತು ರಾಜಕೀಯ ಚತುರತೆಯ ಸಮ್ಮಿಲನ ಎಂದು ಅವರ ಆಪ್ತ ಬಳಗ ವಿಶ್ಲೇಷಿಸುತ್ತದೆ. ಒಬ್ಬ ರಾಜಕಾರಣಿ ಮುತ್ಸದ್ದಿಯಾಗುವುದು ಕೇವಲ ಚುನಾವಣೆ ಗೆಲ್ಲುವುದರಿಂದಲ್ಲ, ಬದಲಿಗೆ ಆತ ತೆಗೆದುಕೊಳ್ಳುವ ದೂರಗಾಮಿ ನಿರ್ಧಾರಗಳಿಂದ ಎಂಬ ವಾದವಿದೆ. ಇದಕ್ಕೆ ಪೂರಕವಾಗಿ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ವಿಚಾರದಲ್ಲಿ ಅವರ ನಿಲುವು ಒಲವು ಮಹತ್ವದ್ದೆನಿಸಿಕೊಳ್ಳುತ್ತದೆ.

ಸಿದ್ದರಾಮಯ್ಯ ಅವರನ್ನು ಅನೇಕರು ಇಷ್ಟಪಡಲು ಸೈದ್ಧಾಂತಿಕ ಬದ್ಧತೆಯಲ್ಲಿ ಅವರು ಇಟ್ಟಿರುವ ನಂಬಿಕೆಯೇ ಕಾರಣ. ಸ್ವಪಕ್ಷದಲ್ಲಿ ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲಿ 'ಜಾತಿ ಗಣತಿ' ಎಂಬುದು ಸಿದ್ದರಾಮಯ್ಯ ಅವರ ಸೈದ್ಧಾಂತಿಕ ಬದ್ಧತೆ ಮತ್ತು ಮುತ್ಸದ್ದಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಪ್ರಬಲ ಸಮುದಾಯಗಳ ವಿರೋಧ, ಸ್ವಪಕ್ಷದೊಳಗಿನ ಭಿನ್ನಮತ ಮತ್ತು ರಾಜಕೀಯ ಅಸ್ಥಿರತೆಯ ಭೀತಿಯ ನಡುವೆಯೂ ಅವರು ಈ ವಿಚಾರದಲ್ಲಿ ತೋರಿದ ಅಚಲ ನಿರ್ಧಾರವು ಭಾರತದ ರಾಜಕಾರಣದಲ್ಲಿ ಒಂದು ಮೈಲಿಗಲ್ಲಾಗಿದೆ.

ಸಿದ್ದರಾಮಯ್ಯ ತಗೆದುಕೊಂಡ ಈ ಐತಿಹಾಸಿಕ ತೀರ್ಮಾನ ಹಲವು ಆಯಾಮದಲ್ಲಿ ಪ್ರಮುಖ ಎನಿಸುತ್ತದೆ. ಪ್ರಮುಖವಾಗಿ, ಮೀಸಲಾತಿ ಮತ್ತು ಸವಲತ್ತುಗಳನ್ನು ನೀಡುವಾಗ ಕೇವಲ ಊಹೆಗಳ ಮೇಲೆ ನಿರ್ಧಾರ ತೆಗೆದುಕೊಳ್ಳಬಾರದು. ಯಾವ ಜಾತಿಯ ಜನರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸ್ಥಿತಿಗತಿ ಹೇಗಿದೆ ಎಂಬ ನಿಖರ ಅಂಕಿಅಂಶಗಳಿದ್ದರೆ ಮಾತ್ರ ಸಂವಿಧಾನಬದ್ಧವಾಗಿ ನ್ಯಾಯ ಒದಗಿಸಬಹುದು ಎಂಬುದು ಅವರ ವಾದ. ಬಲಿಷ್ಠರಿಗೆ ಮಾತ್ರ ಸೌಲಭ್ಯಗಳು ಸಿಗುತ್ತಿವೆ, ಕಟ್ಟಕಡೆಯ ಜನಾಂಗಗಳು ಇನ್ನೂ ಕತ್ತಲಲ್ಲಿವೆ ಎಂಬ ಆತಂಕ ಅವರದ್ದು. ಜಾತಿ ಗಣತಿಯಿಂದ ಹೊರಬರುವ ಅಂಕಿಅಂಶಗಳು ಈ ತಾರತಮ್ಯವನ್ನು ಹೋಗಲಾಡಿಸಲು ದಿಕ್ಸೂಚಿಯಾಗಲಿವೆ ಎಂದು ಅವರು ನಂಬಿಕೊಂಡೇ ಬಂದರು. ನ್ಯಾಯಾಲಯ ದಲ್ಲಿ ಮೀಸಲು ವಿಷಯ ಪ್ರಸ್ತಾಪವಾದಾಗಲೆಲ್ಲ, ದತ್ತಾಂಶವನ್ನು ಕೇಳಲಾಗುತ್ತದೆ. ಈ ದತ್ತಾಂಶವನ್ನು ಒದಗಿಸಲು ಜಾತಿ ಗಣತಿಯೇ ಏಕೈಕ ದಾರಿ ಎಂದು ಅವರು ಪ್ರತಿಪಾದಿಸಿ ಜಾರಿಗೆ ಕ್ರಮವಹಿಸಿದ್ದಾರೆ.

ರಾಜ್ಯ ಅಸ್ಮಿತೆಯಲ್ಲಿ ರಾಜಿಯಿಲ್ಲ

ಸಿದ್ದರಾಮಯ್ಯ ಅವರು ರಾಜ್ಯ, ಭಾಷೆ, ಗಡಿ, ನೀರು ವಿಷಯದಲ್ಲಿ ಎಂದಿಗೂ ರಾಜಿಯಾಗಿರುವ ಉದಾಹರಣೆಯಿಲ್ಲ. ತಮ್ಮ ಎರಡೂ ಅವಧಿಯಲ್ಲಿ ಕೈಗೊಂಡ ನಿರ್ಣಯಗಳು, ಅಭಿಪ್ರಾಯಗಳು, ತೀರ್ಮಾನಗಳು ಅನೇಕ ಸಂದರ್ಭಗಳಲ್ಲಿ ರಾಷ್ಟ್ರದ ಗಮನ ಸೆಳೆದಿವೆ. ಅವರ ಆಡಳಿತ ವೈಖರಿಯು ಕೇವಲ ದೈನಂದಿನ ಆಡಳಿತಕ್ಕೆ ಸೀಮಿತವಾಗಿಲ್ಲ. ಬದಲಿಗೆ, ಕರ್ನಾಟಕದ ಸ್ವಾಯತ್ತತೆ, ಕನ್ನಡದ ಅಸ್ಮಿತೆ ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯದ ಪಾಲನ್ನು ಪಡೆಯುವ ವಿಚಾರದಲ್ಲಿ ಅವರು ಅತ್ಯಂತ ಗಟ್ಟಿಯಾದ ನಿಲುವುಗಳನ್ನು ಹೊಂದಿದ್ದಾರೆ.

ಪ್ರಮುಖವಾಗಿ ಈ ಅವಧಿಯಲ್ಲಿ ರಾಜ್ಯದ ಎಲ್ಲಾ ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಶೇ. 60ರಷ್ಟು ಕನ್ನಡ ಭಾಷೆ ಕಡ್ಡಾಯವಾಗಿರಬೇಕು ಎಂಬ ಕಾನೂನನ್ನು ಬಿಗಿಗೊಳಿಸಿದರು. ಇದು ಕೇವಲ ಆದೇಶವಾಗಿರದೇ, ಕನ್ನಡದ ಸಾರ್ವಭೌಮತ್ವವನ್ನು ಎತ್ತಿಹಿಡಿಯುವ ನಿರ್ಧಾರವಾಗಿತ್ತು. ಮೆಟ್ರೋ ನಿಲ್ದಾಣಗಳಲ್ಲಿ ಹಿಂದಿ ಬಳಕೆಯ ವಿರುದ್ಧ ನಡೆದ ಪ್ರತಿಭಟನೆಗಳಿಗೆ ಬೆಂಬಲ ನೀಡಿ, ಹಿಂದಿ ಹೇರಿಕೆಯ ವಿರುದ್ಧ ಗಟ್ಟಿ ನಿಲುವು ತಳೆದರು.

ಇದರೊಂದಿಗೆ 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಅಧಿಕೃತವಾಗಿ ಘೋಷಿಸಿದ್ದು ಇವರ ಆಡಳಿತದ ಐತಿಹಾಸಿಕ ತೀರ್ಮಾನ. ಕರ್ನಾಟಕಕ್ಕೆ ತನ್ನದೇ ಆದ ಪ್ರತ್ಯೇಕ ನಾಡಧ್ವಜ ಇರಬೇಕು ಎಂಬ ನಿಟ್ಟಿನಲ್ಲಿ ಸಮಿತಿ ರಚಿಸಿ, ಧ್ವಜದ ವಿನ್ಯಾಸವನ್ನು ಅಂಗೀಕರಿಸಿದ್ದು ನಾಡಿನ ಅಸ್ಮಿತೆಯ ವಿಷಯದಲ್ಲಿ ಅವರು ತಳೆದ ಧೈರ್ಯದ ಹೆಜ್ಜೆಯಾಗಿತ್ತು. ಅವರ ತೀರ್ಮಾನಗಳು ಕೇಂದ್ರ ಸರಕಾರವನ್ನು ಅನೇಕ ಸಂದರ್ಭದಲ್ಲಿ ಇಕ್ಕಟ್ಟಿಗೆ ಸಿಲುಕಿಸಿದೆ.

ನದಿ ನೀರಿನ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾದಾಗಲೆಲ್ಲಾ ಸಿದ್ದರಾಮಯ್ಯ ಅವರು ರಾಜಕೀಯ ಮೀರಿ ನಿಂತಿದ್ದು ಕಂಡುಬರುತ್ತದೆ. ಮೇಕೆದಾಟು ಯೋಜನೆಯ ಅನುಷ್ಠಾನಕ್ಕಾಗಿ ಅವರು ಪಾದಯಾತ್ರೆಯಲ್ಲಿ ಪಾಲ್ಗೊಂಡು ಎರಡನೇ ಅವಧಿಯಲ್ಲಿ ಈ ಯೋಜನೆಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟು ಕೇಂದ್ರದ ಅನುಮತಿಗಾಗಿ ನಡೆಸುತ್ತಿರುವ ಕಾನೂನು ಹೋರಾಟಗಳು ಅವರ ಬದ್ಧತೆಯನ್ನು ತೋರಿಸಿದೆ. ನಮ್ಮ ತೆರಿಗೆ, ನಮ್ಮ ಹಕ್ಕು ಎಂಬ ಘೋಷಣೆಯಡಿ ದಕ್ಷಿಣ ಭಾರತದ ರಾಜ್ಯಗಳಿಗೆ ಆಗುತ್ತಿರುವ ಆರ್ಥಿಕ ಅನ್ಯಾಯವನ್ನು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗುವಂತೆ ಮಾಡಿದರು. 15 ಮತ್ತು 16ನೇ ಹಣಕಾಸು ಆಯೋಗದ ಮುಂದೆ ರಾಜ್ಯದ ಪರವಾಗಿ ಬಲವಾದ ವಾದ ಮಂಡಿಸಿದ್ದಾರೆ.

ವೈಯಕ್ತಿಕ ಜೀವನ

ಪೂರ್ಣ ಹೆಸರು	:	ಸಿದ್ದರಾಮಯ್ಯ
ಜನ್ಮದಿನಾಂಕ	:	12 ಆಗಸ್ಟ್ 1948
ಹುಟ್ಟಿದ ಸ್ಥಳ	:	ಸಿದ್ಧರಾಮನ ಹುಂಡಿ, ಮೈಸೂರು
ವಿದ್ಯಾರ್ಹತೆ	:	ಬಿಎಸ್‌ಸಿ, ಕಾನೂನು ಪದವೀಧರ
ತಂದೆಯ ಹೆಸರು	:	ಸಿದ್ದರಾಮೇಗೌಡ
ತಾಯಿಯ ಹೆಸರು	:	ಬೋರಮ್ಮ
ಪತ್ನಿ	:	ಪಾರ್ವತಿ
ಮಕ್ಕಳು	:	ಇಬ್ಬರು ಪುತ್ರರು

ಸಿದ್ದರಾಮಯ್ಯ ಅವಧಿಯ ಸಾಧನೆಗಳು

- ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಹಾಕಿಕೊಟ್ಟ ಮಾರ್ಗದಲ್ಲೇ ನಡೆದು ಇನ್ನಷ್ಟು ಕ್ರಾಂತಿಕಾರಕ ಬದಲಾವಣೆ ಜಾರಿ
- ಮುಖ್ಯಮಂತ್ರಿ ಆಗಿದ್ದ ಮೊದಲ ಅವಧಿಯಲ್ಲಿ ಹಲವು ಭಾಗ್ಯಗಳ ಮೂಲಕ ಬಡ ಜನರನ್ನು ಮೇಲೆತ್ತಲು ಪ್ರಾಮಾಣಿಕ ಕ್ರಮ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಎಸ್‌ಟಿಪಿ-ಟಿಎಸ್‌ಪಿ ಎನ್ನುವ ಮೀಸಲು ಅನುದಾನಕ್ಕೆ ಚಿಂತನೆ
- ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ವಾರ್ಷಿಕ 52 ಸಾವಿರ ಕೋಟಿ ರು.ಗೂ ಹೆಚ್ಚು ಅನುದಾನ ವಿನಿಯೋಗ, ಹೊಸ ಆರ್ಥಿಕ ದಾಖಲೆ
- ನೀರಾವರಿ ಯೋಜನೆಗೆ ಹೆಚ್ಚು ಒತ್ತು ನೀಡುವ ಮೂಲಕ ಬರಡು ಭೂಮಿಗಳಿಗೆ ಚೈತನ್ಯ ತುಂಬಿ, ರೈತರ ಬದುಕಿಗೆ ಭರವಸೆಯಾದರು

ಕ್ರಾಂತಿಕಾರಿಕ ತೀರ್ಮಾನಗಳ ಒಡೆಯರು

ಉಳುವವನೇ ಭೂಮಿಯ ಒಡೆಯ ಎಂಬ ಅರಸು ಕ್ರಾಂತಿಕಾರಿ ನಿರ್ಧಾರ ಮಾಡಿದ್ದರು. ಒಂದು ವರ್ಗದಿಂದ ತೀವ್ರ ವಿರೋಧ ವ್ಯಕ್ತವಾದರೂ ಸಹ ರಾಜ್ಯದ ಲಕ್ಷಾಂತರ ಬಡವರ ಬದುಕನ್ನೇ ಬದಲಿಸಿತು. ಇಂದಿಗೂ ಅರಸು ಹೆಸರನ್ನು ಆ ಮನೆಗಳಲ್ಲಿ ಮೆಲುಕುಹಾಕುವುದುಂಟು. ಇದಕ್ಕೆ ಪೂರಕವಾಗಿ ಸಿದ್ದರಾಮಯ್ಯ ತಮ್ಮ ಅಧಿಕಾರದ ಮೊದಲ ಅವಧಿಯ ಮೊದಲ ದಿನವೇ 'ಅನ್ನಭಾಗ್ಯ' ಯೋಜನ್ನೆ ಜಾರಿಗೆ ತಂದರು. ಅರಸು ಅವರು ಬಡವರಿಗೆ ಭೂಮಿ ನೀಡಿದರೆ, ಸಿದ್ದರಾಮಯ್ಯ ಅವರು ಹಸಿವು ಮುಕ್ತ ಕರ್ನಾಟಕದ ಗುರಿಯೊಂದಿಗೆ ಬಡವರ ತಟ್ಟೆಗೆ ಅನ್ನ ನೀಡುವ ಕೆಲಸ ಮಾಡಿದರು. ಇಬ್ಬರ ಮೂಲ ಉದ್ದೇಶ ಬಡವರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವೇ ಆಗಿತ್ತೆಂಬುದನ್ನು ವ್ಯಾಖ್ಯಾನಿಸುವವರಿದ್ದಾರೆ.

ಸಾವಿರ ದಿನಕ್ಕಿಂತ ಹೆಚ್ಚು ಕಾಲ ಆಳಿದ ಮುಖ್ಯಮಂತ್ರಿಗಳು

ಹೆಸರು	ಅಧಿಕಾರದಲ್ಲಿದ್ದ ದಿನಗಳ ಸಂಖ್ಯೆ	ಅಧಿಕಾರಾವಧಿ
ಸಿದ್ದರಾಮಯ್ಯ	2,793+ ದಿನಗಳು	2 ಬಾರಿ (2013-18 ಮತ್ತು 2023-ಪ್ರಸ್ತುತ)
ಡಿ. ದೇವರಾಜ ಅರಸು	2,778 ದಿನಗಳು	2 ಬಾರಿ (1972-77 ಮತ್ತು 1978-80)
ಎಸ್. ನಿಜಲಿಂಗಪ್ಪ	2,488 ದಿನಗಳು	2 ಬಾರಿ (1956-58 ಮತ್ತು 1962-68)
ರಾಮಕೃಷ್ಣ ಹೆಗಡೆ	2,036 ದಿನಗಳು	3 ಬಾರಿ (1983-88)
ಬಿ.ಎಸ್. ಯಡಿಯೂರಪ್ಪ	1,899 ದಿನಗಳು	4 ಬಾರಿ (2007, 2008-11, 2018, 2019-21)
ಎಸ್.ಎಂ. ಕೃಷ್ಣ	1,682 ದಿನಗಳು	1 ಬಾರಿ (1999-2004)
ಕೆ. ಚೆಂಗಲರಾಯ ರೆಡ್ಡಿ	1,638 ದಿನಗಳು	1 ಬಾರಿ (1947-1952)
ಕೆಂಗಲ್ ಹನುಮಂತಯ್ಯ	1,604 ದಿನಗಳು	1 ಬಾರಿ (1952-1956)
ವೀರೇಂದ್ರ ಪಾಟೀಲ್	1,402 ದಿನಗಳು	2 ಬಾರಿ (1968-71 ಮತ್ತು 1989-90)
ಬಿ.ಡಿ. ಜತ್ತಿ	1,388 ದಿನಗಳು	1 ಬಾರಿ (1958-1962)
ಜೆ.ಎಚ್. ಪಟೇಲ್	1,241 ದಿನಗಳು	1 ಬಾರಿ (1996-1999)
ಆರ್. ಗುಂಡೂರಾವ್	1,085 ದಿನಗಳು	1 ಬಾರಿ (1980-1983)
ಎಚ್.ಡಿ. ಕುಮಾರಸ್ವಾಮಿ	1,047 ದಿನಗಳು	2 ಬಾರಿ (2006-07 ಮತ್ತು 2018-19)

ರಾಜಕೀಯ ಮೆಟ್ಟಿಲುಗಳು

1983 ವಿಧಾನಸಭೆ ಚುನಾವಣೆಯಲ್ಲಿ ಭಾರತೀಯ ಲೋಕದಳದಿಂದ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಿಂದ ಗೆಲುವು. ನಂತರ ಜನತಾ ಪಕ್ಷಕ್ಕೆ ಸೇರ್ಪಡೆ. ಕನ್ನಡ ಕಾವಲು ಸಮಿತಿಯ ಅಧ್ಯಕ್ಷ.

1985 ಚಾಮುಂಡೇಶ್ವರಿ ಕ್ಷೇತ್ರದಿಂದ ವಿಧಾನಸಭಾ ಚುನಾವಣೆ ಗೆಲುವು. ಪಶುಸಂಗೋಪನೆ ಸಚಿವರಾಗಿ ನೇಮಕ. ಸಂಪುಟ ಪುನಾರಚನೆಯ ನಂತರ ರೇಷ್ಮೆ ಮತ್ತು ಸಾರಿಗೆ ಸಚಿವರಾಗಿ ಕಾರ್ಯ ನಿರ್ವಹಣೆ.

1989 ಕಾಂಗ್ರೆಸ್ ಅಲೆಯಲ್ಲಿ ಚುನಾವಣೆ ಸೋತ ಸಿದ್ದರಾಮಯ್ಯ. ಜನತಾ ಪಕ್ಷ ಹೋಳಾದಾಗ ಜನತಾದಳ ಸೇರ್ಪಡೆ. 1992ರಲ್ಲಿ ದೇವೇಗೌಡರು ಸಮಾಜವಾದಿ ಜನತಾ ಪಕ್ಷದಿಂದ ಜನತಾದಳ ಸೇರಿದಾಗ, ಕಾರ್ಯದರ್ಶಿಯಾಗಿ ಆಯ್ಕೆ.

1994 ಚುನಾವಣೆಯಲ್ಲಿ ಗೆದ್ದು ಹಣಕಾಸು ಸಚಿವರಾದರು.

1999 ಚುನಾವಣೆ ಹೊತ್ತಿನಲ್ಲಿ ಜನತಾದಳ ಇಬ್ಭಾಗ, ದೇವೇಗೌಡ ರೊಂದಿಗೆ ಸೇರಿ ಜಾತ್ಯತೀತ ಜನತಾದಳ ಪಕ್ಷದ ಅಧ್ಯಕ್ಷರಾದರು. ಆ ಬಾರಿ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲು.

2004 ಜಾತ್ಯತೀತ ಜನತಾದಳದ ಮುಖ್ಯಮಂತ್ರಿ ಅಭ್ಯರ್ಥಿ. ಅತಂತ್ರ ವಿಧಾನಸಭೆ ರಚನೆಯಾದಾಗ, ಕಾಂಗ್ರೆಸ್ ಜತೆಗೂಡಿ ಸರಕಾರ ರಚನೆ, ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾದರು.

2008 ಕಾಂಗ್ರೆಸ್ ಪಕ್ಷದಿಂದ ಶಾಸಕರಾಗಿ ಗೆಲುವು.

2013 ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿ ಅಭ್ಯರ್ಥಿ. ಮೇ 13, 2013ರಂದು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ.

2018 ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಮತ್ತು ಬಾದಾಮಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರು. ಅವುಗಳಲ್ಲಿ ಚಾಮುಂಡೇಶ್ವರಿಯಲ್ಲಿ ಸೋತು, ಬಾದಾಮಿಯಲ್ಲಿ ಗೆದ್ದರು.

2023 ಅಭೂತಪೂರ್ವ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ. ವರುಣಾ ಕ್ಷೇತ್ರದಿಂದ ಗೆದ್ದು 2ನೇ ಬಾರಿಗೆ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯಗೆ ಪಟ್ಟ.

ಅಹಿಂದ ಚಳವಳಿ

ದೇವರಾಜ ಅರಸು ಅವರು ತಮ್ಮ ಕಾಲಘಟ್ಟದಲ್ಲಿ ಮೇಲ್ವರ್ಗದ ಹಿಡಿತದಲ್ಲಿದ್ದ ರಾಜಕಾರಣವನ್ನು ಕೆಳವರ್ಗದತ್ತ ತಿರುಗಿಸಿದವರು. ಹಿಂದುಳಿದ ವರ್ಗಗಳು, ದಲಿತರು ಮತ್ತು ಅಲ್ಪಸಂಖ್ಯಾತರನ್ನು ಒಗ್ಗೂಡಿಸಿ ಅಧಿಕಾರದ ಪಾಲು ನೀಡಿದ್ದರೆಂದು ಇತಿಹಾಸದ ಪುಟದಲ್ಲಿ ಕಾಣಸಿಗುತ್ತದೆ. ಸಿದ್ದರಾಮಯ್ಯ ಅರಸು ಅವರ 'ಅಹಿಂದ' (ಅಲ್ಪಸಂಖ್ಯಾತ, ಹಿಂದುಳಿದ, ದಲಿತ) ಸಿದ್ಧಾಂತಕ್ಕೆ ಮರುಜೀವ ನೀಡಿ, ಅದೇ ವರ್ಗಗಳ ಆಧಾರದ ಮೇಲೆ ತಮ್ಮ ರಾಜಕೀಯ ಭದ್ರಕೋಟೆ ನಿರ್ಮಿಸಿಕೊಂಡರು. ಇಬ್ಬರೂ ಶೋಷಿತ ವರ್ಗಗಳ ಧ್ವನಿಯಾಗಿ ಗುರುತಿಸಿಕೊಂಡವರು ಎಂಬುದು ಮೊದಲ ಸಾಮ್ಯತೆ. ಇಬ್ಬರನ್ನೂ ಹತ್ತಿರದಿಂದ ಕಂಡವರು ಈ ಅಂಶವನ್ನು ಅಧಿಕಾರಯುತವಾಗಿ ಹೇಳುತ್ತಾರೆ.

ಅತಿಹೆಚ್ಚು ಬಜೆಟ್ ಮಂಡಿಸಿದ ಕೀರ್ತಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇವಲ ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿ ಮಾತ್ರ ಇರದೇ, ಅತಿಹೆಚ್ಚು ಬಜೆಟ್ ಮಂಡಿಸಿದ ಕೀರ್ತಿಯನ್ನು ಪಡೆದಿದ್ದಾರೆ. ಆರ್ಥಿಕ ಶಿಸ್ತು ವಿಚಾರದಲ್ಲಿ ಸಿದ್ದರಾಮಯ್ಯ ಅವರು ಕೇವಲ ಆಡಳಿತಗಾರರಲ್ಲ, ಬದಲಿಗೆ ಹಣಕಾಸು ಸಚಿವರಾಗಿ ಅವರು ತೋರಿರುವ ಆರ್ಥಿಕ ಶಿಸ್ತು ಅಪರೂಪದ್ದು. ರಾಜ್ಯದ ಇತಿಹಾಸದಲ್ಲಿ ಅತಿ ಹೆಚ್ಚು ಅಂದರೆ 16 ಬಾರಿ ಬಜೆಟ್ ಮಂಡಿಸಿರುವ ಅಪ್ರತಿಮ ದಾಖಲೆ ಇವರದ್ದಾಗಿದೆ. ಬರುವ ಮಾರ್ಚ್‌ನಲ್ಲಿ ಇವರು 17ನೇ ಬಜೆಟ್ ಮಂಡಿಸಲು ಸಜ್ಜಾಗುತ್ತಿದ್ದಾರೆ. ಬರೋಬ್ಬರಿ 52,000 ಕೋಟಿ ರೂ.ಗಳ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದರೂ, ನಾಡಿನ ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರದಂತೆ ಸಮತೋಲನ ಕಾಪಾಡಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ವೆನೆಜುವೆಲಾಕ್ಕೆ ಬೇಕು ಶ್ರೇಷ್ಠ ಆಡಳಿತ

ಅಮೆರಿಕಕ್ಕೆ ಸತತವಾಗಿ ತಲೆನೋವಾಗಿದ್ದ ವೆನೆಜುವಾಲಾ ಅಧ್ಯಕ್ಷ ನಿಕೋಲಸ್ ಮಡುರೋನನ್ನು ಜ.3ರಂದು ಅಮೆರಿಕ ಹೇಳದೇ ಕೇಳದೇ ಬಂಧಿಸಿ ತನ್ನ ದೇಶಕ್ಕೆ ಒಯ್ದಿದೆ. ತನ್ನದೇ ನೆಲದಲ್ಲಿ ವಿಚಾರಣೆ ನಡೆಸಿ ನಿಕೋಲಸ್‌ಗೆ ಶಿಕ್ಷೆ ನೀಡುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಘೋಷಿಸಿದ್ದೆಲ್ಲ ಈಗ ಹಳತು. ವೆನೆಜುವೆಲಾದಲ್ಲಿ ಜಗತ್ತಿನಲ್ಲೇ ಅತ್ಯಂತ ಗರಿಷ್ಠ ಶೇ.18ರಷ್ಟು ತೈಲನಿಕ್ಷೇಪವಿದೆ, ಅದಕ್ಕಾಗಿಯೇ ಟ್ರಂಪ್ ಬಂಧಿಸಿದ್ದಾರೆ ಎಂಬ ಮಾತುಗಳೂ ಕೇಳಿ ಬರುತ್ತಿವೆ. ಅವೆಲ್ಲ ಪಕ್ಕಕ್ಕಿಟ್ಟು ನೋಡುವುದಾದರೆ, ರಾತ್ರಿ ಹೊತ್ತಿನ ಕೆಲಗಂಟೆಗಳ ಕಾರ್ಯಾಚರಣೆಯಲ್ಲಿ ಬಹಳವೇನು ಶ್ರಮಿಸದೇ ಕೆಲವೇ ಕೆಲವು ಬಾಂಬು ಗಳನ್ನು ಸಿಡಿಸಿ, ಒಂದು ದೇಶದ ಅಧ್ಯಕ್ಷರನ್ನೇ ಅಮೆರಿಕ ಹೊತ್ತೊಯ್ಯುತ್ತದೆ ಎಂದರೆ ನಂಬುವುದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಇದು ಹೇಗೆ ಸಾಧ್ಯ? ಇದನ್ನು ಅರ್ಥ ಮಾಡಿಕೊಳ್ಳಲು ವೆನೆಜುವೆಲಾದ ಆಂತರಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು. ತನ್ನ ದೇಶದಲ್ಲಿ ಗರಿಷ್ಠ ಪ್ರಮಾಣದಲ್ಲಿ ತೈಲನಿಕ್ಷೇಪವಿದ್ದರೂ ಅವನ್ನು ಬಳಸಿಕೊಳ್ಳಲು ಹೋಗದೇ, ಉದ್ದೀಪನ ಜಾಲವನ್ನು ಬೆಳೆಸುತ್ತಿದ್ದ ಅಧ್ಯಕ್ಷ ಎಂಬ ಅಪಖ್ಯಾತಿ ನಿಕೋಲಸ್‌ಗಿದೆ. ಅಲ್ಲಿರುವುದು ಒಂದು ರೀತಿಯ ಸರ್ವಾಧಿಕಾರಿ ಆಡಳಿತ. ಆರ್ಥಿಕ ಕುಸಿತ, ಬಡತನದಿಂದ ಅಲ್ಲಿನ ಜನ ಬೆಂದುಹೋಗಿದ್ದಾರೆ. ನಿಕೋಲಸ್ ಬಂಧನದಿಂದ ಆ ದೇಶದ ಜನರೇನು ಬೇಸರಗೊಂಡಿಲ್ಲ. ಪೀಡೆ ತೊಲಗಿತು ಎಂಬ ಸಂತೋಷದಲ್ಲೇ ಇದ್ದಂತಿದೆ. ಅಷ್ಟರ ಮಟ್ಟಿಗೆ ತನ್ನ ದುರಾಡಳಿತದಿಂದ ದೇಶವನ್ನು ಕಂಗೆಡಿಸಿದ್ದ ವ್ಯಕ್ತಿ ನಿಕೋಲಸ್. ಅಲ್ಲಿನ ವಿರೋಧಪಕ್ಷದ ನಾಯಕಿ ಮರಿಯಾ ಕೊರಿನಾ ಮಚಾಡೊಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಕ್ಕಿದೆ. ಸದ್ಯ ತಲೆಮರೆಸಿಕೊಂಡು ವಿದೇಶದಲ್ಲಿರುವ ಆಕೆ, ನಿಕೋಲಸ್ ಬಂಧನವಾದ ಕೂಡಲೇ ಟ್ರಂಪ್‌ಗೆ ನೊಬೆಲ್ ಪ್ರಶಸ್ತಿಯನ್ನು ಅರ್ಪಿಸಿದ್ದಾರೆ! ಬಡತನದ ಕಾರಣ ವೆನೆಜುವೆಲಾ ಮಕ್ಕಳ ದೈಹಿಕ ಬೆಳವಣಿಗೆಯೇ ಆಗುತ್ತಿಲ್ಲ ಎಂಬ ವರದಿಗಳಿವೆ. ಅಂತಹ ಹೊತ್ತಿನಲ್ಲಿ ಜನರ ತಣ್ಣನೆಯ ಪ್ರತಿಕ್ರಿಯೆಯೇ ಎಲ್ಲವನ್ನೂ ಅರ್ಥ ಮಾಡಿಸುತ್ತದೆ. ಸದ್ಯ ವೆನೆಜುವೆಲಾ ಜನರಿಗೆ ಬೇಕಾಗಿರುವುದು ಒಳ್ಳೆಯ ಆಡಳಿತ, ಹೊಟ್ಟೆತುಂಬ ಊಟ.

ಸೊಂಪಾದಕೀಯ

ಕಳ್ಳನ ಮನಸ್ಸು ಹುಳ್ಳುಳ್ಳಗೆ

ಕ್ರಿಸ್‌ಮಸ್, ಹೊಸವರ್ಷದ ಸಂಭ್ರಮಾಚರಣೆಯ ವಿಷಯದಲ್ಲಿ ಸಂಭ್ರಮ ಎಷ್ಟಿರುತ್ತದೋ, ಅವಘಡಗಳೂ ಅಷ್ಟೇ ಇರುತ್ತವೆ. ಅದರಲ್ಲೂ ಆಲ್ಕೋಹಾಲು ಈ ಎರಡೂ ಸಮಯದಲ್ಲಿ ಹೆಚ್ಚಾಗಿ ಬಳಕೆ ಆಗುವುದರಿಂದ ಈ ಸಮಯದಲ್ಲಿ ಏನೇನು ಆಗುತ್ತೋ ಹೇಳೋಕೆ ಆಗಲ್ಲ. ಕುಡಿದ ಮತ್ತಿನಲ್ಲಿ ಕ್ರಿಸ್‌ಮಸ್, ನ್ಯೂಇಯರ್ ಆಚರಣೆಯ ಜೊತೆಗೆ ಒಂದು ಎಡವಟ್ಟು ಆದ ಕಥೆ ಇದು. ನ್ಯೂಜೆರ್ಸಿಯ ಗಿಟಾರ್ ಸ್ಟೋರ್ ಒಂದರಿಂದ ಎರಡು ಮ್ಯಾಂಡೋಲಿನ್‌ಗಳು ಕ್ರಿಸ್‌ಮಸ್ ಆಚರಣೆಯ ಸಂದರ್ಭದಲ್ಲಿ ಕಳುವಾಗಿದ್ದವಂತೆ. ಕ್ರಿಸ್‌ಮಸ್ ಆಚರಣೆಯ ಸಂದರ್ಭದಲ್ಲಿ ಸ್ಯಾಂಟಾನ ಜೆರ್ಸಿ ಹಾಕುವ ಬದಲು ಕಳ್ಳನ ಜೆರ್ಸಿ ಹಾಕಿಕೊಂಡು ಬಂದು ನ್ಯೂಜೆರ್ಸಿಯಲ್ಲಿ ಈ ಕಳ್ಳತನ ಮಾಡಲಾಗಿದೆ. ಆದರೆ ಮಾಡಿದ್ದು ಯಾರು ಅಂತ ಹಿಡಿಯೋಕೆ ಆಗಿರಲಿಲ್ಲ. ಆದರೆ ಅದೃಷ್ಟ ಅಂದ್ರೆ ಈ ಘಟನೆ ಸಿಸಿಟಿವಿಯಲ್ಲಿ ಸೆರೆ ಆಗಿತ್ತು. ಹಾಗಾಗಿ ಕಳ್ಳನನ್ನು ಸೆರೆ ಹಿಡಿಯೋದು ಕಷ್ಟದ ಕೆಲಸ ಏನಲ್ಲ ಅಂತ ಪೊಲೀಸರಿಗೆ ದೂರು ನೀಡಿದ್ದ ಅಂಗಡಿಯ ಮಾಲೀಕ. ಆದರೆ ಪೊಲೀಸರ ಕೈಗೆ ಕಳ್ಳ ಸಿಕ್ಕಿರಲಿಲ್ಲ ಅಂತ ಈ ವಿಡಿಯೋ ಫೂಟೇಜ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿ ಈತ ಕಂಡರೆ ಮಾಹಿತಿ ನೀಡಿ ಅಂತಲೂ ಅಂಗಡಿ ಮಾಲೀಕ ಪೋಸ್ಟ್ ಹಾಕಿದ್ದ. ಆದರೂ ಕಳ್ಳ ಮತ್ತು ಕಳ್ಳತನದ ಬಗ್ಗೆ ಸುಳಿವು ಸಿಕ್ಕಿರಲಿಲ್ಲ. ಆದರೆ ಆಶ್ಚರ್ಯ ಎನ್ನುವಂತೆ ಕೆಲವು ದಿನಗಳ ಬಳಿಕ ಅಂಗಡಿಯ ಮಾಲೀಕ ಅಂಗಡಿ ಬಾಗಿಲು ತೆರೆದಾಗ ಕಳುವಾದ ಎರಡು ಮ್ಯಾಂಡೋಲಿನ್‌ಗಳು ಟೇಬಲ್ ಮೇಲೆ ಇದ್ದವಂತೆ. ಮ್ಯಾಂಡೋಲಿನ್ ಕದ್ದ ಮ್ಯಾನ್ ಯಾರು ಅಂತ ಗೊತ್ತಾಗದಿದ್ದರೂ ಕಳುವಾದ ವಸ್ತುಗಳು ವಾಪಸ್ ಬಂದಿದ್ದವು. ಅದರ ಜೊತೆಗೆ ಒಂದು ಚೀಟಿ ಕೂಡಾ ಇತ್ತಂತೆ. ಅದರಲ್ಲಿ ಕ್ಷಮಿಸಿ, ನಾನು ಅವತ್ತು ತುಂಬಾ ಕುಡಿದಿದ್ದೆ ಅಂತ ಬರೆದಿದ್ದ ಪತ್ರ ಕೂಡಾ ಇತ್ತು. ಕುಡಿದ ಅಮಲಿನಲ್ಲೂ ಮ್ಯಾಂಡೋಲಿನ್ ಕಳ್ಳತನ ಮಾಡುವಂಥ ಕ್ರಿಯೇಟಿವ್ ಮನಸ್ಸಿನ ಈ ಕಳ್ಳನನ್ನು ಈಗ ಪೊಲೀಸರು, ಎರಡನೇ ಬಾರಿಗೆ ಅಂಗಡಿಗೆ ಕನ್ನ ಹಾಕಿದ್ದಾನೆ ಅನ್ನೋ ಆರೋಪದ ಮೇಲೆ ಹುಡುಕುತ್ತಿರಬಹುದು.

ಸಂಪಾದಕರ ಸದ್ಯಶೋಧನೆ

ಏರ್‌ಸ್ಪೀಡ್ ಮಾಹಿತಿ ಏಕೆ ನಿರ್ಣಾಯಕ?

ವಿಮಾನದ ಹಾರಾಟದಲ್ಲಿ ಅತ್ಯಂತ ಚಿಕ್ಕದಾದ ಆದರೆ ಅತ್ಯಂತ ಪ್ರಭಾವಶಾಲಿ ಬಿಡಿಭಾಗವೆಂದರೆ ಅದು 'ಪಿಟೋ ಟ್ಯೂಬ್' (Pitot Tube). ಇವು ಕೇವಲ ಸಣ್ಣ ಕೊಳವೆಗಳಂತೆ ಕಂಡರೂ, ಇಡೀ ವಿಮಾನದ ಸುರಕ್ಷತೆಯು ಇವು ನೀಡುವ ಮಾಹಿತಿಯ ಮೇಲೆ ಅವಲಂಬಿತವಾಗಿರುತ್ತದೆ. ಈ ಸಂವೇದಕಗಳಲ್ಲಿ (ಸೆನ್ಸರ್ಸ್) ಉಂಟಾಗುವ ಒಂದು ಸಣ್ಣ ಅಡಚಣೆಯು ಇಡೀ ವಿಮಾನವನ್ನು ಗೊಂದಲಕ್ಕೀಡುಮಾಡಬಹುದು. ವಿಮಾನವು ಆಕಾಶದಲ್ಲಿ ಹಾರುತ್ತಿರುವಾಗ ಅದರ ವೇಗ ಎಷ್ಟು ಎಂಬುದು ಪೈಲಟ್‌ಗೆ ತಿಳಿಯುವುದು ಅತ್ಯಗತ್ಯ. ಭೂಮಿಯ ಮೇಲೆ ಕಾರು ಚಲಿಸುವಾಗ ಚಕ್ರದ ತಿರುಗುವಿಕೆಯಿಂದ ವೇಗ ತಿಳಿಯುತ್ತದೆ, ಆದರೆ ಆಕಾಶದಲ್ಲಿ ಗಾಳಿಯ ಒತ್ತಡದ ಮೂಲಕ ವೇಗವನ್ನು ಅಳೆಯಲಾಗುತ್ತದೆ. ಇಲ್ಲಿ ಪಿಟೋ ಟ್ಯೂಬ್‌ಗಳ ಪಾತ್ರ ಶುರುವಾಗುತ್ತದೆ. ಪಿಟೋ ಟ್ಯೂಬ್ ಎಂದರೇನು ಮತ್ತು ಅದು ಹೇಗೆ ಕೆಲಸ ಮಾಡುತ್ತದೆ? ಪಿಟೋ ಟ್ಯೂಬ್ ಎನ್ನುವುದು ವಿಮಾನದ ಹೊರಭಾಗದಲ್ಲಿ (ಸಾಮಾನ್ಯವಾಗಿ ಮೂತಿಯ ಬಳಿ) ಅಳವಡಿಸಲಾಗಿರುವ ಒಂದು ಸಣ್ಣ ಕೊಳವೆ. ವಿಮಾನವು ಮುಂದಕ್ಕೆ ಚಲಿಸುವಾಗ ಗಾಳಿಯು ಈ ಕೊಳವೆಯ ಒಳಗೆ ನುಗ್ಗುತ್ತದೆ. ಈ ಗಾಳಿಯ ಒತ್ತಡವನ್ನು (Ram Air Pressure) ಅಳೆದು, ಅದನ್ನು ವಿಮಾನದ ವೇಗವಾಗಿ (Airspeed) ಪರಿವರ್ತಿಸಲಾಗುತ್ತದೆ. ಈ ಪುಟ್ಟ ಕೊಳವೆಯೊಳಗೆ ಯಾವುದಾದರೂ ವಸ್ತು ಸೇರಿಕೊಂಡರೆ ಏನಾಗಬಹುದು? ಅತಿ ಎತ್ತರದಲ್ಲಿ ಹಾರುವಾಗ ತಾಪಮಾನವು ಶೂನ್ಯಕ್ಕಿಂತ ಕೆಳಗಿರುತ್ತದೆ. ಈ ಸಮಯದಲ್ಲಿ ಪಿಟೋ ಟ್ಯೂಬ್‌ನೊಳಗೆ ನೀರು ಹನಿಗಳು ಮಂಜುಗಡ್ಡೆಯಾಗಿ ಘನೀಕರಿಸಬಹುದು. ವಿಮಾನವು ನೆಲದ ಮೇಲಿರುವಾಗ ಸಣ್ಣ ಕೀಟಗಳು (ಉದಾಹರಣೆಗೆ ಕಣಜಗಳು) ಈ ಕೊಳವೆಯೊಳಗೆ ಗೂಡು ಕಟ್ಟಬಹುದು. ಮಳೆಯ ನೀರು ಅಥವಾ ರನ್‌ವೇ ಮೇಲಿನ ಸಣ್ಣ ಕಸದ ತುಣುಕುಗಳು ಈ ವ್ಯವಸ್ಥೆಯನ್ನು ಬಂದ್ ಮಾಡಬಹುದು. ಇದು ಸಂಭವಿಸಿದಾಗ, ಪೈಲಟ್‌ಗೆ ಸಿಗುವ 'ಏರ್‌ಸ್ಪೀಡ್' ಮಾಹಿತಿ ತಪ್ಪು ಅಥವಾ ಶೂನ್ಯವಾಗಿ ತೋರಿಸುತ್ತದೆ. ಇದು ಇಡೀ ವಿಮಾನದ ಕಂಪ್ಯೂಟರ್ ವ್ಯವಸ್ಥೆಯನ್ನೇ ಗೊಂದಲಕ್ಕೀಡುಮಾಡುತ್ತದೆ. ಏರ್‌ಸ್ಪೀಡ್ ಮಾಹಿತಿ ಏಕೆ ಅಷ್ಟು ನಿರ್ಣಾಯಕ? ವಿಮಾನದ ವೇಗದ ಮಾಹಿತಿ ಕೇವಲ ಪೈಲಟ್‌ಗೆ ಮಾತ್ರವಲ್ಲ, ವಿಮಾನದ ಹಲವು ಸ್ವಯಂಚಾಲಿತ ವ್ಯವಸ್ಥೆಗಳಿಗೂ ಬೇಕು. ಪೈಲಟ್ ನೋಡುವ ಪರದೆಯ ಮೇಲೆ ತಪ್ಪು ವೇಗ ತೋರಿಸಿದರೆ, ಅವರು ವಿಮಾನದ ವೇಗವನ್ನು ಜಾಸ್ತಿಗೊಳಿಸಬಹುದು ಅಥವಾ ನಿಧಾನಗೊಳಿಸಬಹುದು. ಇದು ಅಪಾಯಕಾರಿ. ಆಟೋ ಪೈಲಟ್ ವ್ಯವಸ್ಥೆಯು ವೇಗದ ಆಧಾರದ ಮೇಲೆ ಕೆಲಸ ಮಾಡುತ್ತದೆ. ವೇಗದ ಮಾಹಿತಿ ತಪ್ಪಾದಾಗ ಆಟೋ ಪೈಲಟ್ ಇದ್ದಕ್ಕಿದ್ದಂತೆ (Disengage) ಸ್ಥಗಿತಗೊಳ್ಳಬಹುದು, ಇದರಿಂದ ಪೈಲಟ್ ಮೇಲೆ ಕೆಲಸದ ಒತ್ತಡ ಹೆಚ್ಚಾಗುತ್ತದೆ. ವಿಮಾನವು ತುಂಬಾ ನಿಧಾನವಾದರೆ 'ಸ್ಟಾಲ್' (Stall) ಎಚ್ಚರಿಕೆ ಬರುತ್ತದೆ. ಪಿಟೋ ಟ್ಯೂಬ್ ಬ್ಲಾಕ್ ಆದಾಗ ವಿಮಾನ ವೇಗವಾಗಿ ದ್ದರೂ 'ಸ್ಟಾಲ್' ಎಚ್ಚರಿಕೆ ಬರಬಹುದು ಅಥವಾ ವಿಮಾನ ನಿಧಾನವಾಗಿದ್ದರೂ ಎಚ್ಚರಿಕೆ ಬಾರದಿರಬಹುದು. ಇಂಥ ಸಮಸ್ಯೆಗಳನ್ನು ತಡೆಯಲು ಆಧುನಿಕ ವಿಮಾನಗಳಲ್ಲಿ ಹಲವಾರು ತಾಂತ್ರಿಕ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ. ಮಂಜುಗಡ್ಡೆ ಗಟ್ಟಿಯಾಗದಂತೆ ತಡೆಯಲು ಪಿಟೋ ಟ್ಯೂಬ್‌ಗಳನ್ನು ಒಳಗಿನಿಂದ ಕಾಯಿಸುವ ವ್ಯವಸ್ಥೆ ಇರುತ್ತದೆ. ವಿಮಾನದಲ್ಲಿ ಕೇವಲ ಒಂದು ಪಿಟೋ ಟ್ಯೂಬ್ ಇರುವುದಿಲ್ಲ. ಸಾಮಾನ್ಯವಾಗಿ ಮೂರು ಸ್ವತಂತ್ರ ಪಿಟೋ ಟ್ಯೂಬ್‌ಗಳಿರುತ್ತವೆ. ಇವುಗಳು ಬೇರೆ ಬೇರೆ ಕಂಪ್ಯೂಟರ್‌ಗಳಿಗೆ ಮಾಹಿತಿ ನೀಡುತ್ತವೆ. ವಿಮಾನದ ಕಂಪ್ಯೂಟರ್‌ಗಳು ನಿರಂತರವಾಗಿ ಈ ಮೂರೂ ಸಂವೇದಕಗಳ ಮಾಹಿತಿಯನ್ನು ಹೋಲಿಕೆ ಮಾಡುತ್ತಿರುತ್ತವೆ. ಒಂದು ವೇಳೆ ಯಾವುದಾದರೂ ಒಂದು ಸಂವೇದಕವು ಭಿನ್ನವಾದ ಮಾಹಿತಿ ನೀಡಿದರೆ, ಕಂಪ್ಯೂಟರ್ ತಕ್ಷಣ ಪೈಲಟ್‌ಗೆ 'Airspeed Disagree' ಎಂಬ ಸಂದೇಶ ನೀಡುತ್ತದೆ. ಒಂದು ವೇಳೆ ಎಲ್ಲ ಏರ್‌ಸ್ಪೀಡ್ ಇಂಡಿಕೇಟರ್‌ಗಳು ವಿಫಲವಾದರೆ ಪೈಲಟ್‌ಗಳು ಏನು ಮಾಡುತ್ತಾರೆ? ಇದಕ್ಕೆ ಅವರ ಬಳಿ ಒಂದು ವಿಶೇಷ ತಂತ್ರವಿದೆ. ಅದು 'ಪಿಚ್ ಮತ್ತು ಪವರ್'. ವಿಮಾನದ ವೇಗವು ಎರಡು ವಿಷಯಗಳ ಮೇಲೆ ಅವಲಂಬಿತವಾಗಿರುತ್ತದೆ. ವಿಮಾನದ ಮೂತಿ ಎಷ್ಟು ಡಿಗ್ರಿ ಮೇಲಕ್ಕೆ ಅಥವಾ ಕೆಳಕ್ಕೆ ಇದೆ (ಪಿಚ್) ಎಂಬುದು. ಎಂಜಿನ್ ಎಷ್ಟು ಶಕ್ತಿಯನ್ನು (ಪವರ್) ಉತ್ಪಾದಿಸುತ್ತಿದೆ ಎಂಬುದು. ಪೈಲಟ್‌ಗಳ ಬಳಿ ಒಂದು ಪಟ್ಟಿ ಇರುತ್ತದೆ. ಉದಾಹರಣೆಗೆ, ಐದು ಡಿಗ್ರಿ ಪಿಚ್ ಮತ್ತು ಶೇ.80ರಷ್ಟು ಇಂಜಿನ್ ಪವರ್ ಇದ್ದರೆ ವಿಮಾನವು ಇಷ್ಟೇ ವೇಗದಲ್ಲಿ ಚಲಿಸುತ್ತದೆ ಎಂಬುದು ಅವರಿಗೆ ತಿಳಿದಿರುತ್ತದೆ. ವೇಗದ ಮಾಪಕ ಕೆಲಸ ಮಾಡದಿದ್ದರೂ, ಈ ಸೂತ್ರವನ್ನು ಬಳಸಿ ಅವರು ವಿಮಾನವನ್ನು ಸುರಕ್ಷಿತವಾಗಿ ಇಳಿಸಬಲ್ಲರು.

ಬಾಂಗ್ಲಾ ಹಿಂದೂ ಹತ್ಯೆಗಳ ಕರಿನೆರಳಲ್ಲಿ ಬಂಗಾಳ ಕದನ

ಬಾಂಗ್ಲಾದೇಶದಲ್ಲಿ ಹಿಂದೂಗಳ ಹತ್ಯೆ ಘಟನೆಗಳ ಹಿನ್ನೆಲೆಯಲ್ಲಿ ಬಾಂಗ್ಲಾದೇಶಿಗರನ್ನು ಬಂಗಾಳಿಗರು ನೋಡುವ ದೃಷ್ಟಿಕೋನ ಬದಲಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದು ನಿಜವೇ ಆಗಿದ್ದರೆ, ಬಂಗಾಳ ಚುನಾವಣೆ ಮೇಲೆ ಅದು ಖಂಡಿತಾ ಪರಿಣಾಮ ಬೀರಲಿದೆ. ಇದಕ್ಕೆ ತಕ್ಕಂತೆ ಬಿಜೆಪಿಯೂ ತನ್ನ ಕಾರ್ಯತಂತ್ರವನ್ನು ಈಗಾಗಲೇ ಸಿದ್ಧಮಾಡಿಕೊಂಡಿದೆ.

ಜನಪಥ

ರಾಘವ ಶರ್ಮ ನಿಡ್ಲೆ
vveditoped@gmail.com

ಬಿಹಾರ ವಿಧಾನಸಭೆ ಚುನಾವಣೆಯನ್ನು ಅಭೂತಪೂರ್ವ ರೀತಿಯಲ್ಲಿ ಗೆದ್ದ ದಿನದಂದೇ ದೆಹಲಿಯಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ನಮ್ಮ ಮುಂದಿನ ಗುರಿ ಪಶ್ಚಿಮ ಬಂಗಾಳ ಎನ್ನುವುದನ್ನು ಸ್ಪಷ್ಟಪಡಿಸಿದ್ದರು. ಬಿಹಾರದಿಂದ ಹರಿದುಹೋಗುವ ಗಂಗಾ ಮಾತೆ (ನದಿ) ಬಂಗಾಳ ಮೂಲಕವೇ ಸಮುದ್ರ ಸೇರುತ್ತಾಳೆ ಎಂದು ಮಾರ್ಮಿಕವಾಗಿ ನುಡಿದಿದ್ದ ಪಿಎಂ ಮೋದಿ, ಬಂಗಾಳದಲ್ಲಿ ಬಿಜೆಪಿಯ ಗೆಲುವಿಗೆ ಬಿಹಾರವೇ ನಾಂದಿ ಹಾಡಿದೆ ಎಂದು ಕೇಸರಿ ಕೇಂದ್ರ ಕಚೇರಿಯಿಂದಲೇ ಬಂಗಾಳದ ಸಿಎಂ, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿಗೆ ಸವಾಲು ಹಾಕಿದ್ದರು.

2021ರ ವಿಧಾನಸಭೆ ಚುನಾವಣೆಯನ್ನು ಗೆಲ್ಲಲು ಬಿಜೆಪಿಗೆ ಸಾಧ್ಯವಾಗಿರಲಿಲ್ಲ. ಆದರೆ, 2016ರಲ್ಲಿ ಕೇವಲ 3 ಶಾಸಕರನ್ನು ಹೊಂದಿದ್ದ ಕೇಸರಿಪಡೆ, ಐದೇ ವರ್ಷದಲ್ಲಿ 77 ಶಾಸಕ ಸ್ಥಾನಗಳನ್ನು ತನ್ನದಾಗಿಸಿಕೊಂಡು ರಾಜ್ಯದ ಪ್ರಮುಖ ವಿಪಕ್ಷವಾಗಿ ಬದಲಾಗಿದ್ದು ಸಾಮಾನ್ಯ ಸಾಧನೆಯೇನಲ್ಲ.

2016ರ ಪೂರ್ವದಲ್ಲಿ ಬಿಜೆಪಿಗೆ ಇಲ್ಲಿ ಸಂಘಟನೆಯೇ ಇರಲಿಲ್ಲ. ಹಾಗಾಗಿ ಪಕ್ಷಕ್ಕೆ ರಾಜಕೀಯ ನೆಲೆಯೂ ಇರಲಿಲ್ಲ. ಆದರೆ, 2021ರ ಫಲಿತಾಂಶ ಟಿಎಂಸಿ ಭದ್ರಕೋಟೆಯನ್ನು ಅಲುಗಾಡಿಸಿತ್ತು. ಎಲ್ಲಕ್ಕಿಂತ ಮುಖ್ಯವಾಗಿ, ಒಂದೊಮ್ಮೆ ಮಮತಾ ಬ್ಯಾನರ್ಜಿ ಬಲಗೈ ಬಂಟನಾಗಿದ್ದ ಸುವೇಂದು ಅಧಿಕಾರಿ, ಚುನಾವಣೆ ಹೊಸ್ತಿಲಲ್ಲಿ ಬಿಜೆಪಿ ಸೇರ್ಪಡೆಯಾಗಿ ನಂದಿಗ್ರಾಮ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಮಮತಾರನ್ನು ಸೋಲಿಸಿ ಹೊಸ ಇತಿಹಾಸ ಸೃಷ್ಟಿಸಿದ್ದರು. ಶಿಷ್ಯನಿಂದಲೇ ಸೋಲನುಭವಿಸಿದ್ದ ದೀದಿ, ನಂತರ ಕೊಲ್ಕತ್ತಾದ ಭವಾನಿಪುರ ಕ್ಷೇತ್ರದ ಉಪಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಚುನಾವಣೆ ಗೆದ್ದು, ವಿಧಾನಸಭೆಯನ್ನು ಅಧಿಕೃತವಾಗಿ ಪ್ರವೇಶಿಸಿದ್ದರು. ನಂದಿಗ್ರಾಮ ಫಲಿತಾಂಶವನ್ನು ಅವರು ಕಲ್ಕತ್ತಾ ಹೈಕೋರ್ಟಿನಲ್ಲಿ ಪ್ರಶ್ನಿಸಿದ್ದರು ಮತ್ತು ಪ್ರಕರಣ ಇನ್ನೂ ಇತ್ಯರ್ಥವಾಗಿಲ್ಲ.

ಬಂಗಾಳವನ್ನು ಈ ಬಾರಿ ಗೆಲ್ಲಲೇಬೇಕು ಎಂದು ಪಣತೊಟ್ಟಿರುವ ಬಿಜೆಪಿಗೆ, ಹಿಂದೂ ಮತಗಳ ಪ್ರಬಲ ಕ್ರೋಢೀಕರಣದಿಂದ ಮಾತ್ರ ಇದು ಸಾಧ್ಯ ಎಂಬ ಸ್ಪಷ್ಟ ಅರಿವಿದೆ. ಅದೇ ಕಾರಣಕ್ಕಾಗಿ 2016ರ ವಿಧಾನಸಭೆ, 2019ರ ಲೋಕಸಭೆ, 2021ರ ವಿಧಾನಸಭೆ ಮತ್ತು 2024ರ ಲೋಕಸಭೆ ಚುನಾವಣೆಗಳಲ್ಲಿ ಕೂಡ ಹಿಂದೂ ಮತಗಳನ್ನು ಗುರಿಯಾಗಿಸಿಕೊಂಡೇ ತನ್ನ ರಣನೀತಿಗಳನ್ನು ರೂಪಿಸಿತ್ತು. ಈ ಸಲವೂ ಹಿಂದೂಗಳ ವೋಟಿಗಾಗಿ ಕಾರ್ಯಾಚರಣೆ ನಡೆಸಲಾಗಿದ್ದು, ಅದರ ಭಾಗವಾಗಿಯೇ ಕಳೆದ 6 ತಿಂಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಬಂಗಾಳಕ್ಕೆ 4 ಬಾರಿ ಪ್ರವಾಸ ಕೈಗೊಂಡಿದ್ದಾರೆ. ಗೃಹಸಚಿವ ಅಮಿತ್ ಶಾ ಅವರಂತೂ ಆಗಿಂದಾಗ್ಗೆ ಬಂಗಾಳಕ್ಕೆ ಭೇಟಿ ನೀಡುತ್ತಿದ್ದು, ಕಳೆದ 15 ವರ್ಷಗಳಿಂದ ಅಧಿಕಾರದಲ್ಲಿರುವ ಟಿಎಂಸಿಯಿಂದಾಗಿ ಬಂಗಾಳ ಹೇಗೆ ಅಭಿವೃದ್ಧಿವಂಚಿತವಾಗಿದೆ ಎಂಬುದನ್ನು ಜನರಿಗೆ ಮನದಟ್ಟು ಮಾಡಿ ಎಂಬುದನ್ನು ಕಾರ್ಯಕರ್ತರಿಗೆ ತಿಳಿಸುತ್ತಾ, ಆ ಮೂಲಕ ಮತದಾರರನ್ನು ಬಿಜೆಪಿ ಕಡೆ ಸೆಳೆಯುವ ಯತ್ನ ಮಾಡುತ್ತಿದ್ದಾರೆ.

2019ರ ಲೋಕಸಭೆ ಮತ್ತು ಕೊರೊನಾ ಮಹಾಮಾರಿ ಕಾಲದಲ್ಲಿ ನಡೆದಿದ್ದ 2021ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನಾನು ಬಂಗಾಳಕ್ಕೆ ತೆರಳಿ ಚುನಾವಣಾ ವರದಿಗಳನ್ನು ಮಾಡಿದ್ದೆ. 2014ರಲ್ಲಿ ಕೇವಲ 2 ಲೋಕಸಭೆ ಸೀಟುಗಳನ್ನು ಹೊಂದಿದ್ದ ಬಿಜೆಪಿ 2019ರಲ್ಲಿ 18 ಸೀಟುಗಳನ್ನು ಬಾಚಿಕೊಂಡು ತನ್ನ ಮತಪಾಲನ್ನು ಕೂಡ ಶೇ.16ರಿಂದ ಶೇ.40ಕ್ಕೆ ಏರಿಸಿಕೊಂಡಿತ್ತು. 2019ರ ಚುನಾವಣೆಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು ಕೂಡ 2 ವರ್ಷಗಳ ಹಿಂದೆಯೇ ಬಂಗಾಳಕ್ಕೆ ಬಂದು ಮನೆ ಮನೆಗೆ ತೆರಳಿ ಬಿಜೆಪಿ ಗೆಲುವಿಗಾಗಿ ಶ್ರಮಿಸಿದ್ದರು. 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಸೀಟುಗಳ ಸಂಖ್ಯೆ 18ರಿಂದ 12ಕ್ಕೆ ಕುಸಿದಿತ್ತು. ಮತಪಾಲಿನ ಪ್ರಮಾಣ 40ರಿಂದ 39ಕ್ಕೆ ಇಳಿಯಿತು. ಅಂದರೆ, ಸೀಟುಗಳು ಕಡಿಮೆಯಾದರೂ, ಬಿಜೆಪಿ ಜನಪ್ರಿಯತೆ ಪ್ರಮಾಣವೇನೂ ತಗ್ಗಿರಲಿಲ್ಲ.

ವಿಧಾನಸಭೆ ಚುನಾವಣೆ ಫಲಿತಾಂಶಗಳನ್ನು ಪರಿಶೀಲಿಸುವುದಾದರೆ; 2016ರಲ್ಲಿ ಬಿಜೆಪಿ ಗೆದ್ದದ್ದು 3 ಸೀಟುಗಳನ್ನು ಮಾತ್ರ. 2011ರಲ್ಲಿ ಶೂನ್ಯ ಸ್ಥಾನಗಳನ್ನು ಹೊಂದಿದ್ದ ಬಿಜೆಪಿ 2016ರಲ್ಲಿ ಖಾತೆ ತೆರೆದು 3 ಸ್ಥಾನಗಳನ್ನು ತನ್ನದಾಗಿಸಿಕೊಂಡಿತ್ತು. ಆದರೆ ಇದೇ ಸಂಖ್ಯೆ 2021ರಲ್ಲಿ 77ಕ್ಕೇರಿದಾಗ ಇಡೀ ದೇಶ ಬಂಗಾಳ ಬಿಜೆಪಿ ನಿರ್ವಹಣೆಯನ್ನು ಹುಬ್ಬೇರಿಸಿ ನೋಡಿತ್ತು. 2019ರ ಲೋಕಸಭೆ ಫಲಿತಾಂಶಗಳು 2021ರ ವಿಧಾನಸಭೆ ಚುನಾವಣೆ ಹೋರಾಟಕ್ಕೆ ಬಿಜೆಪಿಯ ನೈತಿಕ ಸ್ಥೈರ್ಯವನ್ನು ದ್ವಿಗುಣಗೊಳಿಸಿತ್ತು. ಈ ಬಾರಿ ಬಂಗಾಳ ಹೋರಾಟವನ್ನು ಮಾಡು ಇಲ್ಲವೇ ಮಡಿ ಎಂಬಂತೆ ಪರಿಗಣಿಸಿರುವ ಬಿಜೆಪಿ, ಈ ಸಲ ಗೆಲ್ಲದಿದ್ದರೆ ಮುಂದೆಂದೂ ಗೆಲ್ಲಲಾರೆವು ಎನ್ನುತ್ತಾ ಕಾರ್ಯಕರ್ತರ ಹುಮ್ಮಸ್ಸನ್ನು ಹೆಚ್ಚಿಸಿ, ಆ ಮೂಲಕ ಮತದಾರ ಮಹಾಪ್ರಭುವಿನ ಹೃದಯ ಪ್ರವೇಶಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ನಾವು ಬಿಜೆಪಿ ಪರ ಕೆಲಸ ಮಾಡಿದರೆ, ನಮ್ಮ ಮನೆಯ ಹೆಣ್ಣುಮಕ್ಕಳನ್ನು ಟಿಎಂಸಿಯವರು ಶಿಕ್ಷಿಸುತ್ತಾರೆ ಎಂಬ ಆತಂಕ ಈಗಲೂ ಲಕ್ಷಾಂತರ ಬಿಜೆಪಿ ಕಾರ್ಯಕರ್ತರಲ್ಲಿದೆ ಮತ್ತು ಇದು ವಾಸ್ತವವೂ ಹೌದು.

ಬಂಗಾಳದೊಂದಿಗೆ ಗಡಿ ಹಂಚಿಕೊಂಡಿರುವ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಆಗುತ್ತಿರುವ ನಿರಂತರ ದಾಳಿ ಹಾಗೂ ಕೊಲೆ ಪ್ರಕರಣಗಳು ಬಂಗಾಳದಲ್ಲಿ ಭಾರೀ ಸದ್ದು ಮಾಡುತ್ತಿವೆ. ಬಂಗಾಳದಲ್ಲಿ ನುಸುಳಿಕೊಂಡಿರುವ ಬಾಂಗ್ಲಾದೇಶಿಯರು ರಾಜ್ಯದ ಅಸ್ಮಿತೆಗೆ ಹಾನಿ ಮಾಡುತ್ತಿದ್ದಾರೆ. ಇನ್ನಾದರೂ ಬಂಗಾಳಿಗಳು ಜಾಗೃತಗೊಳ್ಳಬೇಕು ಎಂದು ಬಿಜೆಪಿ ವ್ಯವಸ್ಥಿತ ಪ್ರಚಾರ ಮಾಡುತ್ತಿದೆ. ಬಿಜೆಪಿಯು ಚುನಾವಣೆ ಗೆಲ್ಲುವುದಿದ್ದರೆ ಅದು ಹಿಂದೂಗಳ ಬೆಂಬಲದಿಂದ ಮಾತ್ರ ಸಾಧ್ಯ ಎಂಬ ವಾಸ್ತವ ಮೋದಿ-ಶಾಗೆ ಗೊತ್ತಿರುವುದರಿಂದ ಹಿಂದೂ ಜಾಗೃತಿ ಮಂತ್ರ ರಾಜ್ಯದಲ್ಲಿ ಜೋರಾಗಿ ಮೊಳಗುತ್ತಿದೆ. ಬಾಂಗ್ಲಾ ಜತೆಗಿನ ಆಂತರಿಕ ಸಂಘರ್ಷದಿಂದಾಗಿ ಬಾಂಗ್ಲಾದ ಕ್ರಿಕೆಟ್ ಆಟಗಾರ ಮುಸ್ತಫಿಜುರ್ ರೆಹಮಾನ್‌ರನ್ನು ಐಪಿಎಲ್ ಪಂದ್ಯಾವಳಿಗಾಗಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದಿಂದ ಹೊರಗಿಡಬೇಕೆಂಬ ಬಿಸಿಸಿಐ ತೀರ್ಮಾನ ಬಂಗಾಳ ಚುನಾವಣೆ ಜತೆಗೂ ಥಳುಕು ಹಾಕಿಕೊಂಡಿದೆ. ರಾಜ್ಯದಲ್ಲಿ ಹಿಂದೂ ಮತಗಳ ಕ್ರೋಢೀಕರಣದ ಲೆಕ್ಕಾಚಾರ ಬಿಜೆಪಿ ಈ ಕ್ರಮದ ಹಿಂದಿದೆ ಎಂದು ವಿವಿಧ ವಿಪಕ್ಷಗಳು ಆರೋಪ ಮಾಡಿವೆ.

ಹಾಗಂತ, ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳ ಹತ್ಯೆಗಳಾಗುತ್ತಿರುವುದು ನೆರೆಯ ಬಂಗಾಳದಲ್ಲಿ ಆತಂಕ, ಚರ್ಚೆಗಳಿಗೆ ಗ್ರಾಸವಾಗಿದೆ ಮತ್ತು ಅದೇ ಕಾರಣಕ್ಕಾಗಿ ಐಪಿಎಲ್‌ನಲ್ಲಿ ಅವರಿಗೆ ಅವಕಾಶ ನೀಡಬೇಡಿ ಎಂಬ ಗದ್ದಲ ಎಬ್ಬಿಸಲಾಗಿದೆ. ಬಾಂಗ್ಲಾದೇಶದಲ್ಲಿ ಹಿಂದೂಗಳ ಹತ್ಯೆ ಘಟನೆಗಳ ಹಿನ್ನೆಲೆಯಲ್ಲಿ ಬಾಂಗ್ಲಾದೇಶಿಗರನ್ನು ಬಂಗಾಳಿಗರು ನೋಡುವ ದೃಷ್ಟಿಕೋನ ಬದಲಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದು ನಿಜವೇ ಆಗಿದ್ದರೆ, ಬಂಗಾಳ ಚುನಾವಣೆ ಮೇಲೆ ಅದು ಖಂಡಿತಾ ಪರಿಣಾಮ ಬೀರಲಿದೆ.

ಕೆಲ ದಿನಗಳ ಹಿಂದೆ ಗೋವಾದಲ್ಲಿ ನಡೆದ ಸಾಗರ ಮಂಥನ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ್ದ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು, ಬಂಗಾಳ ನಮಗೆ ಕೇವಲ ರಾಜಕೀಯ ಯುದ್ಧವಲ್ಲ. ಅದು ನಾಗರಿಕ ಯುದ್ಧ. ನಾವು ಅದನ್ನು ಅದೇ ರೀತಿಯಲ್ಲಿ ನೋಡುತ್ತೇವೆ. ಭಾರತ ಉಳಿಸಬೇಕೆಂದರೆ, ನಾವು ಬಂಗಾಳವನ್ನು ಉಳಿಸಬೇಕು. ದೊಡ್ಡ ಜನಸಂಖ್ಯಾ ಸವಾಲಿನಿಂದ ಭಾರತವನ್ನು ರಕ್ಷಿಸಲು ನಾವು ಬಂಗಾಳವನ್ನು ಗೆಲ್ಲಲು ಬಯಸುತ್ತೇವೆ ಮತ್ತು ನಿಮ್ಮ ಆಶೀರ್ವಾದದಿಂದ ಬಂಗಾಳ ಗೆಲ್ಲುತ್ತೇವೆ ಹೇಳಿದ್ದರು. ಬಂಗಾಳ ಚುನಾವಣೆಯನ್ನು ಬಿಜೆಪಿ ಹೇಗೆ ಪರಿಗಣಿಸಿದೆ ಎನ್ನುವುದನ್ನು ಸಂತೋಷರ ಮಾತಿನಿಂದಲೇ ಅರ್ಥಮಾಡಿಕೊಳ್ಳಬಹುದು. ಬಂಗಾಳದ ಜತೆಗೆ ತಮಿಳುನಾಡು, ಕೇರಳ, ಅಸ್ಸಾಂ ರಾಜ್ಯ ಚುನಾವಣೆ ನಡೆದರೂ, ಬಿಜೆಪಿಯ ಮುಖ್ಯ ಗುರಿ ಪಶ್ಚಿಮ ಬಂಗಾಳವೇ ಆಗಿದೆ. ನೆರೆಯ ಬಾಂಗ್ಲಾದಲ್ಲಾಗುತ್ತಿರುವ ಹಿಂಸಾಚಾರ, ತಮ್ಮ ರಾಜ್ಯದಲ್ಲಿ ಟಿಎಂಸಿ-ಬಿಜೆಪಿ ಸಂಘರ್ಷಗಳ ಹಿನ್ನೆಲೆಯಲ್ಲಿ ಚುನಾವಣೆ ಹೊಸ್ತಿಲಲ್ಲಿ ಬಂಗಾಳ ರಣಾಂಗಣವಾಗುವ ಲಕ್ಷಣಗಳೇ ಕಾಣುತ್ತಿವೆ.

2019ರ ಲೋಕಸಭೆ ಚುನಾವಣೆ ವರದಿಗೆಂದು ಬಂಗಾಳದಲ್ಲಿದ್ದಾಗ ಆರ್‌ಎಸ್‌ಎಸ್‌ನಲ್ಲಿ ವಿಸ್ತಾರಕರಾಗಿ ಜವಾಬ್ದಾರಿ ಹೊತ್ತಿದ್ದ ಕರ್ನಾಟಕದ ಯುವಕರಾದ ಕರುಣಾಕರ ಖಾಸಲೆ, ಪ್ರಮೋದ್, ದಶರಥ ವಯಲಾಯ ಮತ್ತು ಅರುಣ್ ಬಿನ್ನಡಿಯವರು ಆಕಸ್ಮಿಕವಾಗಿ ಭೇಟಿಗೆ ಸಿಕ್ಕಿದ್ದರು. ಬಿಜೆಪಿ ಸಭೆಗಳು ಅಲ್ಲಿ ಹೇಗೆ ನಡೆಯುತ್ತವೆ ಎಂದು ಕುತೂಹಲದಿಂದ ನೋಡಲು ಹೋಗಿದ್ದಾಗ ಕನ್ನಡದಲ್ಲಿ ಮಾತನಾಡುತ್ತಿದ್ದ ಈ ನಾಲ್ವರು ಸಿಕ್ಕರು. ಅವರು ಬಂಗಾಳದ ವಿವಿಧ ಹಳ್ಳಿಗಳಲ್ಲಿ ಪ್ರಚಾರ ಕಾರ್ಯ ನಡೆಸಿ, ಸಭೆಗೆ ಬಂದಿದ್ದರು. ಬಂಗಾಳ ಚುನಾವಣೆಯನ್ನು ಸಂಘ ಮತ್ತು ಬಿಜೆಪಿ ಎಷ್ಟರ ಮಟ್ಟಿಗೆ ಗಂಭೀರವಾಗಿ ತೆಗೆದುಕೊಂಡಿತ್ತು ಮತ್ತು ಈ ಬಾರಿ ಬಿಜೆಪಿ ಸೀಟುಗಳ ಸಂಖ್ಯೆ ಖಂಡಿತವಾಗಿ ಹೆಚ್ಚಲಿದೆ ಎಂಬ ಅವರ ವಿಶ್ವಾಸದ ಮಾತುಗಳು ಲೋಕಸಭೆ ಫಲಿತಾಂಶದಲ್ಲೂ ಕಂಡುಬಂದಿತ್ತು. ಈ ಸಲದ ಚುನಾವಣೆಗೆ ಅರುಣ್ ಬಿನ್ನಡಿಯವರನ್ನು ಬಂಗಾಳದ ಸಿಲಿಗುರಿ ಭಾಗದಲ್ಲಿರುವ 28 ವಿಧಾನಸಭೆ ಕ್ಷೇತ್ರಗಳ ಸಂಘಟನಾ ಉಸ್ತುವಾರಿಯನ್ನಾಗಿ ಮಾಡಲಾಗಿದೆ. ಕಳೆದ 3 ತಿಂಗಳಿಂದ ಸಿಲಿಗುರಿಯನ್ನೇ ಮನೆ ಮಾಡಿಕೊಂಡಿರುವ ಅರುಣ್ ಬಿನ್ನಡಿ, ಬಂಗಾಳದಲ್ಲಿ ಕೆಲಸ ಮಾಡಬೇಕು, ಸಂಘಟನೆ ಕಟ್ಟಬೇಕು ಎಂದು ನೇಮಕ ಆದೇಶ ಹೊರಬೀಳುವ ಮುನ್ನವೇ ಅಲ್ಲಿ ಕೆಲಸ ಆರಂಭಿಸಿದ್ದರು!

ಈ ಹಿಂದೆ ಮಹಾರಾಷ್ಟ್ರ, ತಮಿಳುನಾಡು ಚುನಾವಣೆಗಳಲ್ಲಿ ಪಕ್ಷದ ಉಸ್ತುವಾರಿಯಾಗಿ ಕೆಲಸ ಮಾಡಿದ್ದ ಬಿಜೆಪಿ ಹಿರಿಯ ನಾಯಕ ಮತ್ತು ಶಾಸಕ ಸಿ.ಟಿ.ರವಿ ಅವರಿಗೂ ಬಂಗಾಳದ ಕೋಲ್ಕತ್ತಾ ವಲಯದ 30ಕ್ಕೂ ಹೆಚ್ಚು ಕ್ಷೇತ್ರಗಳ ಜವಾಬ್ದಾರಿಯನ್ನು ಹೆಗಲಿಗೇರಿಸಲಾಗಿದೆ. ಅದೇ ರೀತಿ ರಾಜ್ಯ ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಬಂಗ ಕಾಂಗ್ರೆಸ್ ಸ್ಕ್ರೀನಿಂಗ್ ಕಮಿಟಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. 2021ರಲ್ಲೂ ಬಂಗಾಳದಲ್ಲಿದ್ದ ಅವರು ಪಕ್ಷದ ಪ್ರಚಾರ ನಿರ್ವಹಣೆ ಉಸ್ತುವಾರಿ ಆಗಿದ್ದರು.

ಕೆಲ ದಿನಗಳ ಹಿಂದೆ ರಾಜ್ಯ ಬಿಜೆಪಿ ಕಾರ್ಯಕರ್ತರೊಬ್ಬರು ಸೌತ್ 24 ಪರಗಣ ಜಿಲ್ಲೆಯಲ್ಲಿದ್ದರು. ಅವರು ಬಿಜೆಪಿ ಬೆಂಬಲಿಸುವ 60ರ ಆಸುಪಾಸಿನಲ್ಲಿದ್ದ ಪತಿ-ಪತ್ನಿಯೊಂದಿಗೆ ಮಾತನಾಡುತ್ತಿದ್ದರು. ಅವರ 26 ವಯಸ್ಸಿನ ಮಗಳು 3 ವರ್ಷಗಳ ಹಿಂದೆ ಬಿಜೆಪಿ ಅಭ್ಯರ್ಥಿಯಾಗಿ ಪಂಚಾಯತ್ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದರಂತೆ. ಆದರೆ, ನಾಮಪತ್ರ ಸಲ್ಲಿಸಿದ್ದೇ ತಪ್ಪು ಎಂಬಂತೆ ಆಕೆಯನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆ ಮಾಡಲಾಗಿತ್ತು. ನಾಮಪತ್ರ ಸಲ್ಲಿಸುತ್ತಿದ್ದಂತೆ ಮಗಳನ್ನು ಟಿಎಂಸಿ ಕಾರ್ಯಕರ್ತರು ಅಪಹರಿಸಿ, ಸಾಮೂಹಿಕ ಅತ್ಯಾಚಾರ ಮಾಡಿ ಹತ್ಯೆಗೈದರು. ಆಕೆ ಚುನಾವಣೆಗೆ ನಿಲ್ಲದಿದ್ದಿದ್ದರೆ ಇಂದು ಬದುಕಿರುತ್ತಿದ್ದಳು ಎಂದಾಗ ಹೆತ್ತವರು ಕಣ್ಣಾಲಿಗಳು ಒದ್ದೆಯಾಗಿದ್ದವು. ಮಗಳ ಸಾವಿಗೆ ನ್ಯಾಯ ಬೇಕೆಂದು ಈಗಲೂ ಆ ಹೆತ್ತವರು ಕೋರ್ಟು, ಪೊಲೀಸ್ ಠಾಣೆಗೆ ಅಲೆಯುತ್ತಿದ್ದಾರೆ ಎಂದು ಆ ಕಾರ್ಯಕರ್ತರು ದೂರವಾಣಿಯಲ್ಲಿ ಮಾತನಾಡುತ್ತಾ ಹೇಳಿದರು. ಇಂಥಾ ಹಲವಾರು ಕಣ್ಣೀರ ಕಥೆಗಳು ಬಂಗಾಳದಲ್ಲಿ ಬೇಕಾದಷ್ಟು ಸಿಗುತ್ತವೆ. ಆದರೆ, ವರದಿಯಾಗುವುದು ಬೆರಳೆಣಿಕೆ ಮಾತ್ರ.

2021ರಲ್ಲಿ ಬಿಜೆಪಿಯ ಅರವಿಂದ ಬೆಲ್ಲದ್ ಅವರಿಗೆ ಬಂಗಾಳದಲ್ಲಿ ಕೆಲ ಕ್ಷೇತ್ರಗಳ ಜವಾಬ್ದಾರಿ ನೀಡಲಾಗಿತ್ತು. ನನಗೆ ಅವರು ಕೋಲ್ಕತ್ತಾದಲ್ಲಿ ಭೇಟಿಗೆ ಸಿಕ್ಕಿದ್ದರು. ಬನ್ನಿ ನಿಮಗೆ ಕೆಲ ಕ್ಷೇತ್ರಗಳಲ್ಲಿರುವ (ಬಿಜೆಪಿ ಬೆಂಬಲಿಸಿದ್ದ) ಸಂತ್ರಸ್ತ ಕುಟುಂಬಗಳನ್ನು ಭೇಟಿ ಮಾಡಿಸುತ್ತೇನೆ ಎಂದು ನನ್ನನ್ನು ಕೋಲ್ಕತ್ತಾದಿಂದ ಕೆಲ ಗ್ರಾಮೀಣ ಭಾಗಗಳಿಗೆ ಕರೆದುಕೊಂಡು ಹೋಗಿದ್ದರು. ಅಂಥವರಲ್ಲಿ ಒಂದು ಕುಟುಂಬದ ಮೂರ್ನಾಲ್ಕು ಹೆಣ್ಣುಮಕ್ಕಳು ನಾರಾಯಣಪುರ ಎಂಬಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ರ‍್ಯಾಲಿಯಲ್ಲಿ ಭಾಗಿಯಾಗಲು ತೆರಳಿದ್ದರು ಎಂಬ ಕಾರಣಕ್ಕಾಗಿ ಟಿಎಂಸಿ ಕಾರ್ಯಕರ್ತರಿಂದ ಲೈಂಗಿಕ ಹಿಂಸೆಗೆ ಒಳಗಾಗಿ, ತೀವ್ರ ಮಾನಸಿಕ ಆಘಾತಕ್ಕೀಡಾಗಿದ್ದರು. ನಿಮ್ಮ ನೋವುಗಳನ್ನು ನಮ್ಮ ಸುದ್ದಿವಾಹಿನಿ ಮುಂದೆ ಹೇಳಿಕೊಳ್ಳಿ ಎಂದು ನಾನು ಹೇಳಿದ್ದಕ್ಕೆ, ನೀವು ಸಂದರ್ಶನ ಮಾಡಿ ಇಲ್ಲಿಂದ ಹೋಗುತ್ತೀರಿ ಸರ್. ನಂತರ ವಿಷಯ ತಿಳಿದು ನಮ್ಮ ಮನೆಗಳ ಮೇಲೆ ದಾಳಿ ಮಾಡುತ್ತಾರೆ, ಹಿಂಸೆ ಕೊಡುತ್ತಾರೆ. ಇದು ನಮಗೆ ಬೇಕಾ ಎಂದಾಗ ನನಗೂ ಉತ್ತರ ನೀಡಲಾಗದೆ, ಪುಸ್ತಕದಲ್ಲಿ ಟಿಪ್ಪಣಿ ಮಾಡಿಕೊಂಡು ವಾಪಸಾಗಿದ್ದೆ. ಇಂಥ ಅನೇಕ ಸಂತ್ರಸ್ತರನ್ನು ಭೇಟಿ ಮಾಡಿದಾಗ, ಈ ರಾಜ್ಯದಲ್ಲಿ ದೌರ್ಜನ್ಯದ ವ್ಯವಸ್ಥಿತ ಮಾದರಿ ಹೇಗಿದೆ ಎಂಬುದೂ ಸಣ್ಣ ಮಟ್ಟಿಗೆ ಅರ್ಥವಾಗಿತ್ತು.

ಒಂದೊಮ್ಮೆ ಕಮ್ಯುನಿಸ್ಟ್ ಪಕ್ಷಗಳ ದಬ್ಬಾಳಿಕೆ, ದೌರ್ಜನ್ಯಕ್ಕೆ ಸಾಕ್ಷಿಯಾಗಿ ಬಳಲಿದ್ದ ಬಂಗಾಳದ ಮತದಾರರು, 2011ರಿಂದ ಟಿಎಂಸಿಯನ್ನು ಆಯ್ಕೆ ಮಾಡುತ್ತಾ ಬಂದಿದ್ದಾರೆ. 2021ರಲ್ಲಿ ಅನೇಕರು ಟಿಎಂಸಿಯಿಂದ ಬಿಜೆಪಿ ಕಡೆ ಹೊರಳಿದರು. ಈಗಲೂ ಬಂಗಾಳದಲ್ಲಿ ರಾಜಕೀಯ ಹಿಂಸಾಚಾರ- ಸಂಘರ್ಷಗಳು ನಿತ್ಯ ಬದುಕಿನ ಭಾಗವಾಗಿದೆ. ಇದನ್ನು ಕೋಲ್ಕತ್ತಾದಲ್ಲಿ ಕುಳಿತು ದೇಶದ ಯುವಕರು, ಮಹಿಳೆಯರ ಪರ ಮಾತನಾಡುತ್ತಾ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಒತ್ತಿಹೇಳುವ ಸಿಎಂ ಮಮತಾ ಬ್ಯಾನರ್ಜಿ ಒಪ್ಪದಿರಬಹುದು. ಆದರೆ, ಕಹಿ ಸತ್ಯದ ಅನಾವರಣವಾಗುವುದು ಬಂಗಾಳದ ಒಳಹೊಕ್ಕು ನೋಡಿದಾಗಲೇ.

ಸದ್ದಿಲ್ಲದೇ ಯಕ್ಷಗಾನದ ಅಭಿರುಚಿಯನ್ನುಳಿಸಿದವರು

ತಾಳಮದ್ದಳೆ

ಗಿಂಡೀಮನೆ ಮೃತ್ಯುಂಜಯ
vveditoped@gmail.com

ತಾಳಮದ್ದಳೆಯಲ್ಲಿ ಉದ್ದಾಮ ಅರ್ಥಧಾರಿಗಳ ಬಗ್ಗೆ ಅನೇಕ ಜನರು ಅನೇಕ ವಿಚಾರಗಳನ್ನು ಹೇಳುತ್ತಾರೆ. ಪದೇಪದೇ ಅವರನ್ನು ನೆನಪು ಮಾಡಿಕೊಳ್ಳುತ್ತಾರೆ. ಆದರೆ ಯಾರದೋ ಮನೆಯ ಜಗುಲಿಯಲ್ಲೋ, ಯಾವುದೋ ದೇವಸ್ಥಾನದಲ್ಲೋ ಹಾಸಿದ ಹಂಡಗಂಬಳಿಯ ಮೇಲೆ ಕುಳಿತು 'ಹಲಲಲ ಕೀಹ' ಎಂದವರನ್ನೋ, ಅರ್ಥ ಹೇಳಿದವರನ್ನೋ, ಅವರಿಗೆ ಪದ ಹೇಳಿದವರನ್ನೋ, ಆ ಭಾಗವತರಿಗೆ ಸಾಥ್ ನೀಡಿದ ಮೃದಂಗವಾದಕರನ್ನೋ, ಅವರಿಗೆ ಸೋರೆ ಬುರುಡೆಯಲ್ಲಿ ತನ್ನ ಉಸಿರು ತುಂಬುತ್ತ ಬೆಳಗಿನವರೆಗೂ ಶ್ರುತಿಯನ್ನು ಒದಗಿಸಿದ ಶ್ರುತಿವಾದಕನನ್ನೋ ಇಂದು ನೆನಪು ಮಾಡಿಕೊಳ್ಳುವವರು ಇಲ್ಲ. ಇಂದಿನ ಮಾನದಲ್ಲಿ ಅವರು ಹೇಳಿದ ಪದವಾಗಲೀ, ಹೇಳಿದ ಅರ್ಥವಾಗಲೀ ಬಾಲಿಶವಾಗಿ ಕಾಣಿಸಬಹುದು. ಆದರೆ ಅಂದು ಅದೇ ಘನವಾದ ಅರ್ಥವಾಗಿತ್ತು.

ನಾನು ಹೇಳುತ್ತಿರುವ ವಿಚಾರ ಈಗ 60-65 ವರ್ಷಗಳಿಗೂ ಹಿಂದಿನ ಕಾಲದ್ದು. ಯಕ್ಷಗಾನದ ಕ್ಷೇತ್ರ ಬಹಳ ದೊಡ್ಡದು. ಆಟ ಹಾಗೂ ತಾಳಮದ್ದಳೆ ಎರಡೂ ವಿಚಾರಗಳಲ್ಲಿ. ತಾಳಮದ್ದಳೆಗೆ ಜಾಗರ ಎಂಬ ಹೆಸರಿತ್ತು ನಮ್ಮ ಕಡೆ. ಅದು ಬಹಳ ಸರಳ. ಮೇಳ ಕಟ್ಟಬೇಕೆಂದಿಲ್ಲ. ಹಿಮ್ಮೇಳ ಮುಮ್ಮೇಳಗಳ ಕಲಾವಿದರ ಮನೆ ಬಾಗಿಲಿಗೆ ಹೋಗಿ ಅವರನ್ನು ನಮ್ಮ ಮೇಳಕ್ಕೆ ಬನ್ನಿ ಎಂದು ಕರೆತರುವ ಗೋಜಿಲ್ಲ. ಊರಿಂದೂರಿಗೆ ಅಲೆದು ವೀಳ್ಯ ತೆಗೆದುಕೊಳ್ಳುವ ರಗಳೆಯಿಲ್ಲ. ತಮ್ಮ ಮನೆಯ ಜಗುಲಿಯಲ್ಲಿ ಕಂಬಳಿ ಹಾಸಿದರಾಯಿತು. ಭಾಗವತರ ಎದುರು ಇಡಲಿಕ್ಕಾಗಿ ಒಂದು ಕಾಲುಮಣೆ. ಒಂದು ದೀಪದ ಗುಡ್ಡು. ಸಭೆಗೆ ಒಂದು ಲಾಟೀನು ಅಥವಾ ಅನುಕೂಲವಿದ್ದ ಪಕ್ಷದಲ್ಲಿ, ಗ್ಯಾಸ್ ಲೈಟು. ಒಂದು ಲೋಟದಲ್ಲಿ ಅಕ್ಕಿ ಅದರಲ್ಲಿ ಹುಗಿದ ಊದುಬತ್ತಿಗಳು. ಮೃದಂಗಕಾರನಿಗೆ ಬೋನ ತಯಾರಿಸಿಕೊಳ್ಳಲು ಅನ್ನ, ವಿಭೂತಿ ಅಷ್ಟೇ. ಅರ್ಥಧಾರಿಗಳು ಸ್ಥಳವಂದಿಗರೇ. ಅಥವಾ ಪಕ್ಕದ ಶೀಮೆಯವರು. ಜಾಗರ ಶುರುವಾದ ನಂತರವೂ ಸಣ್ಣಪುಟ್ಟ ಅರ್ಥಗಳಿಗೆ ಕೂತವರಲ್ಲಿ ಒಬ್ಬರಿಗೆ ನೀನು ಇಂಥ ಅರ್ಥ ಹೇಳು ಎಂದರಾಯಿತು. ಅವರಿಗೆಲ್ಲ ಪ್ರಸಂಗದಲ್ಲಿ ಆ ಪಾತ್ರಕ್ಕಿರುವ ಪದಗಳ ಕರಾರುವಾಕ್ಕಾದ ಮಾಹಿತಿ ಹೇಗಿರುತ್ತಿತ್ತು ಎಂಬುದು ನನಗೆ ಈಗಲೂ ಸೋಜಿಗದ ವಿಚಾರವೇ! ದೇವಸ್ಥಾನದಲ್ಲಾದರೂ ಅಷ್ಟೇ. ಪ್ರಸಂಗ ಬಹುಶಃ ಯಜಮಾನರ ಆಯ್ಕೆ.

ಮನೆಯಲ್ಲಿ ಶುಭಕಾರ್ಯಗಳೋ ವ್ರತವೋ ಇದ್ದರೆ ರಾತ್ರೆ ಜಾಗರ ಇರುತ್ತಿತ್ತು. ಉಪನಯನ, ಎಳೆ ಅಷ್ಟಮಿ, ನವರಾತ್ರಿ. ಅನಂತನ ಚತುರ್ದಶಿ ಮುಂತಾದವು ಮನೆಯಲ್ಲಿ ಜಾಗರ ಮಾಡುವ ಸಂದರ್ಭಗಳಾದರೆ, ಪ್ರಥಮೈಕಾದಶಿ ಜಾಗರ ದೇವಸ್ಥಾನಗಳಲ್ಲಿ. ಅಂದಿನ ತಾಳಮದ್ದಳೆಗಳು ಇಂದಿನ ಮಾನದಲ್ಲಿ ಶ್ರೇಷ್ಠ ಗುಣಮಟ್ಟದವು ಎನ್ನುವಂತಿಲ್ಲ. ಎಲ್ಲ ಅರ್ಥಧಾರಿಗಳೂ ಶ್ರೇಷ್ಠ ಅರ್ಥಧಾರಿಗಳೆನ್ನುವಂತಿಲ್ಲ.

ಆದರೆ, ವಾಗಾಡಂಬರವಿಲ್ಲದ ಅರ್ಥಗಳೇ ಆದರೂ ಭಾವಪೂರ್ಣ ಅರ್ಥಗಾರಿಕೆ ಅಂದಿನದು. ಕೃಷ್ಣಾರ್ಜುನರ ಕಾಳಗದ 'ಏಳು ಏಳಯ್ಯ ಮುದ್ದು ಭಾವಯ್ಯ, ಏನಾಯಿತೆಂದು, ಹೇಳು ಹೇಳಯ್ಯ ಮುದ್ದು ಭಾವಯ್ಯ' ಎಂಬ ಪದದ ಅರ್ಥ ಹೇಳುವಾಗ ಅರ್ಥಧಾರಿಯೂ ಗಳಗಳನೆ ಕಣ್ಣೀರು ಹರಿಸುತ್ತಿದ್ದುದೂ, ಜೊತೆಗೇ ಶ್ರೋತೃಗಳೂ ಕಣ್ಣೀರು ಹಾಕುತ್ತಿದ್ದುದೂ ಅಪರೂಪದ ದೃಶ್ಯವಾಗಿರಲಿಲ್ಲ. ಕರ್ಣಾರ್ಜುನರ ಕಾಳಗದಲ್ಲಿ ಕರ್ಣನು ತಾನು ರಥವನ್ನು ಮೇಲೆತ್ತುವವರೆಗೆ ಬಾಣಪ್ರಯೋಗ ಮಾಡಬೇಡ ಎಂದು ಅರ್ಜುನನಲ್ಲಿ ಬೇಡಿಕೊಂಡಾಗ, ತಾನೂ ದುಃಖಿಸುತ್ತ, 'ಅಷ್ಟೆಲ್ಲ ಬೇಡಿಕೊಳ್ಳುತ್ತಿದ್ದಾನೆ, ಸ್ವಲ್ಪ ತಡೆ' ಎಂದು ಕರ್ಣನ ಪರ ವಕಾಲತ್ತು ವಹಿಸಿ ಮಾತಾಡಿದ ಸಭಿಕರೂ ಇದ್ದರು!

ಹಾಗೆಯೇ ಒಮ್ಮೆ ಪದ ಹೇಳಿದ ನಂತರ 'ಸಮ ಆಗಲಿಲ್ಲ. ತಡೆ, ಮತ್ತೆ ಹೇಳುತ್ತೇನೆ' ಎಂದು ಅದೇ ಪದವನ್ನೇ ಮತ್ತೆ ಹೇಳುತ್ತಿದ್ದ ಭಾಗವತರೂ ಇದ್ದರು. ಶ್ರುತಿ ಬಿಟ್ಟು ಪದ ಹೇಳುವ ಭಾಗವತರೂ ಇದ್ದರು. 'ಪಂಚಪಂಚ ಉಷಃಕಾಲೇ ಸಪ್ತಪಂಚ ಅರುಣೋದಯಃ' ಎಂದೇ ಪೀಠಿಕೆಯನ್ನು ಆರಂಭಿಸುತ್ತಿದ್ದ ಅರ್ಥಧಾರಿಗಳೂ ಇದ್ದರು. ಗ್ರಾಂಥಿಕ ಭಾಷೆಯ ಅರಿವಿಲ್ಲದೇ ಆಡುಭಾಷೆಯ ಶಬ್ದಗಳನ್ನೆ ಬಳಸಿ ಅರ್ಥ ಹೇಳುತ್ತಿದ್ದ ಅರ್ಥಧಾರಿಗಳೂ ಇದ್ದರು. 'ಅದರ ಅರ್ಥ ಅದರಲ್ಲೇ ಇದೆ. ಸೈ ಮುಂದಿನ ಪದ ಹೇಳಿ' ಎಂದ ಅರ್ಥಧಾರಿಗಳೂ ಇದ್ದರು. ಆದರೆ ನಾನು ಹೇಳಬೇಕಾದ ಮುಖ್ಯವಿಚಾರಕ್ಕೆ ಈಗ ಬರುತ್ತಿದ್ದೇನೆ. ಹಾಗೆ ಯಾವುದೋ ಮನೆಯ ಜಗುಲಿಯಲ್ಲೋ, ಯಾವುದೋ ದೇವಸ್ಥಾನದಲ್ಲೋ ತಮಗೆ ಇದ್ದ ಶಬ್ದಭಂಡಾರವನ್ನೇ ಬಳಸಿಕೊಂಡು ಪದದ ಭಾವವನ್ನು ಬಿಡದೇ, ಇಂದಿನ ಶ್ರೋತೃಗಳಿಗೆ ನಗು ಬರುವ ಹಾಗೆ, ಅರ್ಥ ಹೇಳುತ್ತಿದ್ದ ಆ ಅರ್ಥಧಾರಿಗಳು, ಈಗಿನ ಭಾಗವತರಿಗೆ ಹೋಲಿಸಿದರೆ ಕೇವಲ ಬಾಲಿಶವೆನ್ನಿಸಬಹುದಾದ ರೀತಿಯಲ್ಲಿ ಪದ ಹೇಳುತ್ತಿದ್ದ ಭಾಗವತರೂ, ಮೃದಂಗವನ್ನು ಧನುಡಿಸುವ ಸಾಮರ್ಥ್ಯವಿಲ್ಲದಿದ್ದರೂ ಅದನ್ನು ಬಡಿಯುತ್ತಿದ್ದ ಮೃದಂಗಕಾರರೂ ತಮಗೇ ಗೊತ್ತಿಲ್ಲದೇ ಒಂದು ಅಮೋಘ ಸೇವೆಯನ್ನು ಯಕ್ಷಗಾನ ಲೋಕಕ್ಕೆ ಮಾಡುತ್ತಿದ್ದರು! ಅದೇ ಅಂದಿನ ಶ್ರೋತೃಗಳಲ್ಲಿ ಯಕ್ಷಗಾನದ ಅಭಿರುಚಿಯನ್ನು ಉಳಿಸಿದ್ದು! ಈ ತಾಳಮದ್ದಳೆಗಳ ಪ್ರಭಾವ ಎಷ್ಟಿತ್ತೆಂದರೆ ಅಂದು ಮಕ್ಕಳಾಗಿದ್ದ ನಾವೂ ಅಲ್ಲಿ ಇಲ್ಲಿ ಜಾಗರ ಮಾಡುತ್ತಿದ್ದೆವು! ಅದಕ್ಕೆ ವೀಳ್ಯವಾಗಿ 8-10 ರು. ಕೊಡುತ್ತಿದ್ದರು. ಅವರು ಕೊಟ್ಟ ಅವಲಕ್ಕಿ, ಕಾಯಿ, ಬೆಲ್ಲಗಳು ಹೊಳೆಯ ದಡದಲ್ಲಿ ನಮ್ಮ ಬೆಳಗಿನ ಉಪಾಹಾರ!

ಅವರಿಗೆ ಅರಿವಿಲ್ಲದೆಯೇ ಆ ಪ್ರದೇಶದ ಜನಸಮೂಹದಲ್ಲಿ ಯಕ್ಷಗಾನದ ಅಭಿರುಚಿಯನ್ನು ಕಾಪಾಡಿ, ನೇಪಥ್ಯಕ್ಕೆ ಸರಿದು ಹೋಗಿರುವ ಆ ಕಲಾವಿದರಿಗೆ ನಮ್ಮ ದೀರ್ಘದಂಡ ನಮಸ್ಕಾರವನ್ನು ಮಾಡಬೇಕು. ಆಗಿನ ತಾಳಮದ್ದಳೆಗಳನ್ನು ನೆನಸಿಕೊಂಡು ನಗುವದಲ್ಲ. ಒಂದುವೇಳೆ ಅವರು ತಮಗೆ ತಿಳಿದ ರೀತಿಯಲ್ಲಿ ತಾಳಮದ್ದಳೆಗಳನ್ನು ಮಾಡಿ ತೋರಿಸದೆ ನಮಗೆ ಇದು ಹೇಳಿಸಿದ್ದಲ್ಲ ಎಂದು ಹಾಗೇ ಕುಳಿತಿದ್ದರೆ ಆಗಿನ ಆ ಪ್ರಾಂತ್ಯದ ಜನಸಮೂಹಕ್ಕೆ ಯಕ್ಷಗಾನದ ಬಗ್ಗೆ ಅವಜ್ಞೆ ಬೆಳೆದು ಆ ಕುರಿತು ಅಜ್ಞಾನವೇ ಮುಸುಕುತ್ತಿತ್ತು. ಮುಂದೊಂದು ದಿನ ಅವರ ಮಧ್ಯವೇ ಶ್ರೇಷ್ಠ ಕಲಾವಿದರು ಹುಟ್ಟಿ ಬರುವ ಸಾಧ್ಯತೆಯೇ ಇರದೇಹೋಗುತ್ತಿತ್ತು. ಶೇಣಿಯವರಂತಹ ಯಕ್ಷಗಾನ ಲೋಕದ ಘಟಾನುಘಟಿ ಅರ್ಥಧಾರಿಗಳು, ಶಿವರಾಮ ಹೆಗಡೆ, ಕುರಿಯ ವಿಟ್ಠಲಶಾಸ್ತ್ರಿಯವರಂತಹ ವೇಷಧಾರಿಗಳು ಆ ಪ್ರಾಂತ್ಯದಲ್ಲಿ ಸನಿಹದಲ್ಲೇ ಬಂದರೂ ಸಹ ಅವರ ಅರ್ಥವನ್ನು ಕೇಳುವ, ಅವರ ವೇಷವನ್ನು ನೋಡುವ ಕುತೂಹಲವೇ ಮೂಡುತ್ತಿರಲಿಲ್ಲ. ಆ ಒಂದು ಜ್ಞಾನ, ಆ ಒಂದು ರುಚಿ ಜನರಲ್ಲಿ ಉಳಿದುಬರಲು ಆ ಮುಗ್ಧ ಕಲಾವಿದರೇ ಕಾರಣ. ಮಲೆನಾಡಿನಲ್ಲಿ, ಬೇಸಿಗೆಯಲ್ಲಿ ಅದೃಶ್ಯವಾಗಿರುವ ಉಂಬಳಗಳು ಒಂದು ಮಳೆ ಬಿದ್ದೊಡನೇ ಜೀವ ತಳೆದು ಬರುವಂತೆ, ಸುಪ್ತವಾಗಿದ್ದ ಯಕ್ಷಗಾನಾಭಿರುಚಿ, ಪ್ರೀತಿ ಗರಿಗೆದರಿ ಶ್ರೇಷ್ಠತೆಯ ಆರಾಧನೆಗೆ ಸನ್ನದ್ಧವಾಗುತ್ತದೆ ಆ ಜನಜೀವನ! ಇದಕ್ಕೆ ಕಾರಣ ಅವರು, ಯಕ್ಷಗಾನದ ಅಭಿರುಚಿಯನ್ನುಳಿಸಿದ ಆ ಮರೆಯಾದ ಕಲಾವಿದರು! ಅದಕ್ಕಾಗಿ ಅವರಿಗೆ ನಮೋ ನಮಃ!

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮುಟ್ಟಿನ ರಜೆ ಬದಲು ಹಾಜರಾತಿ ನೀಡಿ

ದೇಶದ ಕೆಲವೊಂದು ಉತ್ತರದ ರಾಜ್ಯಗಳು ಕಾರ್ಖಾನೆಗಳ ಮಹಿಳಾ ಉದ್ಯೋಗಿಗಳಿಗೆ ಹೊಸದಾಗಿ 'ಋತುಚಕ್ರ' ರಜೆಯನ್ನು ಜಾರಿಗೆ ತಂದಂತೆ, ಕರ್ನಾಟಕದಲ್ಲಿಯೂ ರಾಜ್ಯ ಸರಕಾರ ವರ್ಷದಲ್ಲಿ ಒಟ್ಟಾರೆ ವರ್ಷದಲ್ಲಿ 18ರಿಂದ 28ರಷ್ಟು ಮಾತ್ರ ವಿವಿಧ ರಜೆಗಳ ಸೌಲಭ್ಯವಿರುವ ಕೈಗಾರಿಕೆಗಳಲ್ಲಿಯ ಮಹಿಳಾ ನೌಕರರಿಗೆ ತಿಂಗಳಿಗೊಂದರಂತೆ ವರ್ಷದಲ್ಲಿ ಒಟ್ಟು 12 ಋತು ಚಕ್ರರಜೆಯನ್ನು ಜಾರಿಗೆಗೊಳಿಸಿತು. ತದನಂತರ ಸರಕಾರಿ ನೌಕರರ ಮನವೀಯ ಮೇರೆಗೆ (ಎಣ್ಣೆ ಚೆಲ್ಲಿದವರೂ ಅತ್ತಂತೆ ಕಾಯಿ ಬೀಳಿಸಿಕೊಂಡವರೂ ಅತ್ತಂತೆ !) ವರ್ಷದಲ್ಲಿ ಸುಮಾರು 60 ದಿನಗಳ ವಿವಿಧ ರಜೆ ಪಡೆಯುವ ಸರಕಾರಿ ಮಹಿಳಾ ನೌಕರರಿಗೂ ಈ ವಿಶೇಷ ರಜೆಯನ್ನು ಜಾರಿಗೊಳಿಸಿರುವುದು ಸಮಾಜದಲ್ಲಿ ಮಹಿಳೆಯರ ಬಗ್ಗೆ ಇರುವ ಕಾಳಜಿಯನ್ನು ಗುರುತಿಸಬಹುದು. ಆದರೆ ಋತುಚಕ್ರ ರಜೆಯನ್ನು ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರಿಗೆ (ಅದರಲ್ಲೂ ಸಹ ಶಿಕ್ಷಣ ಇರುವ ವಿದ್ಯಾಲಯಗಳಲ್ಲಿ) 'ಮುಟ್ಟಿನ ರಜೆಯನ್ನು' ಬ್ರ್ಯಾಂಡ್ ಮಾಡಿ ಜಾಹೀರಾತುಗೊಳಿಸುವುದು ವಿದ್ಯಾರ್ಥಿನಿಯರಿಗೂ ಮುಜುಗರ ವಾಗುವುದರಿಂದ ಸರಿಯೆನಿಸದು. ಕೆಲವೊಂದು ದೈಹಿಕ ಪ್ರಕ್ರಿಯೆಗಳು ಆಯಾ ವ್ಯಕ್ತಿಯ ಖಾಸಗಿ ವಿಷಯವಾಗಿದ್ದು, ಅನೇಕರು ಅದನ್ನು ಜಾಹೀರಾತುಗೊಳಿಸದೆ ಗುಪ್ತವಾಗಿಡಲು ಬಯಸುವುದೂ ಉಂಟು. ಋತುಚಕ್ರಾವಧಿಯ ಹತ್ತಿರದ ದಿನಗಳನ್ನು ಕೆಲವೊಂದು ದೃಷ್ಟಿಯಿಂದ 'ಸುರಕ್ಷಿತ' ಕಾಲವೆಂದೂ ಪರಿಗಣಿಸಲಾಗುತ್ತದೆ. ಸಹ ಶಿಕ್ಷಣದ ವಿದ್ಯಾಲಯಗಳಲ್ಲಿ ಸಹ ವಿದ್ಯಾರ್ಥಿಗಳ ಎಲ್ಲೇ ಮೀರಿದ ವರ್ತನೆಯನ್ನೂ ಎದುರಿಸಬೇಕಾದ ಸಂಧರ್ಭವೂ ಇದೆ. ಅಲ್ಲದೆ ಮನೆಯಲ್ಲಿ ಶಾಲೆಗೆಂದೂ, ಶಾಲೆಯಲ್ಲಿ ಮುಟ್ಟಿನ ರಜೆಯೆಂದೂ ರಜೆಯನ್ನು ದುರುಪಯೋಗಿಸುವಂತಹ ವಿದ್ಯಾರ್ಥಿನಿಯರೂ ಇಲ್ಲಲಯವೆನ್ನುವಂತಿಲ್ಲ.

ವಿದ್ಯಾರ್ಥಿನಿಯರ ಬೇಡಿಕೆಯೂ ನ್ಯಾಯವಾದುದ್ದೆ. ಈ ರೀತಿ ಬ್ರ್ಯಾಂಡ್ ಮಾಡುವುದರಿಂದ ಅವರ ನೆಮ್ಮದಿಗೆ ತಿರುಗುಬಾಣವಾಗಬಾರದು. 'ಕಾಲಿಗೆ ಮುಳ್ಳು ಚುಚ್ಚಬಾರದೆಂದು ಚಪ್ಪಲಿ ಕೊಂಡರೆ, ಚಪ್ಪಲಿಯೇ ಕಾಲಿಗೆ ಚುಚ್ಚಬಾರದಲ್ಲವೇ? ಸರಳ ಮಾರ್ಗವೆಂದರೆ, ಎಲ್ಲಾ ವಿದ್ಯಾರ್ಥಿನಿಯರಿಗೂ ಶಾಲಾ ಕಾಲೇಜುಗಳಲ್ಲಿ ತಿಂಗಳಿಗೊಂದರಂತೆ 10 ತಿಂಗಳಿಗೆ ಒಟ್ಟು 10 ಅಧಿಕ ದಿನಗಳ ಹಾಜರಾತಿಯನ್ನು ಗೈರು ಹಾಜರಾದರೂ ನೀಡಿ ಬಗೆಹರಿಸುವುದು.

-ಬೆಳ್ಳೆ ಚಂದ್ರಶೇಖರಶೆಟ್ಟಿ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಶ್ರೀ ಪೂಜಾರಿ, ಕೊಳ್ಳೂರು**
  ಭಟ್ರೇ, ರಂಗದಲ್ಲಿ ಮಾತ್ರ ನೈತಿಕತೆ ಬೋಧಿಸುವವರಿಗೆ ಏನೆನ್ನಬಹುದು?
- **ವಾ ರಂಗಭಟ್ಟ ಎಂದು ಹೇಳಬಹುದು ಎಂದು ನಿರೀಕ್ಷಿಸಬೇಡಿ!**

- **ಸಂದೇಶ ಮಾಡಗೇರಿ, (ಇಮೇಲ್ ಮೂಲಕ)**
  ಭಟ್ರೇ, ನೀವು ತಾಳಮದ್ದಳೆಯ ಅರ್ಥಧಾರಿಗಳನ್ನು 'ಐಟಮ್ ಸಾಂಗ್ ಡಾನ್ಸರ್' ಎಂದು ಕರೆದಿದ್ದನ್ನು ಕೆಲವರು ತಿರಸ್ಕರಿಸಿದ್ದಾರಲ್ಲ?
- **'ಕುಂಬಳಕಾಯಿ ಕಳ್ಳ' ಅಂದ್ರೆ, ಇವರೇಕೆ ಹೆಗಲು ಮುಟ್ಟಿಕೊಂಡ್ರು ?!**

- **ವಿನಾಯಕ ಭಟ್, ಹೊನ್ನಾವರ**
  ಭಟ್ರೇ, ಅರ್ಥಧಾರಿಗಳ ಕೋಪ ಇನ್ನೂ ಶಮನವಾದಂತಿಲ್ಲ?
- **ಅದು ಈಗ ಹತಾಶೆ, ಹಳಹಳಿಕೆಯಾಗಿ ಪರಿವರ್ತಿತವಾಗಿದೆಯಂತೆ!**

- **ಹರೀಶ ಕೆ.ಎಸ್., (ವಾಟ್ಸಾಪ್ ಮೂಲಕ)**
  ಭಟ್ರೇ, ಕುಡಿದವರನ್ನು ಟೈಟ್ ಆಗಿದ್ದಾರೆ ಎಂದು ಏಕೆ ಹೇಳುತ್ತಾರೆ?
- **ಅವರ ವರ್ತನೆ ನೋಡಿ ಲೂಸ್ ಆಗಿದ್ದಾರೆ ಎಂದು ಹೇಳಬಹುದು!**

- **ಮಂಜುನಾಥ ಹಿರೇಮಠ, ಬೆಳಗಾವಿ**
  ಭಟ್ರೇ, ಮೇಕಪ್ ಮತ್ತು ಸುಳ್ಳಿನ ನಡುವೆ ಇರುವ ಸಾಮ್ಯತೆ ಏನು?
- **ಎರಡೂ ಕೂಡ ಸತ್ಯವನ್ನು ಮುಚ್ಚಿಡಲು ಪ್ರಯತ್ನಿಸುತ್ತವೆ, ಆದರೆ ಬೆವರುತ್ತಿದ್ದಂತೆ ಅಸಲಿ ವಿಷಯ ಹೊರಬರುತ್ತದೆ!**

- **ರೂಪೇಶ ಕೆ., ಅರಸೀಕೆರೆ**
  ಭಟ್ರೇ, ಗಂಡಂದಿರಿಗೆ ಶಾಪಿಂಗ್ ಮಾಲ್ ಎಂದರೆ ಯಾಕೆ 'ಭಯಾನಕ ಸ್ಥಳ'ವಾಗಿ ಕಾಣುತ್ತದೆ?
- **ಯಾಕೆಂದರೆ ಅಲ್ಲಿ ಹೆಂಡತಿಯ ಕೈಯಲ್ಲಿ ಬ್ಯಾಗ್‌ಗಳೂ, ಗಂಡನ ಕೈಯಲ್ಲಿ ಖಾಲಿಯಾದ ಪರ್ಸ್‌ಗಳೂ ಮಾತ್ರ ಉಳಿಯುತ್ತವೆ!**

- **ವಿ.ನರಸಿಂಹಮೂರ್ತಿ, ಬೆಂಗಳೂರು**
  ಭಟ್ರೇ, ವಿಚ್ಛೇದನ ಇಷ್ಟು ದುಬಾರಿಯಾಗಿರಲು ಕಾರಣವೇನು?
- **ಯಾಕೆಂದರೆ ಅದು ಮನುಷ್ಯನಿಗೆ 'ಸ್ವತಂತ್ರ'ವಾಗಿ ಬದುಕಲು ಸಿಗುವ ಅಂತಿಮ ಮತ್ತು ದುಬಾರಿ ರಿಲೀಸ್ ಆರ್ಡರ್'!**

ತಾಳಮದ್ದಳೆಯಲ್ಲಿ ಆತ್ಮಾವಲೋಕನ ಅಗತ್ಯ

ತಪ್ಪಿದ ತಾಳ

ಡಾ.ರಾಮಕೃಷ್ಣ ಮುದ್ದೇಪಾಲ
vveditoped@gmail.com

ಆಟ-ಕೂಟಗಳನ್ನೊಳಗೊಂಡಿರುವ ಕರ್ನಾಟಕದ ಹೆಮ್ಮೆಯ ಕಲೆ ಯಕ್ಷಗಾನ ಅದರಲ್ಲಿಯೂ ತಾಳಮದ್ದಳೆ ಈ ಮೊದಲು ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಚರ್ಚಿಸುವ ವಿಷಯವಾಗಿರಲಿಲ್ಲ. ವಿಶ್ವೇಶ್ವರ ಭಟ್ಟರ ಉಪಕ್ರಮದಿಂದ ಇದೀಗ ತಾಳಮದ್ದಳೆಯ ಕುರಿತು ಮುಕ್ತ ಅಭಿಪ್ರಾಯ ವಿನಿಮಯಕ್ಕೆ ಮತ್ತು ಅರ್ಥಪೂರ್ಣ ಸಂವಾದಕ್ಕೆ ವೇದಿಕೆ ದೊರೆತಿರುವುದು ಯಕ್ಷಗಾನಾಭಿಮಾನಿ ಗಳಿಗೆ ಸಂತಸದ ವಿಷಯವೇ ಸರಿ. ಹಾಗೆ ನೋಡಿದರೆ ಕೂಟವೆಂದು ಕರೆಯಿಸಿಕೊಳ್ಳುವ ತಾಳಮದ್ದಳೆಗಿಂತಲೂ ಆಟವೆಂದು ಪ್ರಸಿದ್ಧವಾಗಿರುವ ಯಕ್ಷಗಾನ ಪ್ರದರ್ಶನದಲ್ಲಿ ಕಂಡುಬರುತ್ತಿರುವ ಅಪಸವ್ಯಗಳು ಹೆಚ್ಚಾಗಿವೆ. ಇದು ಸಾಮಾನ್ಯ ಪ್ರೇಕ್ಷಕನಿಗೂ ವಿದಿತವಾಗಿರುವ ವಿಷಯ. ಈ ಅಸಂಗತ ಅಪಸವ್ಯಗಳಿಗೆ ಕಲಾವಿದರು ಮತ್ತು ಪ್ರೇಕ್ಷಕರು ಸಮಾನರಾಗಿ ಹೊಣೆಗಾರರಾಗಿದ್ದಾರೆ ಎಂದೆನಿಸುತ್ತದೆ.

ತಾಳಮದ್ದಳೆ ಕ್ಷೇತ್ರವನ್ನು ಅವಲೋಕಿಸಿದರೆ ಅದು ತನ್ನ ಅಂತಸ್ಸತ್ವ, ಸೃಜನಶೀಲತೆ, ಮೌಲ್ಯಪ್ರತಿಪಾದನೆ, ಗಾಂಭೀರ್ಯ, ಶೃಂಗಾರ ಮುಂತಾದ ವೈವಿಧ್ಯಮಯ ಮತ್ತು ವೈಶಿಷ್ಟ್ಯಪೂರ್ಣ ಅಂಶಗಳಿಂದ ಕಲಾಪ್ರಕಾರವಾಗಿ ಎತ್ತರದ ಸ್ಥಾನದಲ್ಲಿದ್ದರೂ ಕೂಡ ಪ್ರಸ್ತುತ ಕಾಲಘಟ್ಟದಲ್ಲಿ ಸಂಧಿಸ್ಥಳದಲ್ಲಿದೆ. ಸ್ಪೇನ್‌ನ ತತ್ವಜ್ಞಾನಿ ಜಾರ್ಜ್ ಸಾಂಟಿಯಾನಾ ಅವರ ಪ್ರಸಿದ್ಧ ಹೇಳಿಕೆ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. Culture is on the horns of this dilemma. If profound and noble, it must remain rare, if common it must become mean. ಸಂಸ್ಕೃತಿ ಈ ಸಂದಿಗ್ಧತೆಯ ಕೊಂಬಿನ ಮೇಲೆ ನಿಂತಿದೆ. ಅಗಾಧ ಮತ್ತು ಉದಾತ್ತವಾಗಬೇಕಾದರೆ ಅದು ಅಪರೂಪವಾಗಿರಬೇಕು. ಅದು ಸಾಮಾನ್ಯವಾದರೆ ಕಳಪೆಯಾಗುತ್ತದೆ. ಯಕ್ಷಗಾನ ಮತ್ತು ತಾಳಮದ್ದಳೆ ಕ್ಷೇತ್ರಗಳನ್ನೊಳಗೊಂಡಂತೆ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಎಲ್ಲ ಕಲಾಪ್ರಕಾರಗಳಿಗೆ ಈ ಹೇಳಿಕೆ ಒಪ್ಪುತ್ತದೆ.

ತಾಳಮದ್ದಳೆ ಒಂದು ವರ್ಗಕ್ಕೆ ಸೀಮಿತವಾಗದೆ ಬಹುಜನ ಮಾನಸದಲ್ಲಿ ನೆಲೆನಿಲ್ಲಬೇಕಾದರೆ ಕೆಲವು ಬದಲಾವಣೆಗಳು ಅನಿವಾರ್ಯವಾಗಬಹುದು. ಅದು ತನ್ನ ಶಾಸ್ತ್ರೀಯತೆ ಮತ್ತು ಸಾಂಪ್ರದಾಯಿಕತೆಯನ್ನು ಕಾಯ್ದುಕೊಂಡೇ ತನ್ನ ಪ್ರಾದೇಶಿಕ ನೆಲೆಯನ್ನು ವಿಸ್ತರಿಸಿಕೊಳ್ಳುತ್ತ ಸಮಾಜದ ವಿವಿಧ ಸ್ತರಗಳಲ್ಲಿರುವ ವ್ಯಕ್ತಿಗಳಿಗೆ ತಲುಪಬೇಕಿದೆ. ಇವತ್ತು ತಾಳಮದ್ದಳೆಯ ಪ್ರದರ್ಶನಕ್ಕೆ ಬರುವವರು ಹೆಚ್ಚಿನವರು ಇಳಿವಯಸ್ಸಿನವರು ಮತ್ತು ಮಧ್ಯವಯಸ್ಕರು. ಯುವಜನತೆಗೆ ಈ ಕಲಾಪ್ರಕಾರವನ್ನು ಪರಿಚಯಿಸಲು ತಾಳಮದ್ದಳೆಯ ಪಾರಂಪರಿಕ ಚೌಕಟ್ಟಿನಲ್ಲಿಯೇ ಯಾವ ಗುಣಾತ್ಮಕ ಬದಲಾವಣೆಯ ಅಥವಾ ವಿಭಿನ್ನ ಪ್ರಸ್ತುತಿಯ ಅಗತ್ಯವಿದೆ ಎನ್ನುವುದು ಗಂಭೀರವಾದ ಚಿಂತನೆಯ ವಿಷಯ.

ಯಕ್ಷಗಾನ ಮತ್ತು ತಾಳಮದ್ದಳೆ ಇವೆರಡು ಪದಗಳು ಗಾಯನ ಮತ್ತು ವಾದನ ಈ ಕಲೆಯ ಮೂಲವಾಗಿರುವುದನ್ನು ಸೂಚಿಸುತ್ತವೆ. ಪ್ರದರ್ಶನ ಕಲೆಯಾಗಿ ಬೆಳೆದ ಹಾಗೇ ಇತರ ಅಂಶಗಳು ಆಮೇಲೆ ಸೇರ್ಪಡೆಯಾಗಿರಬಹುದು. ತಾಳಮದ್ದಳೆಯಲ್ಲಿ ಹಿಮ್ಮೇಳ ಮತ್ತು ಅರ್ಥಗಾರಿಕೆ ಇವೆರಡರಲ್ಲಿ ಸಮತೋಲನವಿರಬೇಕಾಗುತ್ತದೆ. ಈ ಸಮತೋಲನದ ಕೊರತೆ ಇವತ್ತು ಹೆಚ್ಚಿನ ಪ್ರದರ್ಶನಗಳಲ್ಲಿ ಕಂಡುಬರುತ್ತದೆ. ಹಿಮ್ಮೇಳದಲ್ಲಾಗಲೀ ಅರ್ಥಗಾರಿಕೆಯಲ್ಲಾಗಲೀ ಅತಿಬೇಡವೆಲ್ಲಿಯುಂ ಮಂಕುತಿಮ್ಮ ಎಂಬ ಡಿವಿಜಿಯವರ ಮಾತಿನಂತೇ ಮಿತಿಯನ್ನು ಪಾಲಿಸಿದರೆ ಹಿತ.

ಹಿಮ್ಮೇಳದ ಪ್ರಧಾನ ಭಾಗವಾಗಿರುವ ಭಾಗವತಿಕೆ ಯಲ್ಲಾಗಿರುವ ಸ್ಥಿತ್ಯಂತರ ಕಳವಳಕಾರಿ. ಯಕ್ಷಗಾನ ಸಂಗೀತವು ಕರ್ನಾಟಕ ಸಂಗೀತ ಮೂಲದಿಂದ ಬಂದರೂ ಅದು ತನ್ನದೇ ಆದ ಸಾಂಪ್ರದಾಯಿಕ ರಾಗಗಳನ್ನು ಮತ್ತು ಮಟ್ಟುಗಳನ್ನು ಹೊಂದಿದೆ. ಪ್ರಸಂಗಕರ್ತರು ಪದ್ಯಗಳ ರಾಗತಾಳಗಳನ್ನು ಸೂಚಿಸಿದರೂ ಸಹ ಭಾಗವತನು ತಾಳಮದ್ದಳೆಯಲ್ಲಿ ಪದ್ಯದ ಪ್ರಸ್ತುತಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ಹೊಂದಿರುತ್ತಾನೆ. ಈ ಸ್ವಾತಂತ್ರ್ಯದ ದುರುಪಯೋಗ, ರಾಗಗಳ ಬಳಕೆ ಮತ್ತು ಪ್ರಸ್ತುತಿಯಲ್ಲಿ ವಿವೇಚನೆಯ ಕೊರತೆ ಮತ್ತು ಅತಿರಂಜನೆಯಿಂದ ಭಾಗವತಿಕೆ ಅಯಕ್ಷಗಾನೀಯವೆನಿಸುತ್ತಿದೆ. ಪ್ರಬುದ್ಧ ಪ್ರೇಕ್ಷಕ ಯಾವುದು ಯಕ್ಷಗಾನೀಯ ಯಾವುದು ಅಯಕ್ಷಗಾನೀಯ ಎಂದು ಗುರುತಿಸಬಲ್ಲ. ತಾಳಮದ್ದಳೆ ಸಂಗೀತ ಕಛೇರಿಯಲ್ಲ. ಅತಿಯಾದ ರಾಗವಿಸ್ತಾರ, ಭಾಮಿನಿ ಪದ್ಯಗಳ ಮಿತಿಮೀರಿದ ಪ್ರಸ್ತುತಿ ಮತ್ತು ಅವುಗಳಿಗೆ ಪ್ರೇಕ್ಷಕರ ಚಪ್ಪಾಳೆ ಈ ಕಲೆ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದರ ಸೂಚನೆ.

ಕೇವಲ ಪದ್ಯಗಳನ್ನು ಪ್ರಸ್ತುತಪಡಿಸುವ ಯಕ್ಷಗಾನ ಹಿಮ್ಮೇಳ ವೈಭವ ಎನ್ನುವ ಪ್ರದರ್ಶನಗಳ ಪ್ರಭಾವವು ತಾಳಮದ್ದಳೆಯ ಹಿಮ್ಮೇಳದ ಮೇಲೆ ಆಗುತ್ತಿದೆ. ದಿ.ನಾರ್ಣಪ್ಪ ಉಪ್ಪೂರರ ಸಾಂಪ್ರದಾಯಿಕ ಭಾಗವತಿಕೆಯ ಸೊಬಗು, ದಿ.ನೆಬ್ಬೂರು ನಾರಾಯಣ ಭಾಗವತರ ಸುಮಧುರ ನಿನಾದದ ಆಸ್ವಾದ, ಮದ್ದಳೆಯ ಮಾಂತ್ರಿಕ ದಿ.ದುರ್ಗಪ್ಪ ಗುಡಿಗಾರರ ಸಾಂಗತ್ಯದಲ್ಲಿ ಸವ್ಯಸಾಚಿ ಭಾಗವತರೆನಿಸಿಕೊಂಡ ದಿ.ಕಡತೋಕ ಮಂಜುನಾಥ ಭಾಗವತರ ಪ್ರಯೋಗಶೀಲತೆ ಯನ್ನು ಇಂದಿನ ಪ್ರದರ್ಶನಗಳಲ್ಲಿ ನೋಡಲಿಕ್ಕೆ ಅಥವಾ ಕೇಳಲಿಕ್ಕೆ ಸಾಧ್ಯವಿದೆಯೆ? ಯಕ್ಷಗಾನದ ಅಬ್ಬರ ಗಂಭೀರ ಭಾವಾಭಿವ್ಯಕ್ತಿಯೇ ವಿನಃ ಗದ್ದಲ, ಕೂಗಾಟ, ಕಿರಿಚಾಟ ಅಥವಾ ಕೃತಕಧ್ವನಿ ಹೊರಡಿಸುವಿಕೆಯಲ್ಲಲ್ಲ.

ಗಾಂಭೀರ್ಯ ಯಕ್ಷಗಾನದ ಮೂಲಗುಣವಾದರೂ ಸಹ ಅದರಲ್ಲಿ ಮಾಧುರ್ಯ ಸಂಪೂರ್ಣ ಮರೆಯಾದರೆ ಹೇಗೆ ಅರಗಿಸಿಕೊಳ್ಳುವುದು? ಕಲಾವಿದನ ದೋಷ ವ್ಯವಸ್ಥೀಕರಣಗೊಂಡು ಕಲೆಯ ದೋಷವಾಗಿ ಪರಿಣಮಿಸಿದರೆ ಏನು ಮಾಡುವುದು? ಗಾಯನದೊಂದಿಗೆ ಮದ್ದಳೆ ಚಂಡೆಯೊಳಗೊಂಡ ವಾದನವು ಈ ಸ್ಥಿತ್ಯಂತರಕ್ಕೆ ಹೊರತಾಗಿಲ್ಲ. ವಾದನ ವೈಯಕ್ತಿಕ ಪ್ರದರ್ಶನದ ವೈಭವೀಕರಣವಾಗದೇ ಭಾವಾಭಿವ್ಯಕ್ತಿಯ ಮತ್ತು ಒಟ್ಟಾರೆ ಪ್ರದರ್ಶನದ ಪೂರಕಾಂಶವಾಗಬೇಕು. ಈ ದೃಷ್ಟಿಕೋನದಲ್ಲಿ ಇತ್ತೀಚೆಗೆ ನಮ್ಮನ್ನಗಲಿದ ಯಕ್ಷಗಾನ ಪ್ರಪಂಚದ ಶ್ರೇಷ್ಠ ಮದ್ದಳೆಗಾರರಲ್ಲೊಬ್ಬರಾದ ದಿ.ಕರ್ಕಿ ಪ್ರಭಾಕರ ಭಂಡಾರಿಯವರನ್ನು ಮಾದರಿಯನ್ನಾಗಿ ಪರಿಗಣಿಸಬಹುದು.

ತಾಳಮದ್ದಳೆಯ ಅರ್ಥಗಾರಿಕೆಯಲ್ಲಾಗುತ್ತಿರುವ ಅನಪೇಕ್ಷಿತ ಬೆಳವಣಿಗೆಗಳ ಬಗ್ಗೆ ಈಗಾಗಲೇ ವಿಸ್ತೃತ ಚರ್ಚೆ ನಡೆಯುತ್ತಿದೆ. ಯಕ್ಷಗಾನ ವೃತ್ತಿರಂಗಭೂಮಿಯಂತೇ ತಾಳಮದ್ದಳೆಯು ಹೊಸಪ್ರಸಂಗಗಳ ಹಾವಳಿಗೆ ಅಷ್ಟಾಗಿ ತುತ್ತಾಗದಿರುವುದು ಸಮಾಧಾನಕರ ವಿಷಯವಾದರೂ ಹಲವು ನಕಾರಾತ್ಮಕ ಅಂಶಗಳು ಒಳನುಸುಳಿರುವುದು ಕಳವಳಕಾರಿ.

ವಾದೇವಾದೇ ಜಾಯತೇ ತತ್ವಬೋಧಃ ಎಂದ ಹಾಗೆ ತಾಳಮದ್ದಳೆಯ ಅರ್ಥಧಾರಿಗಳು ವಿವಾದ ಮತ್ತು ವಾಗ್ವಾದಗಳಲ್ಲಿ ತೊಡಗಿಸಿಕೊಳ್ಳದೇ ಅರ್ಥಪೂರ್ಣ ಸಂವಾದದ ಮೂಲಕ ಪ್ರೇಕ್ಷಕರ ಅಭಿರುಚಿಯನ್ನು ಸಂಸ್ಕರಿಸಿ ಪ್ರಭಾವಿಸಿ ಕಲೆಯನ್ನು ಎತ್ತರಕ್ಕೆ ಕೊಂಡೊಯ್ಯುವತ್ತ ಗಮನ ನೀಡಬೇಕಾಗಿದೆ. ಪೀಠಿಕೆಯನ್ನು ಹೊರತುಪಡಿಸಿ ಉಳಿದ ಭಾಗ ಸ್ವಗತ ಭಾಷಣ ಅಥವಾ ಏಕಾಲಾಪವಾಗದೇ ಸ್ವಾರಸ್ಯಕರ ರಸಾಭಿವ್ಯಕ್ತಿಯಾಗಲು ಅರ್ಥಧಾರಿಗಳು ಶ್ರಮಿಸಬೇಕು. ಕಲಾವಿದರು ಕಲಾಪ್ರತಿಭೆಯೊಂದಿಗೆ ಸಂವೇದನಾಶೀಲತೆ ಬೆಳೆಸಿಕೊಳ್ಳಬೇಕು.

ಪ್ರೇಕ್ಷಕನೂ ಸಹ ಅಪ್ರಬುದ್ಧತೆ, ಅಂಧಾಭಿಮಾನ, ವ್ಯಕ್ತಿಪೂಜೆ, ಅಸಹಿಷ್ಣುತೆ, ಪೂರ್ವಾಗ್ರಹ ಇತ್ಯಾದಿಗಳನ್ನು ತೊಡೆದು ಕಲೆಯ ಸ್ತರವನ್ನು ಎತ್ತರಿಸಲು ತನ್ನ ಹೊಣೆಗಾರಿಕೆಯರಿತು ಪ್ರಯತ್ನಶೀಲನಾಗಬೇಕು ಮತ್ತು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ತಾಳಮದ್ದಳೆಯ ವೃತ್ತಿಪರ ಮತ್ತು ಹವ್ಯಾಸೀ ಕಲಾವಿದರು, ಪ್ರೇಕ್ಷಕರು, ವಿದ್ವಾಂಸರು ಮತ್ತು ವಿಮರ್ಶಕರು ತಾಳಮದ್ದಳೆಯ ಒಟ್ಟಂದದ ದೃಷ್ಟಿಯಿಂದ ಆತ್ಮಾವಲೋಕನ ಮಾಡಿಕೊಳ್ಳುವುದು ಅನಿವಾರ್ಯ. ಹಳೆಯದೆಲ್ಲವೂ ಶ್ರೇಷ್ಠ ಹೊಸದೆಲ್ಲವೂ ಕನಿಷ್ಠ ಎಂದು ಇಲ್ಲಿ ಹೇಳಹೊರಟಿಲ್ಲ. ಪುರಾಣಮಿತ್ಯೇವ ನ ಸಾಧು ಸರ್ವಂ ನ ಚಾಪಿ ಕಾವ್ಯಂ ನವಮಿತ್ಯವದ್ಯಂ, ಸಂತಃ ಪರೀಕ್ಷ್ಯಾನ್ಯತರದ್ಭಜನ್ತೇ ಮೂಢಃ ಪರಪ್ರತ್ಯಯನೇಯಬುದ್ಧಿಃ ಎನ್ನುವ ಕಾಳಿದಾಸನ ಉಕ್ತಿಯನ್ನು ನೆನಪಿಸಿಕೊಳ್ಳೋಣ.

ಕಲೆಯ ಉತ್ಕೃಷ್ಟತೆಯ ದೃಷ್ಟಿಯಿಂದ ಹಳೆಯದಾಗಲೀ ಹೊಸದಾಗಲಿ ಎಲ್ಲವನ್ನೂ ಪರೀಕ್ಷಿಸಿ ಸ್ವೀಕರಿಸಿದರೆ ಕಗ್ಗದ ಕವಿಯ ಆಶಯದ ಹೊಸ ಚಿಗುರು ಹಳೆ ಬೇರು ಕೂಡಿರುವ ಮರದ ಸೊಬಗಿನಂತೆ ಹೊಸಯುಕ್ತಿ ಹಳೆತತ್ವ ಸಂಯೋಜನೆಯಿಂದ ಹೊರಹೊಮ್ಮಿದ ತಾಳಮದ್ದಳೆಯೆನ್ನುವ ಅದ್ಭುತ ಕಲಾಪ್ರಕಾರ ಕಂಗೊಳಿಸಲು ಮತ್ತು ಜಗತ್ತಿನ ಸಾಂಸ್ಕೃತಿಕ ಭೂಪಟದಲ್ಲಿ ತನಗೆ ಯೋಗ್ಯವಾದ ಸ್ಥಾನವನ್ನು ಅಲಂಕರಿಸಲು ಸಾಧ್ಯ.

ಚರ್ಚೆಗೆ ಹೀಗೊಂದು ಮುಕ್ತವೇದಿಕೆ

ಕೆಲ ದಿನಗಳಿಂದ ತೀವ್ರ ಚರ್ಚೆಗೆ ಗ್ರಾಸವಾಗುತ್ತಿರುವ ತಾಳಮದ್ದಳೆ ವಿಷಯಕ್ಕೆ ಸಂಬಂಧಿಸಿದಂತೆ ಮುಕ್ತ ಅಭಿಪ್ರಾಯಗಳನ್ನು ಪ್ರಕಟಿಸಲು 'ವಿಶ್ವವಾಣಿ' ವೇದಿಕೆಯಾಗುತ್ತಿದೆ. ಈ ಕುರಿತಾದ ಪರ ಮತ್ತು ವಿರೋಧ ಅಭಿಪ್ರಾಯಗಳನ್ನು 800 ಪದಗಳಿಗೆ ಮಿತಿಗೊಳಿಸಿ ಕಳುಹಿಸಿ.
ಇ-ಮೇಲ್ : vveditoped@gmail.com



ಪ್ರಸ್ತುತ

ಕೆ.ವಿ.ವಾಸು, ಮೈಸೂರು

ಪುಟ್ಟ ದೇಶಗಳ ಮೇಲೆ ಅಮೆರಿಕದ ದಬ್ಬಾಳಿಕೆ

ದಕ್ಷಿಣ ಅಮೆರಿಕದ ಉತ್ತರ ಕರಾವಳಿಯಲ್ಲಿರುವ ವೆನೆಜುವೆಲಾ ಗಣರಾಜ್ಯದ ಅಧ್ಯಕ್ಷ ನಿಕೋಲಸ್ ಮಡುರೊ ಹಾಗೂ ಅವರ ಪತ್ನಿ ಸಿಲಿಯಾ ಫ್ಲೋರೆಸ್ ಅವರನ್ನು ರಾಜಧಾನಿ ಕ್ಯಾರಕಸ್‌ನಲ್ಲಿ ಇರುವ ಅವರ ಸುಭದ್ರ ಕೋಟೆಯಿಂದ ಅಮೆರಿಕದ ಕಮಾಂಡೋಗಳು ಈ ತಿಂಗಳ 3ರ ಮುಂಜಾನೆ ಸಿನೀಮಯ ರೀತಿಯಲ್ಲಿ ಅಪಹರಿಸಿ, ವಿಮಾನವೊಂದರಲ್ಲಿ ಅಮೇರಿಕಗೆ ಕರೆದೊಯ್ದು ಅಲ್ಲಿನ ನ್ಯೂಯಾರ್ಕ್ ಜೈಲಿನಲ್ಲಿ ಬಿಗಿಭದ್ರತೆಯೊಂದಿಗೆ ಇಟ್ಟಿರುವ ವಿದ್ಯಮಾನ ಇಡೀ ವಿಶ್ವವನ್ನೇ ತಲ್ಲಣಗೊಳಿಸಿದೆ. ಹೇಳಿ ಕೇಳಿ ಒಂದು ಪುಟ್ಟ ರಾಜ್ಯವಾದ ವೆನೆಜುವೆಲಾ ಈ ವಿದ್ಯಮಾನದಿಂದ ಕಂಗೆಟ್ಟಿದೆ. ಇಡೀ ವಿಶ್ವದಲ್ಲೇ ಅತಿ ದೊಡ್ಡ ತೈಲ ನಿಕ್ಷೇಪ ಹೊಂದಿರುವ ವೆನೆಜುವೆಲಾ, ರಷ್ಯಾ, ಚೀನಾ ಮತ್ತು ಇರಾನ್ ದೇಶಗಳಿಗೆ ಹತ್ತಿರವಾಗುತ್ತಿದ್ದಂತೆಯೇ ಅಮೆರಿಕ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ಆ ದೇಶವನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಮುಂದಾದರು.

ಟ್ರಂಪ್ ಆಡಳಿತವು ತನ್ನ ಪರಮ ವೈರಿ ವೆನೆಜುವೆಲಾದ ಅಧ್ಯಕ್ಷ ಮಡುರೊರವರನ್ನು ಬಗ್ಗುಬಡಿಯಬೇಕೆಂಬ ಏಕೈಕ ಉದ್ದೇಶದಿಂದ ಈ ಕಾರ್ಯಾಚರಣೆ ನಡೆಸಿದೆ ಎನ್ನಲಾಗಿದೆ. ಮತ್ತೊಂದು ಕಡೆ, ಟ್ರಂಪ್ ಆಡಳಿತವು, ಈ ಕಾರ್ಯಾಚರಣೆಯ ಮುಖ್ಯ ಉದ್ದೇಶ ರಾಷ್ಟ್ರೀಯ ಭದ್ರತೆ ಮತ್ತು ಮಾದಕದ್ರವ್ಯ ಭಯೋತ್ಪಾದನೆಯನ್ನು ಮಟ್ಟ ಹಾಕುವುದೇ ಆಗಿದೆ ಎಂಬ ಸಮರ್ಥನೆ ನೀಡಿದೆ. ಮಡುರೊ ಅವರು ಕೊಕೇನ್ ಕಳ್ಳಸಾಗಣೆ ಮತ್ತು ಉಗ್ರ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿದ್ದಾರೆ ಎಂದು ಟ್ರಂಪ್ ಆಡಳಿತ ಆರೋಪಿಸುತ್ತಿದೆ. ಮಡುರೊ ಬಂಧನವು ಅಂತಾರಾಷ್ಟ್ರೀಯ ಸಮುದಾಯದಲ್ಲಿ ಎರಡು ಭಾಗ ಮಾಡಿದೆ. ಅಮೆರಿಕದ ಮಿತ್ರ ರಾಷ್ಟ್ರಗಳಾದ ಇಸ್ರೇಲ್,ಫ್ರಾನ್ಸ್, ಯುಕೆ ಮುಂತಾದ ದೇಶಗಳು ಈ ಕಾರ್ಯಾಚರಣೆಯನ್ನು ಬೆಂಬಲಿಸಿದ್ದರೆ, ರಷ್ಯಾ, ಚೀನಾ, ಇರಾನ್, ಉತ್ತರ ಕೊರಿಯಾ ಮುಂತಾದ ರಾಷ್ಟ್ರಗಳು ವಿರೋಧಿಸಿವೆ. ವಿಶ್ವಶಾಂತಿಯ ಹರಿಕಾರ ರಾಗಿರುವ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಸಹ ಅಮೆರಿಕದ ಕಾರ್ಯಾಚರಣೆಯನ್ನು ಖಂಡಿಸಿ, ಇದು ವಿಶ್ವಸಂಸ್ಥೆಯ ಆಶಯಗಳಿಗೆ ವಿರುದ್ಧವಾಗಿದೆ ಎಂದು ಹೇಳಿದ್ದಾರೆ. ಟ್ರಂಪ್ ಆಡಳಿತವು ಮಡುರೊ ಅವರನ್ನು ಸೆರೆ ಹಿಡಿದಿದ್ದರೂ ಸಹ, ವೆನೆಜುವೆಲಾ ದೇಶವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳದಿರು ವುದೂ ಇಲ್ಲಿ ಗಮನೀಸಬೇಕಾದ ಅಂಶವಾಗಿದೆ. ಅಲ್ಲಿನ ಮಹಿಳಾ ಉಪಾಧ್ಯಕ್ಷೆ ಡೆಲ್ಸಿ ರೋಡ್ರಿಗಸ್ ಈಗ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆಂದು ಅಲ್ಲಿನ ವಾರ್ತಾ ಸಂಸ್ಥೆಗಳು ವರದಿ ಮಾಡಿವೆ.

2013ರಲ್ಲಿ ಪುಟ್ಟ ದೇಶವಾದ ವೆನೆಜುವೆಲಾದ ಉಪಾಧ್ಯಕ್ಷರಾಗಿದ್ದ ಮಡುರೊ, ಅಂದಿನ ಅಧ್ಯಕ್ಷ ಹ್ಯೂಗೋ ಚಾವೆಜ್‌ರವರ ನಿಧನದ ನಂತರ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು. ಕ್ರಮೇಣವಾಗಿ ಅವರು ಸರ್ವಾಧಿಕಾರಿಯಾಗಿ ರೂಪುಗೊಂಡರು. 2024ರಲ್ಲಿ ನಡೆದ ವಿವಾದಾತ್ಮಕ ಅಧ್ಯಕ್ಷೀಯ ಚುನಾವಣೆಯಲ್ಲಿ ಮಡುರೊ ಅವರನ್ನು ಶೇ.51 ಮತಗಳ ಅಂತರದಿಂದ ವಿಜಯಿ ಎಂದು ಘೋಷಿಸಲಾಯಿತು. ವೆನೆಜುವೆಲಾದ ಆರ್ಥಿಕ ಕುಸಿತದಿಂದ ಲಕ್ಷಾಂತರ ಜನರು ಉದ್ಯೋಗ ಅರಸಿ, ಅಮೆರಿಕದ ಗಡಿಯತ್ತ ವಲಸೆ ಹೋಗುತ್ತಿದ್ದಾರೆ. ತೀವ್ರ ಆರ್ಥಿಕ ಮುಗ್ಗಟ್ಟು, ನಿರುದ್ಯೋಗದಿಂದ ಬಳಲುತ್ತಿರುವ ಈ ಪುಟ್ಟ ದೇಶದಲ್ಲಿ ಈಗ ರಾಜಕೀಯ ಅಭದ್ರತೆ ತಲೆದೋರಿ, ಸಮಸ್ಯೆಗಳ ಸುಳಿಯಲ್ಲಿ ಈ ದೇಶ ಸಿಲುಕಿದೆ. ಈ ಕಾರ್ಯಾಚರಣೆಯ ಬೆನ್ನಲ್ಲೇ, ಮೆಕ್ಸಿಕೊ, ಕೊಲಂಬಿಯಾ, ಕ್ಯೂಬಾ ದೇಶಗಳಿಗೂ ಸಹ ಟ್ರಂಪ್ ಎಚ್ಚರಿಕೆಯ ಸಂದೇಶಗಳನ್ನು ರವಾನಿಸಿದ್ದಾರೆ ಎನ್ನಲಾಗಿದೆ. ಈ ದೇಶಗಳು ಮಾದಕ ವಸ್ತುಗಳ ಉತ್ಪಾದನೆ ಜೊತೆಗೆ ದಂಧೆಕೋರರಿಗೆ ನೆರವು ನೀಡುತ್ತಿವೆ ಎಂದು ಆಪಾದಿಸಲಾಗಿದೆ. ಭಾರತ ಸಹ ಈ ವಿದ್ಯಮಾನದಿಂದ ಆತಂಕಗೊಂಡಿದೆ ಎನ್ನಲಾಗಿದೆ.

ವಿಶ್ವದ ದೊಡ್ಡಣ್ಣನ ಹಾಗೆ ವರ್ತಿಸುತ್ತಿರುವ ಅಮೇರಿಕ ಸಣ್ಣ ಪುಟ್ಟ ದೇಶಗಳಲ್ಲಿ ಈ ರೀತಿಯ ರಾಜಕೀಯ ಕ್ಷೋಭೆ ಸೃಷ್ಟಿಸುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಅತ್ತ ಕಡೆ ನೋಡಿದರೆ, ಬಲಿಷ್ಠ ರಷ್ಯಾ ದೇಶ ಪುಟ್ಟ ದೇಶವಾದ ಉಕ್ರೇನ್ ಮೇಲೆ ಕಳೆದ ನಾಲ್ಕು ವರ್ಷಗಳಿಂದ ಯುದ್ಧ ನಡೆಸುತ್ತಿದೆ. ಅಮೆರಿಕ ಆಗಲಿ ಅಥವಾ ರಷ್ಯಾ ಆಗಲಿ ತಾವೇ ಕಟ್ಟಿ ಬೆಳೆಸಿದ ವಿಶ್ವಸಂಸ್ಥೆಗೆ ಕವಡೆ ಕಾಸಿನಷ್ಟು ಕೂಡ ಗೌರವ ತೋರುತ್ತಿಲ್ಲ. ವಿಶ್ವಸಂಸ್ಥೆಯು ಬಹುತೇಕ ನಿಷ್ಕ್ರಿಯವಾಗಿದೆ. ಇನ್ನು ಮುಂದಾದರೂ ಅಮೇರಿಕದ ತನ್ನ ದೊಡ್ಡಣ್ಣನ ದರ್ಪವನ್ನು ಬದಲಾಯಿಸಿಕೊಳ್ಳದಿದ್ದಲ್ಲಿ ಭವಿಷ್ಯದಲ್ಲಿ ಸಣ್ಣಪುಟ್ಟ ರಾಷ್ಟ್ರಗಳ ಅಸ್ತಿತ್ವಕ್ಕೆ ದಕ್ಕೆ ಬರುವುದಂತೂ ನಿಶ್ಚಯವಾಗಿದೆ.

ನೀವೇ ಮುಖ್ಯಮಂತ್ರಿ ಆಗಿರುತ್ತೀರೆಂದು ನಂಬಿದ್ದೇನೆ..

ದೇವರಾಜ ಅರಸು ಅವರ ದಾಖಲೆಯನ್ನು ಮುರಿದು ಕರ್ನಾಟಕದ ಸುದೀರ್ಘ ಅವಧಿಯ ಮುಖ್ಯಮಂತ್ರಿ ಎಂಬ ದಾಖಲೆಯನ್ನು ಸಿದ್ದರಾಮಯ್ಯ ನಿರ್ಮಿಸಿದ್ದಾರೆ. ಅವರು 2028ರವರೆಗೂ ಮುಖ್ಯಮಂತ್ರಿಯಾಗಿಯೇ ಮುಂದುವರಿಯಲಿದ್ದಾರೆ ಎಂಬ ಭರವಸೆಯನ್ನು ವ್ಯಕ್ತಪಡಿಸಿ ಸಿದ್ದರಾಮಯ್ಯ ಅವರಿಗೆ ಅವರ ಆರ್ಥಿಕ ಸಲಹೆಗಾರ, ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಅವರು ಪತ್ರ ಬರೆದಿದ್ದಾರೆ. ಅದರ ಪೂರ್ಣರೂಪ ಇಲ್ಲಿದೆ...

ಆಶಯ

ಬಸವರಾಜ ರಾಯರಡ್ಡಿ
ಸಿಎಂ ಆರ್ಥಿಕ ಸಲಹೆಗಾರ
vveditoped@gmail.com

ಕರ್ನಾಟಕದ ಸಾಮಾಜಿಕ ನ್ಯಾಯ ಹಾಗೂ ಜನಪರ ಸರ್ವಾಂಗೀಣ ಅಭಿವೃದ್ಧಿ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸುತ್ತಿರುವ ನಿಮ್ಮ ದೂರದೃಷ್ಟಿಯ ನಾಯಕತ್ವಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕದ ರಾಜಕೀಯ ಇತಿಹಾಸವು ಜನಪರ ಆಡಳಿತ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಾತ್ಮಕ ಸಮಾನತೆಯ ಮೌಲ್ಯಗಳನ್ನು ಪ್ರತಿಪಾದಿಸಿದ ಮಹಾನ್ ನಾಯಕರ ದಿಟ್ಟ ಹೋರಾಟಗಳಿಂದ ರೂಪುಗೊಂಡ ಸುವರ್ಣ ಪರಂಪರೆಯನ್ನು ಹೊಂದಿದೆ. ಶೋಷಿತರು, ಹಿಂದುಳಿದವರು ಮತ್ತು ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಪರವಾಗಿ ಧೈರ್ಯವಾಗಿ ನಿಂತ ನಾಯಕರಿಂದಲೇ ಈ ನಾಡಿನ ಪ್ರಗತಿಪರ ರಾಜಕೀಯ ಸಂಸ್ಕೃತಿ ಬೆಳೆದಿದೆ.

ಆ ಪರಂಪರೆಯಲ್ಲಿ ಅಚ್ಚಳಿಯದ ಗುರುತು ಮೂಡಿಸಿದ ಮಹಾನ್ ನಾಯಕರಲ್ಲಿ ಸನ್ಮಾನ್ಯ ದಿವಂಗತ ದೇವರಾಜ ಅರಸು ಅವರು ಅಗ್ರಗಣ್ಯರು. ಅವರು 20-03-1972ರಿಂದ 31-12-1977ರವರೆಗೆ ಹಾಗೂ 28-02-1978 ರಿಂದ 07-01-1980ರವರೆಗೆ ಒಟ್ಟಾರೆ 2792 ದಿನಗಳ ಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ, ಭೂ ಸುಧಾರಣೆ, ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳ ಉನ್ನತಿ ಮತ್ತು ಶೋಷಿತರ ಸಬಲೀಕರಣದ ಮೂಲಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಅಮರ ಅಧ್ಯಾಯವೊಂದನ್ನು ರಚಿಸಿದರು.

ಅದಲ್ಲದೆ ಕರ್ನಾಟಕ ರಾಜ್ಯವನ್ನು ಪ್ರಗತಿಪರ ಚಿಂತನೆಯತ್ತ ತರುವುದರಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ರಾಮಕೃಷ್ಣ ಹೆಗಡೆ ಇವರ ವಿಶಾಲ ದೃಷ್ಟಿಕೋನದ ವಿಚಾರಗಳು ಹಾಗೂ ಪ್ರಾಮಾಣಿಕ ಚಿಂತನೆಗಳು ನಮ್ಮ ಮುಂದೆ ಇಂದಿಗೂ ಜೀವಂತ ಇರುತ್ತವೆ

ಅದೇ ಸಾಮಾಜಿಕನ್ಯಾಯ ತಾತ್ವಿಕ ಮತ್ತು ರಾಜಕೀಯ ಪರಂಪರ ಮತ್ತು ಸರ್ವಾಂಗೀಣ ಅಭಿವೃದ್ಧಿ ಚಿಂತನೆಗಳನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಮುಂದುವರಿಸಿಕೊಂಡು, ಕರ್ನಾಟಕದ ಇತಿಹಾಸಕ್ಕೆ ಹೊಸ ಮೈಲಿಗಲ್ಲು ಸ್ಥಾಪಿಸಿ ನೀವು 13-05-2013ರಿಂದ 15-05-2018ರವರೆಗೆ ಹಾಗೂ 20-05-2023ರಿಂದ 06-01-2026ರವರೆಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು, ಸುದೀರ್ಘ ಮತ್ತು ಸಾರ್ಥಕ ಆಡಳಿತದ ಮೂಲಕ ಚಾರಿತ್ರಿಕ ದಾಖಲೆ ನಿರ್ಮಿಸುತ್ತಿರುವುದು ರಾಜ್ಯದ ಜನತೆಗೆ ಅಪಾರ ಹೆಮ್ಮೆಯ ವಿಷಯವಾಗಿದೆ. ಹಾಗೂ ಮುಂದಿನ ಎರಡೂವರೆ ವರ್ಷಗಳ ಕಾಲ ಅಂದರೆ 28 ಮೇ 2028ರವರೆಗೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತೀರಿ ಎಂದು ನನ್ನ ನಂಬಿಕೆಯಾಗಿದೆ.

ನಿಮ್ಮ ಪ್ರಾಮಾಣಿಕ ಹಾಗೂ ಪಾರದರ್ಶಕ ಆಡಳಿತವು ಸ್ಪಷ್ಟವಾಗಿ ಜನಪರ, ಸಂವಿಧಾನಬದ್ಧ ಮತ್ತು ಸಾಮಾಜಿಕ ನ್ಯಾಯಕೇಂದ್ರಿತವಾಗಿದೆ. ರಾಜ್ಯದ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ ಹಿಂದುಳಿದ ಜನಾಂಗಕ್ಕೆ ಯಾವುದೇ ಧರ್ಮ ಜಾತಿ ಭೇದವಿಲ್ಲದೆ ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಹಾಗೂ ರೈತ ಸಮುದಾಯಕ್ಕೆ ಮಹತ್ವಾಕಾಂಕ್ಷಿ ಯೋಜನೆಗಳ ಮೂಲಕ ಬಡವರು, ಮಹಿಳೆಯರು, ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಯುವಜನತೆಗೆ ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಗೌರವವನ್ನು ಒದಗಿಸುವಲ್ಲಿ ನಿಮ್ಮ ನಿಮ್ಮ ಪ್ರಾಮಾಣಿಕ ವಿಚಾರಗಳು ಮಹತ್ವದ ಪಾತ್ರ ವಹಿಸಿದೆ. ಈ ಯೋಜನೆಗಳು ಕರ್ನಾಟಕವನ್ನು ನಿಜಾರ್ಥದಲ್ಲಿ ಕಲ್ಯಾಣರಾಜ್ಯದ ಮಾದರಿಯಾಗಿ ರೂಪಿಸುವ ದಿಟ್ಟ ರಾಜಕೀಯ ಸಂಕಲ್ಪದ ಪ್ರತಿಬಿಂಬಗಳಾಗಿವೆ. ನಿಮ್ಮ ಆಡಳಿತದಲ್ಲಿ ಪಾರದರ್ಶಕತೆ, ಹಣಕಾಸು ಶಿಸ್ತು, ಸಂವಿಧಾನದ ಮೌಲ್ಯಗಳಿಗೆ ಅಚಲ ನಿಷ್ಠೆ ಹಾಗೂ ಜಾತಿ-ಧರ್ಮ-ಭಾಷೆಗಳ ಅತೀತವಾಗಿ ಎಲ್ಲರನ್ನು ಒಟ್ಟಿಗೆ ಕೊಂಡೊಯ್ಯುವ ಸಮನ್ವಯದ ರಾಜಕಾರಣವು ನಿಮ್ಮ ನಾಯಕತ್ವದ ವಿಶಿಷ್ಟ ಗುರುತುಗಳಾಗಿವೆ.

ನಿಮ್ಮ ಸಮಾಜಮುಖಿ ಮತ್ತು ಪ್ರಗತಿಪರ ದೃಷ್ಟಿಕೋನಕ್ಕೆ ಸಮಕಾಲೀನ ರಾಜಕೀಯ ರೂಪ ನೀಡಿದ ನಾಯಕರೆಂದು ನಿಮ್ಮನ್ನು ಗೌರವದಿಂದ ಮುಂದಿನ ಇತಿಹಾಸ ಪುಟಗಳಲ್ಲಿ ಸ್ಮರಿಸುವುದು ನಿಶ್ಚಿತ. ಈ ಹಿನ್ನೆಲೆಯಲ್ಲಿ, ಕರ್ನಾಟಕದ ಕೋಟ್ಯಂತರ ಜನತೆಯ ಪರವಾಗಿ, ನಿಮ್ಮ ದೂರದೃಷ್ಟಿಯ ನಾಯಕತ್ವಕ್ಕೆ, ಜನಪರ ನೀತಿಗಳಿಗೆ ಹಾಗೂ ರಾಜ್ಯವನ್ನು ಸಮಾನತೆ, ಸೌಹಾರ್ದ ಮತ್ತು ಸಾಮಾಜಿಕ ನ್ಯಾಯದ ದಾರಿಯಲ್ಲಿ ದಿಟ್ಟವಾಗಿ ಮುನ್ನಡೆಸುತ್ತಿರುವ ನಿಮ್ಮ ಅವಿರತ ಸೇವೆಗೆ ಗೌರವಪೂರ್ವಕ ಹಾಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿಮ್ಮ ಆಡಳಿತವು ಮುಂದಿನ ಪೀಳಿಗೆಗಳಿಗೆ ದಾರಿದೀಪವಾಗಲಿ. ಕರ್ನಾಟಕವು ಸರ್ವಾಂಗೀಣ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ಸೌಹಾರ್ದದ ಮಾದರಿ ರಾಜ್ಯವಾಗಿ ರಾಷ್ಟ್ರಮಟ್ಟದಲ್ಲಿ ತನ್ನ ಸ್ಥಾನವನ್ನು ಇನ್ನಷ್ಟು ದೃಢಪಡಿಸಲಿ ಎಂಬುದು ನನ್ನ ಹಾರೈಕೆ.

ಸಿದ್ದರಾಮಯ್ಯ ರಾಜಕೀಯ ಚಿಂತನೆಯ ಹೃದಯಭಾಗವೇ ಸಾಮಾಜಿಕ ನ್ಯಾಯ

ಸಿದ್ಧಹಸ್ತ

ಬಿ.ಎಸ್. ಶಿವಣ್ಣ
ಅಧ್ಯಕ್ಷರು, ಲೋಹಿಯಾ ವಿಚಾರ ವೇದಿಕೆ
vveditoped@gmail.com

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕೆಲವೇ ನಾಯಕರು ತಮ್ಮ ಆಡಳಿತಾವಧಿಗಿಂತಲೂ ಹೆಚ್ಚಿನ ಅರ್ಥವನ್ನು ಸಮಾಜಕ್ಕೆ ನೀಡಿದ್ದಾರೆ. ದೇವರಾಜ ಅರಸು ಅವರು ಆ ಪಂಕ್ತಿಯಲ್ಲಿನ ಶಾಶ್ವತ ಹೆಸರು. ಅವರ ಆಡಳಿತವು ಕೇವಲ ಅಧಿಕಾರದ ನಿರ್ವಹಣೆಯಲ್ಲ, ಅದು ಸಾಮಾಜಿಕ ನ್ಯಾಯದ ಮಹಾ ಚಳವಳಿಯಾಗಿತ್ತು. ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರನ್ನು ರಾಜಕೀಯದ ಕೇಂದ್ರವಾಹಿನಿಗೆ ತರುವ ಮೂಲಕ ಅವರು ರಾಜ್ಯದ ರಾಜಕೀಯ ದಿಕ್ಕನ್ನೇ ಬದಲಿಸಿದರು. ಇದೀಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಸು ಅವರ ದಾಖಲೆಯನ್ನು ಮುರಿಯುವ ಹಂತಕ್ಕೆ ತಲುಪುತ್ತಿರುವ ಈ ಐತಿಹಾಸಿಕ ಕ್ಷಣದಲ್ಲಿ, ಕರ್ನಾಟಕದ ರಾಜಕೀಯ ಮತ್ತೊಮ್ಮೆ ಮೌಲ್ಯಾಧಾರಿತ ನಾಯಕತ್ವದ ಮಹತ್ವವನ್ನು ಸ್ಮರಿಸಿಕೊಳ್ಳುತ್ತಿದೆ.

ಸಿದ್ದರಾಮಯ್ಯ ಅವರ ರಾಜಕೀಯ ಬದುಕನ್ನು ಅವಲೋಕಿಸಿದರೆ, ಅವರು ಅಧಿಕಾರಕ್ಕಾಗಿ ರಾಜಕೀಯ ಮಾಡಿರುವ ನಾಯಕನಲ್ಲ; ಮೌಲ್ಯಗಳಿಗಾಗಿ ರಾಜಕೀಯವನ್ನು ಅರ್ಥ ಮಾಡಿಕೊಂಡ ನಾಯಕ. ಅವರ ರಾಜಕೀಯ ಚಿಂತನೆಯ ಹೃದಯಭಾಗದಲ್ಲಿರುವುದು ಸಾಮಾಜಿಕ ನ್ಯಾಯ, 'ಅಹಿಂದ' ಎಂಬ ಪರಿಕಲ್ಪನೆಯನ್ನು ಅವರು ಕೇವಲ ಚುನಾವಣಾ ಘೋಷಣೆಯಾಗಿ ಅಲ್ಲ, ಒಂದು ಸಾಮಾಜಿಕ-ರಾಜಕೀಯ ತತ್ವವಾಗಿ ರೂಪಿಸಿದರು. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರ ಒಕ್ಕೂಟದ ಮೂಲಕ ಸಮಾನ ಅವಕಾಶಗಳ ಸಮಾಜ ನಿರ್ಮಾಣ ಮಾಡುವ ಕನಸು, ದೇವರಾಜ ಅರಸು ಅವರ ಸಾಮಾಜಿಕ ಕ್ರಾಂತಿಯ ಮುಂದುವರಿಕೆಯಂತೆ ಕಾಣುತ್ತದೆ.

ದೇವರಾಜ ಅರಸು ಅವರು ತಮ್ಮ ಕಾಲದಲ್ಲಿ ಸಮಾಜದ ದಮನಿತ ವರ್ಗಗಳಿಗೆ ಗೌರವ, ಹಕ್ಕು ಮತ್ತು ಆತ್ಮವಿಶ್ವಾಸ ನೀಡಿದಂತೆ, ಸಿದ್ದರಾಮಯ್ಯ ಅವರು ಇಂದಿನ ಕಾಲಘಟ್ಟದಲ್ಲಿ ಅದೇ ವರ್ಗಗಳ ಬದುಕಿಗೆ ಭದ್ರತೆಯನ್ನು ಒದಗಿಸುವ ಆಡಳಿತ ಮಾದರಿಯನ್ನು ಕಟ್ಟಿದರು. ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್ ಮುಂತಾದ ಯೋಜನೆಗಳು ಕೇವಲ ಸರ್ಕಾರಿ ಯೋಜನೆಗಳಲ್ಲ; ಅವು ರಾಜ್ಯವು ತನ್ನ ನಾಗರಿಕರ ಬಗ್ಗೆ ಹೊಂದಿರುವ ನೈತಿಕ ಹೊಣೆಗಾರಿಕೆಯ ಪ್ರತಿಬಿಂಬ. ಹಸಿವು, ಅಪೌಷ್ಟಿಕತೆ, ಶಿಕ್ಷಣದಿಂದ ವಂಚನೆ - ಇವುಗಳನ್ನು ಸಾಮಾಜಿಕ ಅನ್ಯಾಯಗಳೆಂದು ಗುರುತಿಸಿ, ಅವುಗಳ ವಿರುದ್ಧ ರಾಜ್ಯವೇ ನಿಂತು ಹೋರಾಡಬೇಕು ಎಂಬ ದೃಷ್ಟಿಕೋನವೇ ಮೌಲ್ಯಾಧಾರಿತ ರಾಜಕಾರಣ.

ಸಿದ್ದರಾಮಯ್ಯ ಅವರ ಆಡಳಿತದ ಮತ್ತೊಂದು ಪ್ರಮುಖ ಲಕ್ಷಣ ಅವರ ಧರ್ಮನಿರಪೇಕ್ಷ ನಿಲುವು. ಭಾರತದ ಸಂವಿಧಾನದಲ್ಲಿ ಅಡಕವಾಗಿರುವ ಸಮಾನತೆ, ಸಹಬಾಳ್ವೆ ಮತ್ತು ಧರ್ಮನಿರಪೇಕ್ಷತೆಯ ಮೌಲ್ಯಗಳನ್ನು ಅವರು ರಾಜಕೀಯದ ಕೇಂದ್ರಬಿಂದುಗಾಗಿಟ್ಟಿದ್ದಾರೆ. ಧರ್ಮ, ಜಾತಿ ಅಥವಾ ಭಾಷೆಯ ಆಧಾರದ ಮೇಲೆ ವಿಭಜನೆ ಮಾಡುವ ರಾಜಕಾರಣಕ್ಕೆ ವಿರುದ್ಧವಾಗಿ, ಎಲ್ಲರನ್ನು ಒಳಗೊಂಡ ಸಮಾಜ ನಿರ್ಮಾಣದ ಪರವಾಗಿ ಅವರು ನಿಂತಿದ್ದಾರೆ. ಇದು ಅವರನ್ನು ಸಮಕಾಲೀನ ರಾಜಕಾರಣದಲ್ಲಿ ವಿಭಿನ್ನವಾಗಿಸುವ ಅಂಶ.

ದೇವರಾಜ ಅರಸು ಮತ್ತು ಸಿದ್ದರಾಮಯ್ಯ ಅವರನ್ನು ಸಂಪರ್ಕಿಸುವ ಮತ್ತೊಂದು ಪ್ರಮುಖ ಸೇತುವೆ ಎಂದರೆ ಆಡಳಿತವನ್ನು ಜನಸಾಮಾನ್ಯರ ಬದುಕಿನೊಂದಿಗೆ ನೇರವಾಗಿ ಜೋಡಿಸುವ ದೃಷ್ಟಿ, ಅರಸು ಅವರು ಭೂಸುಧಾರಣೆ ಮತ್ತು ಮೀಸಲಾತಿ ಮೂಲಕ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ರಚನೆಯನ್ನು ಬದಲಿಸಿದರೆ, ಸಿದ್ದರಾಮಯ್ಯ ಅವರು ಕಲ್ಯಾಣರಾಜ್ಯ ಪರಿಕಲ್ಪನೆಯನ್ನು ಬಲಪಡಿಸುವ ಮೂಲಕ ಜನಸಾಮಾನ್ಯರ ದೈನಂದಿನ ಬದುಕಿಗೆ ಸರ್ಕಾರವನ್ನು ಹತ್ತಿರ ತಂದರು. ಬಡವನ ಮನೆಗೆ ಸರ್ಕಾರ ತಲುಪಬೇಕು ಎಂಬ ಆಲೋಚನೆಯೇ ಇವರಿಬ್ಬರ ರಾಜಕಾರಣದ ಮೂಲಸಾರ.

ಸಿದ್ದರಾಮಯ್ಯ ಅವರ ಆಡಳಿತಾವಧಿ ದೀರ್ಘವಾಗುತ್ತಿರುವುದು ಕೇವಲ ರಾಜಕೀಯ ಸಾಧನೆ ಅಲ್ಲ; ಅದು ಜನಸಾಮಾನ್ಯರ ನಂಬಿಕೆಯ ಪ್ರತಿಫಲ, ಮೌಲ್ಯಾಧಾರಿತ ರಾಜಕಾರಣ ಎಂದರೆ ತಕ್ಷಣದ ಲಾಭಕ್ಕಿಂತ ದೀರ್ಘಕಾಲೀನ ಸಾಮಾಜಿಕ ಹಿತವನ್ನು ಗಮನಿಸುವುದು. ಈ ಅರ್ಥದಲ್ಲಿ, ಸಿದ್ದರಾಮಯ್ಯ ಅವರು ಜನಪರ ನೀತಿಗಳ ಮೂಲಕ ಸಮಾಜದ ಅಸಮಾನತೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದ್ದಾರೆ. ಇದರಿಂದ ಅವರು ಕೇವಲ ಮುಖ್ಯಮಂತ್ರಿ ಅಲ್ಲ, ಸಾಮಾಜಿಕ ನ್ಯಾಯದ ಧ್ವಜವಾಹಕರಾಗಿದ್ದಾರೆ.

ದೇವರಾಜ ಅರಸು ಅವರು ತಮ್ಮ ಕಾಲದಲ್ಲಿ ಹೊಸ ರಾಜಕೀಯ ಭಾಷೆಯನ್ನು ಕಟ್ಟಿಕೊಟ್ಟರು. ಸಿದ್ದರಾಮಯ್ಯ ಅವರು ಅದೇ ಭಾಷೆಯನ್ನು ಇಂದಿನ ಸವಾಲಿನ ಕಾಲಘಟ್ಟದಲ್ಲಿ ಜೀವಂತವಾಗಿಟ್ಟಿದ್ದಾರೆ. ಬಹುಧ್ರುವೀಯ ರಾಜಕಾರಣ, ತೀವ್ರ ಮಾಧ್ಯಮ ಗಮನ ಮತ್ತು ವೇಗದ ಸಾರ್ವಜನಿಕ ಅಭಿಪ್ರಾಯದ ನಡುವೆ ಸಹ ಮೌಲ್ಯಗಳನ್ನು ಹಿಡಿದುಕೊಂಡು ನಡೆಯುವುದು ಸುಲಭದ ಕೆಲಸವಲ್ಲ. ಆದರೆ ಸಿದ್ದರಾಮಯ್ಯ ಅವರು ಆ ಸವಾಲನ್ನು ಸಮರ್ಥವಾಗಿ ಎದುರಿಸಿದ್ದಾರೆ.

ಇಂದು ಅವರು ದೇವರಾಜ ಅರಸು ಅವರ ಆಡಳಿತದ ದಾಖಲೆಯನ್ನು ಮುರಿಯುತ್ತಿರುವುದು ಒಂದು ಸಂಖ್ಯಾತ್ಮಕ ಸಾಧನೆಯಷ್ಟೇ ಅಲ್ಲ; ಅದು ಒಂದು ತತ್ವದ ಗೆಲುವು. ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಗೌರವ ಎಂಬ ಮೌಲ್ಯಗಳು ರಾಜಕೀಯದಲ್ಲಿ ಇನ್ನೂ ಪ್ರಸ್ತುತವಾಗಿವೆ ಎಂಬುದಕ್ಕೆ ಇದು ಸಾಕ್ಷಿ. ಅರಸು ಅವರು ಬಿತ್ತಿದ ಬೀಜ ಇಂದಿಗೂ ಫಲ ಕೊಡುತ್ತಿದೆ ಎಂಬುದನ್ನು ಸಿದ್ದರಾಮಯ್ಯ ಅವರ ರಾಜಕೀಯ ಜೀವನ ತೋರಿಸುತ್ತದೆ.

ಅಂತಿಮವಾಗಿ, ಸಿದ್ದರಾಮಯ್ಯ ಅವರನ್ನು ದೇವರಾಜ ಅರಸು ಅವರ ರಾಜಕೀಯ ಪರಂಪರೆಯ ಮುಂದುವರಿದ ಅಧ್ಯಾಯವೆಂದು ಹೇಳಬಹುದು. ಅವರು ಆ ಪರಂಪರೆಯನ್ನು ನಕಲಿಸಿಲ್ಲ; ಕಾಲಕ್ಕೆ ತಕ್ಕಂತೆ ರೂಪಾಂತರಗೊಳಿಸಿದ್ದಾರೆ. ಮೌಲ್ಯಗಳನ್ನು ಕೇಂದ್ರದಲ್ಲಿಟ್ಟುಕೊಂಡ ರಾಜಕಾರಣ ಇನ್ನೂ ಸಾಧ್ಯ, ಇನ್ನೂ ಅಗತ್ಯ ಎಂಬ ಸಂದೇಶವನ್ನು ಅವರು ಕರ್ನಾಟಕದ ರಾಜಕೀಯಕ್ಕೆ ನೀಡಿದ್ದಾರೆ. ಇದೇ ಅವರ ಅತಿದೊಡ್ಡ ಸಾಧನೆ ಮತ್ತು ಇದೇ ಕಾರಣಕ್ಕೆ ಅವರು ಮೌಲ್ಯಾಧಾರಿತ ರಾಜಕಾರಣದ ಜೀವಂತ ಪ್ರತಿನಿಧಿಯಾಗಿ ಇತಿಹಾಸದಲ್ಲಿ ಸ್ಥಾನಪಡೆಯುತ್ತಾರೆ.

ಇದೆಲ್ಲದರ ಮಧ್ಯೆಯೂ ಸಿದ್ದರಾಮಯ್ಯ ಹಾಗೂ ಅರಸು ತುಲನೆ ಸರಿಯೇ ? ಅರಸು ಅವರಂಥಹ ಶಾಶ್ವತ ಯೋಜನೆ ಹಾಗೂ ರಾಜಕೀಯ ನಿಲುವುಗಳನ್ನು ಸಿದ್ದರಾಮಯ್ಯ ಪ್ರದರ್ಶಿಸಿದ್ದಾರೆಯೇ? ಎಂಬ ಪ್ರಶ್ನೆಗಳನ್ನೂ ಕೆಲವರು ಎತ್ತಿದ್ದಾರೆ. ದೇವರಾಜ ಅರಸು ಅವರು ಉಳುವವನೇ ಹೊಲದೊಡೆಯ ಎಂಬ ನೀತಿಯನ್ನು ಜಾರಿಗೆ ತಂದರು. ಅದು ಬಡವರ ಪಾಲಿಗೆ ಶಾಶ್ವತ ಯೋಜನೆಯಾಯ್ತು. ಆದರೆ ಸಿದ್ದರಾಮಯ್ಯ ಆಡಳಿತದಲ್ಲಿ ಇಂಥ ಕಾರ್ಯಕ್ರಮಗಳು ಅನುಷ್ಠಾನ ಗೊಂಡಿವೆಯೇ? ಎಂಬ ದೊಡ್ಡ ಪ್ರಶ್ನೆ ಮುಂದಿದೆ. ಆದರೆ ಅನ್ನಭಾಗ್ಯದಂಥ ಕಲ್ಯಾಣ ಯೋಜನೆಗಳು ಹಾಗೂ ಪಂಚ ಗ್ಯಾರಂಟಿಗಳು ಕೂಡಾ ಶಾಶ್ವತವಾದ ಯೋಜನೆಗಳಾಗಿವೆ. ಸಿದ್ದರಾಮಯ್ಯ ನವರು ಮೊದಲ ಅವಧಿಯಲ್ಲೇ ಜಾರಿಗೆ ತಂದ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಕಾಯ್ದೆಯನ್ನು ಶಾಶ್ವತ ನಿರ್ಧಾರಗಳಲ್ಲ ಎಂದು ಬದಿಗೆ ಸರಿಸಲು ಸಾಧ್ಯವೇ? ಈ ಯೋಜನೆಯಿಂದಾಗಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಯೋಜನೆಯಲ್ಲಿ ಪಾಲು ಪಡೆಯಲು ಸಾಧ್ಯವಾಗಿದೆ. ಈ ಕಾರಣಕ್ಕಾಗಿ ಶೋಷಿತ ಸಮುದಾಯ ಶಾಶ್ವತವಾಗಿ ಸಿದ್ದರಾಮಯ್ಯ ಅವರನ್ನು ಸ್ಮರಿಸಿಕೊಳ್ಳಲೇಬೇಕು.

ಅರಸು ಹಾಗೂ ರಾಮಕೃಷ್ಣ ಹೆಗಡೆಯವರ ರೀತಿ ಸಿದ್ದರಾಮಯ್ಯ ಮೌಲ್ಯಾಧಾರಿತ ಪರಂಪರೆಯನ್ನು ಮುಂದುವರಿಸಲು ಹೊಸ ನಾಯಕತ್ವವನ್ನು ಸೃಷ್ಟಿಸಲಿಲ್ಲ ಎಂಬುದು ಇನ್ನೊಂದು ವಾದ. ಈ ಮಾತು ತಕ್ಕಮಟ್ಟಿಗೆ ನಿಜ ಎನಿಸಿದರೂ ರಾಜಕಾರಣದ ಕಾಲಘಟ್ಟವೂ ಕೂಡಾ ಮಹತ್ವ ಪಡೆದುಕೊಳ್ಳುತ್ತದೆ. ಹೊಸ ಸಾಧ್ಯತೆಗಳನ್ನು ಸೃಷ್ಟಿಸುವ ಸಮಯದಲ್ಲಿ ಇಂಥ ಪ್ರಯೋಗಗಳು ಯಶಸ್ವಿಯಾಗುತ್ತವೆ. ಸಿದ್ದರಾಮಯ್ಯ ಈ ಹಾದಿಯಲ್ಲಿ ಮುನ್ನಡೆಯಬಹುದಿತ್ತು ಎನ್ನುವುದು ನಿಜವಾದರೂ ಅವರು ಆ ದಿಶೆಯಲ್ಲಿ ಹೆಜ್ಜೆ ಇಟ್ಟೇ ಇಲ್ಲ ಎಂದು ಸಾರಾಸಗಟಾಗಿ ಉಪೇಕ್ಷಿಸುವಂತೆಯೂ ಇಲ್ಲ. ಸಿದ್ದರಾಮಯ್ಯನವರು ದೂರದೃಷ್ಟಿಯಿಂದ ಜಿಲ್ಲಾ ಪಂಚಾಯತ್, ನಗರ ಪಂಚಾಯತ್, ಪುರಸಭೆ, ನಗರಸಭೆಗಳಲ್ಲಿ ಅಹಿಂದ ಸಮುದಾಯಗಳಿಗೆ ರಾಜಕೀಯ ಮೀಸಲಾತಿ ಕೊಟ್ಟ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸರಕಾರಿ ಅಧಿಕಾರಿಗಳಿಗೆ ಬಡ್ತಿ ಮೀಸಲಾತಿ ನೀಡಿದ ಅವರ ಕ್ರಮಗಳು ಐತಿಹಾಸಿಕವಾಗಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 157

ಸಮಾಚಾರ ಸಣ್ಣದಲ್ಲ

ಜೆಎನ್‌ಯು ಮತ್ತೆ ವಿವಾದದ ಕೇಂದ್ರ

ದೆಹಲಿ: ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ವಿವಾದಾತ್ಮಕ ಘೋಷಣೆ ಕೂಗುವ ಮೂಲಕ ಜವಹರಲಾಲ್ ನೆಹರೂ ವಿಶ್ವವಿದ್ಯಾನಿಲಯ (ಜೆಎನ್‌ಯು) ಮತ್ತೊಮ್ಮೆ ಸುದ್ದಿಯಲ್ಲಿದೆ. 2020ರ ಫೆಬ್ರವರಿಯಲ್ಲಿ ದೆಹಲಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್‌ಗೆ ಸುಪ್ರೀಂಕೋರ್ಟ್ ಜಾಮೀನು ನೀಡುವುದಕ್ಕೆ ನಿರಾಕರಿಸಿದ ಬೆನ್ನಲ್ಲೇ ಕಾಲೇಜ್ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಕ್ಷೇಪಾರ್ಹ ಘೋಷಣೆ ಕೇಳಿ ಬಂದಿದೆ. ಎಡಪಂಥೀಯ ಸಂಘಟನೆಯ ವಿದ್ಯಾರ್ಥಿಗಳು 'ಜೆಎನ್‌ಯು ನೆಲದಲ್ಲಿ ಮೋದಿ ಮತ್ತು ಶಾ ಅವರ ಸಮಾಧಿ ತೋಡುತ್ತೇವೆ' ಎಂದು ಕೂಗಿದ್ದು ವ್ಯಾಪಕ ವಿರೋಧಕ್ಕೆ ಕಾರಣವಾಗಿದೆ. 2020ರ ಜನವರಿ 5ರಂದು ಜೆಎನ್‌ಯು ಕ್ಯಾಂಪಸ್‌ನಲ್ಲಿ ನಡೆದ ಹಿಂಸಾಚಾರದ 6ನೇ ವಾರ್ಷಿಕೋತ್ಸವವನ್ನು ಆಚರಿಸಲು ಸೇರಿದ್ದ ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ, ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಫೆಡರೇಶನ್ ಮತ್ತು ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ ಸೇರಿದಂತೆ ಎಡಪಂಥೀಯ ಸಂಘಟನೆಗಳೊಂದಿಗೆ ಸಂಬಂಧ ಹೊಂದಿರುವ ವಿದ್ಯಾರ್ಥಿಗಳು ಈ ವಿವಾದಾತ್ಮಕ ಘೋಷಣೆ ಕೂಗಿದ್ದರು.

ಟ್ರಂಪ್ ಬೆದರಿಕೆ ಲೆಕ್ಕಕ್ಕಿಲ್ಲ: ಕೊಲಂಬಿಯ ಅಧ್ಯಕ್ಷ

ಬೊಗೋಟಾ: ವೆನೆಜುವೆಲಾ ದೇಶದ ಮೇಲಿನ ದಾಳಿ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಲಂಬಿಯ ದೇಶಕ್ಕೆ ಬೆದರಿಕೆ ಹಾಕಿರುವುದಕ್ಕೆ

ಕೊಲಂಬಿಯ ಅಧ್ಯಕ್ಷ ಗುಸ್ತಾವೊ ಪೆಟ್ರೊ, 'ಟ್ರಂಪ್ ಬೆದರಿಕೆ ಲೆಕ್ಕಕ್ಕಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ. 'ನಾನು ಮತ್ತೆ ಆಯುಧ ಮುಟ್ಟುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದೆ. ಆದರೆ ಈಗ ತಾಯ್ನಾಡಿಗಾಗಿ ಮತ್ತೆ ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳುತ್ತೇನೆ' ಎಂದು ಮಾಜಿ ಗೆರಿಲ್ಲಾ ಹೋರಾಟಗಾರ ಪೆಟ್ರೊ ಹೇಳಿದ್ದಾರೆ. ಕೊಕೇನ್ ತಯಾರಿಕೆ ಇಷ್ಟಪಡುವ ಮತ್ತು ಅದನ್ನು ಅಮೆರಿಕಕ್ಕೆ ಮಾರಾಟ ಮಾಡಲು ಇಚ್ಚಿಸುವ ವ್ಯಕ್ತಿ ಪೆಟ್ರೊ, ಎಂದು ಟ್ರಂಪ್ ಟೀಕಿಸಿದ್ದರು. ಪೆಟ್ರೊ ಮತ್ತು ಅವರ ಕುಟುಂಬಕ್ಕೆ ಆರ್ಥಿಕ ನಿರ್ಬಂಧಗಳನ್ನು ವಿಧಿಸಿದ್ದಾರೆ. ಟ್ರಂಪ್ ಅಧಿಕಾರದ 2ನೇ ಅವಧಿಯಲ್ಲಿ ಟ್ರಂಪ್-ಪೆಟ್ರೊ ನಡುವಿನ ಅಸಮಾಧಾನ ಹೆಚ್ಚಾಗಿದೆ.

ತೆಲಂಗಾಣ: ಸದ್ಯದಲ್ಲೇ ಮತ್ತೊಂದು ಹೊಸ ಪಕ್ಷ

ಹೈದರಾಬಾದ್: ತೆಲಂಗಾಣ ವಿಧಾನಸಭಾ ಚುನಾವಣೆಗೆ ಇನ್ನೂ ಮೂರು ವರ್ಷ ಇದೆ. ಆದರೆ, ಈಗ ರಾಜ್ಯದಲ್ಲಿ ಹೊಸದೊಂದು ರಾಜಕೀಯ ಪಕ್ಷ

ಸ್ಥಾಪನೆಗೆ ವೇದಿಕೆ ಸಿದ್ಧವಾಗುತ್ತಿದೆ. ತಂದೆ ಕೆ. ಚಂದ್ರಶೇಖರ ರಾವ್ ತೆಲಂಗಾಣ ರಾಷ್ಟ್ರೀಯ ಸಮಿತಿ ಪಕ್ಷ ಸ್ಥಾಪಿಸಿ, ತೆಲಂಗಾಣದ ಸಿಎಂ ಆದರು. ಬಳಿಕ ಪಕ್ಷವನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯುವ ಸಲುವಾಗಿ 'ಭಾರತ ರಾಷ್ಟ್ರೀಯ ಸಮಿತಿ' (ಬಿಆರ್‌ಎಸ್) ಎಂದು ಹೆಸರು ಬದಲಿಸಿದರು. ಈಗ ಮಗಳ ಸರದಿ. ಕೆ. ಚಂದ್ರಶೇಖರ್ ರಾವ್ ಅವರ ಪುತ್ರಿ, ಕೆ.ಕವಿತಾ 'ತೆಲಂಗಾಣ ಜಾಗೃತಿ' ಹೆಸರಿನಲ್ಲಿ ರಾಜ್ಯದಲ್ಲಿ ಹೊಸ ಪಕ್ಷ ಆರಂಭಿಸಿರುವೆ ಎಂದು ಘೋಷಿಸಿದ್ದಾರೆ. ವಿಧಾನಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ಸದನದಲ್ಲಿ ಎಂಎಲ್‌ಸಿಯಾಗಿ ಕಡೆಯ ಭಾಷಣವನ್ನು ಸೋಮವಾರ ಮಾಡಿದ ಕವಿತಾ ಕಣ್ಣೀರಿಟ್ಟರು. ಆಸ್ತಿ ವಿವಾದದಿಂದಾಗಿ ನಾನು ಬಿಆರ್‌ಎಸ್ ಪಕ್ಷ ತೊರೆದೆ ಎಂದು ಕಾಂಗ್ರೆಸ್ ಆರೋ ಪಿಸುತ್ತಿದೆ. ಅದೆಲ್ಲಾ ಸುಳ್ಳು. ನಾನೀಗ ಸ್ವಾಭಿಮಾನ ದಿಂದಲೇ ಹೊಸ ಪಕ್ಷ ಸ್ಥಾಪಿಸಿರುವೆ. ಎಡಪಕ್ಷಗಳ ಸೋದರರು ಮತ್ತು ಪ್ರಜಾಸತ್ತಾತ್ಮಕ ನಿಯಮಗಳಲ್ಲಿ ಕಾರ್ಯನಿರ್ವಹಿಸುವ ಪಕ್ಷ ಬಯಸುವವರು ನನ್ನನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಲಖನೌ: 7 ದಿನ ಆರೆಸ್ಸೆಸ್ ರಾಷ್ಟ್ರೀಯ ಕಾರ್ಯಕಾರಿಣಿ

ಲಖನೌ: ಉತ್ತರ ಪ್ರದೇಶದ ಲಖನೌ ನಗರದಲ್ಲಿರುವ ವೃಂದಾವನದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) 7 ದಿನಗಳ 'ರಾಷ್ಟ್ರೀಯ ಕಾರ್ಯಕಾರಿ

ಮಂಡಳಿ'ಯ ಸಭೆ ಮಂಗಳವಾರ ಪ್ರಾರಂಭವಾಗಿದ್ದು, ಮೊದಲ ದಿನ ಮುಖ್ಯ ವಾಗಿ 'ಲವ್ ಜಿಹಾದ್', ಅಕ್ರಮ ವಲಸೆ ಮತ್ತು 'ಹಿಂದೂಗಳನ್ನು ಒಗ್ಗೂಡಿಸುವಿಕೆ' ಕುರಿತು ಚರ್ಚಿಸಲಾಗಿದೆ. ಆರ್‌ಎಸ್‌ಎಸ್ ಸರಸಂಘಚಾಲಕ್ (ಮುಖ್ಯಸ್ಥ) ಡಾ. ಮೋಹನ್ ಭಾಗವತ್ ಅವರು, ಸಂಘದ ಇತರೆ ಪ್ರಮುಖರು, ಹಿರಿಯ ಕಾರ್ಯಕರ್ತರ ಜತೆ ಸಭೆ ನಡೆಸಿ, ಹಿಂದೂಗಳ ಮನೆಗೇ ತೆರಳಿ ಅವರನ್ನು ಸಂಪರ್ಕಿಸುವುದು, ಹಿಂದೂಗಳು ಒಗ್ಗಟ್ಟಾಗಿರಲು ಮನವೊಲಿಸಬೇಕಿರುವುದು ಮತ್ತು ಅವರಿಗೆ ಏಕತೆಯ ಮಹತ್ವದ ಬಗ್ಗೆ ಅರಿವು ಮೂಡಿಸುವುದು ಬಹಳ ಮುಖ್ಯವಾಗಿದೆ ಎಂದರು. ಹಿಂದೂ ಸಮಾಜವನ್ನು ಕಾಡುತ್ತಿರುವ ಲವ್ ಜಿಹಾದ್ ಮತ್ತು ವಿಭಜನೆ ನೀತಿ ಬಗೆಗೆ ಭಾಗವತ್ ಕಳವಳ ವ್ಯಕ್ತಪಡಿಸಿದರು. ಹಿಂದೂಗಳ ಒಗ್ಗಟ್ಟಾಗಿದ್ದಾಗಷ್ಟೇ ಭಾರತ ಬಲಿಷ್ಠವಾಗಿರಲು ಸಾಧ್ಯ. ಸ್ವಯಂಸೇವಕರು ಲವ್ ಜಿಹಾದ್ ತಡೆಗೆ ಕಾವಲುಗಾರರಾಗಬೇಕು, ಈ ಕಾರ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಉತ್ತೇಜನ ಮಾತನಾಡಿದರು. ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಕಿರುಕುಳ ಮತ್ತು ಅಕ್ರಮ ವಲಸೆ ಬಗೆಗೂ ಮುಂದಿನ ದಿನಗಳಲ್ಲಿ ಸಭೆಯಲ್ಲಿ ಚರ್ಚೆಯಾಗಲಿದೆ ಎಂದು ಮೂಲಗಳು ತಿಳಿಸಿವೆ. ಜ.10ರಂದು ನಭಪೀಠ ಸುದಾಮ ಕುಟಿಯ ಶತಮಾನೋತ್ಸವಕ್ಕೆ ಭಾಗವತ್ ಚಾಲನೆ ನೀಡಲಿದ್ದಾರೆ.

ಬಿಹಾರ: ವಿಶ್ವದ ಅತಿದೊಡ್ಡ ಏಕಶಿಲಾ ಶಿವಲಿಂಗ ಪ್ರತಿಷ್ಠಾಪನೆಗೆ ಸಿದ್ಧ

ಏಕಶಿಲಾ ಶಿವಲಿಂಗ 33 ಅಡಿ ಎತ್ತರ, 210 ಮೆಟ್ರಿಕ್ ಟನ್ ತೂಕ

ತಮಿಳುನಾಡಿನ ಪಟ್ಟಿಕಾಡು ಗ್ರಾಮದಲ್ಲಿ 10 ವರ್ಷ ಕೆತ್ತನೆ ನಡೆಸಲಾದ ಏಕಶಿಲಾ ಶಿವಲಿಂಗ.

33 ಅಡಿ ಎತ್ತರದ ಶಿವಲಿಂಗದ ತಳಭಾಗದಲ್ಲಿ 1008 ಕಿರುಲಿಂಗಗಳ ಕೆತ್ತನೆ.

96 ಚಕ್ರಗಳ ಉದ್ದವಾದ ಟ್ರಕ್‌ನಲ್ಲಿ 210 ಟನ್ ತೂಕದ ಶಿವಲಿಂಗ ಸಾಗಣೆ.

ವಿಶ್ವದ ಅತಿ ದೊಡ್ಡ ಗಾತ್ರ ಮತ್ತು ತೂಕದ ಏಕಶಿಲಾ ಶಿವಲಿಂಗವನ್ನು ಬಿಹಾರದ ಚಂಪಾರಣ್ ಪ್ರದೇಶದಲ್ಲಿನ ವಿರಾಟ್ ರಾಮಾಯಣ ದೇವಾಲಯದಲ್ಲಿ ಪ್ರತಿಷ್ಠಾಪನೆ ಮಾಡುವುದಕ್ಕೆ ಸಿದ್ಧತೆಗಳು ನಡೆಯುತ್ತಿವೆ. ಜ.17ರಂದು ಭವ್ಯ ಸಮಾರಂಭದಲ್ಲಿ ಬೃಹತ್ ಶಿವಲಿಂಗ ಪ್ರತಿಷ್ಠಾಪನೆ ನಡೆಯಲಿದೆ. ದೇಶಾದ್ಯಂತದ ಸಂತರು, ವಿದ್ವಾಂಸರು ಮತ್ತು ದೊಡ್ಡ ಸಂಖ್ಯೆಯ ಭಕ್ತರು ಭಾಗವಹಿಸಲಿದ್ದಾರೆ ಎಂದು ದೇವಾಲಯ ಟ್ರಸ್ಟ್ ಮಂಗಳವಾರ ತಿಳಿಸಿದೆ.

33 ಅಡಿಗಳಷ್ಟು ಎತ್ತರವಾಗಿರುವ ಏಕಶಿಲಾ ಶಿವಲಿಂಗ 210 ಮೆಟ್ರಿಕ್ ಟನ್ ತೂಕವಿದೆ. ತಮಿಳುನಾಡಿನ ಪ್ರಸಿದ್ಧ ಕರಕುಶಲ ಕೇಂದ್ರವಾದ ಮಹಾಬಲಿಪುರಂ ಬಳಿಯ ಪಟ್ಟಿಕಾಡು ಗ್ರಾಮದಲ್ಲಿ 10 ವರ್ಷಗಳ ಕಾಲ ಕೆತ್ತನೆಯಾಗಿದೆ. ಇದೇ ಶಿವಲಿಂಗದ ಕೆಳಗಿನರ್ಧ ಭಾಗದಲ್ಲಿ 1008 (ಸಹಸ್ರ) ಕಿರು ಶಿವಲಿಂಗಗಳನ್ನೂ ಕೆತ್ತಲಾಗಿದೆ.

ಈ ಬೃಹತ್ ಶಿವಲಿಂಗವನ್ನು ರಸ್ತೆ ಮಾರ್ಗದಲ್ಲಿ 2,100 ಕಿ.ಮೀ.ಗಳಷ್ಟು ದೂರ ಸಾಗಿಸುವುದೇ ಸವಾಲಿನ ಕೆಲಸವಾಗಿತ್ತು. ಸಾಗಣೆಗೆ ವಿಶೇಷವಾಗಿ ವಿನ್ಯಾಸಗೊಳಿಸಲಾದ 96 ಚಕ್ರಗಳ ಟ್ರಕ್ ಬಳಸಲಾಗಿದೆ. ಪಟ್ಟಿಕಾಡು ಗ್ರಾಮದಿಂದ ಬಿಹಾರದ ಚಂಪಾರಣ್ ದೇಗುಲದವರೆಗೆ ಶಿವಲಿಂಗದ ಸಾಗಣೆಗೆ 45 ದಿನಗಳೇ ಹಿಡಿದಿದೆ.

ದೇಗುಲ

ಪಟನಾದ ಪ್ರಸಿದ್ಧ ಮಹಾವೀರ ದೇವಾಲಯದ ಪ್ರಧಾನ ಅರ್ಚಕರ ನೇತೃತ್ವದಲ್ಲಿ ಚಂಪಾರಣ್ ಪ್ರದೇಶದಲ್ಲಿನ ವಿರಾಟ್ ರಾಮಾಯಣ ದೇವಾಲಯವನ್ನು 120 ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿದೆ. 2023ರ ಜೂ20ರಂದು ದೇಗುಲಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು.

ಶಿಖರ

ದೇಗುಲ ಸಂಕೀರ್ಣದಲ್ಲಿ 22 ಇತರೆ ದೇವಾಲಯಗಳೂ ಇವೆ. ಪ್ರಧಾನ ದೇವಾಲಯ 1,080 ಅಡಿ ಉದ್ದ ಮತ್ತು 540 ಅಡಿ ಅಗಲವಿದ್ದು, ಒಟ್ಟು 12 ಶಿಖರಗಳನ್ನು ಹೊಂದಿದೆ. ದೇಗುಲದ ಮುಖ್ಯ ಶಿಖರವೇ 270 ಅಡಿ ಎತ್ತರವಿದೆ. ಇದು ವಿಶ್ವದ ಅತಿ ಎತ್ತರದ ಶಿವ ದೇವಾಲಯ ಶಿಖರ ಎನ್ನಲಾಗಿದೆ.

ಸೇನೆಯ ಆರ್ಟಿಲರಿ ಶೆಲ್‌ಗೆ ರ್‍ಯಾಮ್‌ಜೆಟ್ ತಂತ್ರಜ್ಞಾನ

ಸೇನಾಪಡೆ 155 ಎಂಎಂ ಆರ್ಟಿಲರ್ ಗನ್ ಮತ್ತು ಶೆಲ್ ಸಾಮರ್ಥ್ಯ ವೃದ್ಧಿ
ರ್‍ಯಾಮ್‌ಜೆಟ್ ಆರ್ಟಿಲರಿ ಶೆಲ್‌ಗೆ ವಿಶ್ವದಲ್ಲಿ ಭಾರತದಲ್ಲೇ ಮೊದಲು ಅಳವಡಿಕೆ
10 ಕಿಮೀ ಸಾಗುತ್ತಿದ್ದ ಆರ್ಟಿಲರಿ ಶೆಲ್‌ಗಳೀಗ 50 ಕಿಮೀವರೆಗೂ ಚಿಮ್ಮಬಲ್ಲವು
ಎದುರಿನಿಂದ ನುಗ್ಗಿಬರುವ ಗಾಳಿಯನ್ನೇ ಶಕ್ತಿವರ್ಧಕವಾಗಿಸುವ ತಂತ್ರಜ್ಞಾನ

ದೆಹಲಿ: ಭಾರತದ ರಕ್ಷಣಾಪಡೆ ದೊಡ್ಡ ಮಟ್ಟದಲ್ಲಿ ಸುಧಾರಣೆಯ ಹಾದಿಯಲ್ಲಿದೆ. ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು, ಯುದ್ಧ ವಿಮಾನ, ಸಮರ ಹೆಲಿಕಾಪ್ಟರ್, ಶಕ್ತಿಶಾಲಿ ಜಲಾಂತರ್ಗಾಮಿ, ಹೊಸ ಬಗೆ ಬಂದೂಕು, ಪಿರಂಗಿಗಳನ್ನು ಸಶಸ್ತ್ರ ಪಡೆಗಳಿಗೆ ಸೇರ್ಪಡೆ ಮಾಡಿಕೊಳ್ಳುತ್ತಿದೆ. ಈಗ ಹೊಸದಾಗಿ ಆರ್ಟಿಲರಿ ಗನ್(ಫಿರಂಗಿ)ಗಳಿಗೆ ಹೊಸಬಗೆಯ ಶೆಲ್‌ಗಳನ್ನು ಬಳಸಲು ಆರಂಭಿಸಿದೆ.

ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಮತ್ತು ಐಐಟಿ-ಮದ್ರಾಸ್ ಜಂಟಿಯಾಗಿ ಹೊಸಬಗೆಯ 'ರ್‍ಯಾಮ್‌ಜೆಟ್' ಶಕ್ತ ಆರ್ಟಿಲರಿ ಶೆಲ್‌ಗಳನ್ನು ಅಭಿವೃದ್ಧಿಪಡಿಸಿವೆ. ವಿಶೇಷವೆಂದರೆ, ಈ 'ರ್‍ಯಾಮ್‌ಜೆಟ್' ಶಕ್ತ ಆರ್ಟಿಲರಿ ಶೆಲ್‌ಗಳನ್ನು ಭಾರತೀಯ ಸೇನಾಪಡೆಯಲ್ಲಿನ '155 ಎಂಎಂ ಆರ್ಟಿಲರಿ ಗನ್'(ಪಿರಂಗಿ) ಗಳಲ್ಲಿ ಬಳಸಲೆಂದೇ ಅಭಿವೃದ್ಧಿಪಡಿಸಲಾಗಿದೆ.

ಆರ್ಟಿಲರಿ ಗನ್(ಫಿರಂಗಿ)ಗಳು.

ರ್‍ಯಾಮ್‌ಜೆಟ್ ತಂತ್ರಜ್ಞಾನ ಹೊಸದೇನೂ ಅಲ್ಲ. ಹಲವಾರು ದೇಶಗಳು ಈ ತಂತ್ರಜ್ಞಾನವನ್ನು ಇತರೆ ಶಸ್ತ್ರಾಸ್ತ್ರಗಳಲ್ಲಿ ಬಳಸುತ್ತಿವೆ. ಆದರೆ, ಈವರೆಗೂ ಯಾವುದೇ ದೇಶವೂ ಆರ್ಟಿಲರಿ ಶೆಲ್‌ಗಳಲ್ಲಿ 'ರ್‍ಯಾಮ್‌ಜೆಟ್' ತಂತ್ರಜ್ಞಾನವನ್ನು ಬಳಸಿಲ್ಲ. ಹಾಗಾಗಿ ವಿಶ್ವದಲ್ಲಿ ಭಾರತದಲ್ಲೇ ಈ ಪ್ರಯತ್ನ ಮೊದಲು ಎನ್ನಲಾಗಿದೆ. ಆ ಮೂಲಕ ಡಿಆರ್‌ಡಿಒ ಮತ್ತು ಐಐಟಿ-ಮದ್ರಾಸ್ ಈ ವಿಶಿಷ್ಟ ಸಾಧನೆ ಮಾಡಿದಂತಾಗಿದೆ.

ಗಾಳಿಯಲ್ಲಿಯೇ ಗುರಿಯತ್ತ ಚಿಮ್ಮುವ ಆರ್ಟಿಲರ್ ಶೆಲ್‌ಗಳು ಎದುರಿನಿಂದ ನುಗ್ಗಿ ಬರುವ ಗಾಳಿಯನ್ನೇ ವೇಗವರ್ಧನೆಗೆ ಶಕ್ತಿಯಾಗಿ ಬಳಸಿಕೊಳ್ಳುವುದೇ 'ರ್‍ಯಾಮ್‌ಜೆಟ್' ತಂತ್ರಜ್ಞಾನದ ವೈಶಿಷ್ಟ್ಯವಾಗಿದೆ. ಈ ತಂತ್ರಜ್ಞಾನವನ್ನು ಒಳಗೊಂಡಿರುವ ಆರ್ಟಿಲರಿ ಶೆಲ್‌ಗಳನ್ನು ಮತ್ತು ಅವನ್ನು ಗುರಿಯತ್ತ ಚಿಮ್ಮಿಸುವ ಆರ್ಟಿಲರಿ ಗನ್‌ಗಳನ್ನು ಹೊಂದಿರುವ ವಿಶ್ವದ ಮೊದಲ ಸಶಸ್ತ್ರ ಸೇನೆ ಭಾರತದ್ದಾಗಿದೆ.

ಭಾರತೀಯ ಸೇನಾಪಡೆಯ ಬತ್ತಳಿಕೆಯಲ್ಲಿರುವ ಪ್ರಮುಖ ಶಸ್ತ್ರಾಸ್ತ್ರಗಳಲ್ಲಿ ಆರ್ಟಿಲರಿ ಶೆಲ್‌ಗಳು ಸೇರಿವೆ. ಆದರೆ, ಅವುಗಳಿಗೆ ಈಗ ರ್‍ಯಾಮ್‌ಜೆಟ್ ತಂತ್ರಜ್ಞಾ ಅಳವಡಿಸಿರುವುದೇ ಹೊಸಬಗೆಯೆನಿಸಿದೆ.



155 ಎಂಎಂ ಆರ್ಟಿಲರಿ ಶೆಲ್

ರ್‍ಯಾಮ್‌ಜೆಟ್ ತಂತ್ರಜ್ಞಾನ

'ರ್‍ಯಾಮ್‌ಜೆಟ್' ತಂತ್ರಜ್ಞಾನ ಎಂಬುದು ಒಳನುಗ್ಗುವ ಗಾಳಿ ಬಳಸಿಕೊಂಡು ಕೆಲಸ ಮಾಡುವ ಎಂಜಿನ್ ಮಾದರಿಯಾಗಿದೆ. ದೊಡ್ಡ ಕ್ಷಿಪಣಿಗಳಾದರೆ ಗುರಿಯತ್ತ ವೇಗವಾಗಿ ಸಾಗಲು ಅದರೊಳಗೇ ಫ್ಯಾನ್ ರೀತಿಯಲ್ಲಿ ಗಿರಗಿರನೆ ತಿರುಗುವ ಕಂಪ್ರೆಸ್ಸರ್‌ಗಳು, ಕೆಲವುದರಲ್ಲಿ ಟರ್ಬೈನ್ ಎಂಜಿನ್‌ಗಳು ಇರುತ್ತವೆ. ಆದರೆ, ಆರ್ಟಿಲರಿ ಶೆಲ್‌ಗಳಲ್ಲಿ ಇಂಥ ವ್ಯವಸ್ಥೆ ಈವರೆಗೂ ಇರಲಿಲ್ಲ. ಇದೇ ಮೊದಲ ಬಾರಿಗೆ ಡಿಆರ್‌ಡಿಒ ಮತ್ತು ಐಐಟಿ ಮದ್ರಾಸ್ ಸಂಸ್ಥೆಯ ತಂತ್ರಜ್ಞರು 'ರ್‍ಯಾಮ್ ಜೆಟ್' ತಂತ್ರಜ್ಞಾನವನ್ನು ಆರ್ಟಿಲರಿ ಶೆಲ್‌ಗಳಲ್ಲೂ ಬಳಸಿದ್ದಾರೆ.



ಆರ್ಟಿಲರಿ ಶೆಲ್‌ಗಳಲ್ಲಿ ರ್‍ಯಾಮ್‌ಜೆಟ್ ತಂತ್ರಜ್ಞಾನ ಅಳವಡಿಕೆ.

ಆರ್ಟಿಲರಿ ಗನ್‌ನಿಂದ(ಪಿರಂಗಿಯಿಂದ) ಹೊರಚಿಮ್ಮುವ ಆರ್ಟಿಲರಿ ಶೆಲ್‌ಗಳು ನಿರ್ದಿಷ್ಟ ವೇಗ ಪಡೆದುಕೊಂಡ ಬಳಿಕ ರ್‍ಯಾಮ್‌ಜೆಟ್ ತಂತ್ರಜ್ಞಾನದ ಅಂಗಗಳು ಸಕ್ರಿಯಗೊಳ್ಳುತ್ತವೆ. ಎದುರಿನಿಂದ ನುಗ್ಗಿರುವ ಬರುವ ಗಾಳಿಯನ್ನೇ 'ರ್‍ಯಾಮ್‌ಜೆಟ್' ತಂತ್ರಜ್ಞಾನ ಶಕ್ತಿವರ್ಧಕವಾಗಿ ಬಳಸಿಕೊಂಡು ಶೆಲ್‌ಗಳು ಇನ್ನಷ್ಟು ವೇಗವಾಗಿ ಹಾಗೂ ಹೆಚ್ಚು ದೂರ ಗುರಿಯತ್ತ ಸಾಗುವಂತೆ ಮಾಡುತ್ತದೆ. ಸಾಮಾನ್ಯವಾಗಿ ಈ ರ್‍ಯಾಮ್‌ಜೆಟ್ ತಂತ್ರಜ್ಞಾನವನ್ನು ಮಿಸೈಲ್(ಕ್ಷಿಪಣಿ)ಗಳಿಗೆ ಅಳವಡಿಸಲಾಗುತ್ತದೆ. ಆದರೆ, ಡಿಆರ್‌ಡಿಒ ಮತ್ತು ಮದ್ರಾಸ್ ಐಐಟಿ ತಂತ್ರಜ್ಞರು ಭಿನ್ನವಾಗಿ ಆಲೋಚಿಸಿ ಆರ್ಟಿಲರಿ ಶೆಲ್‌ಗಳಲ್ಲಿಯೂ ರ್‍ಯಾಮ್‌ಜೆಟ್ ತಂತ್ರಜ್ಞಾನವನ್ನು ಅಳವಡಿಕೆ ಮಾಡಿರುವುದು 'ಆರ್ಟಿಲರಿ ಗನ್' ಶಸ್ತ್ರಾಸ್ತ್ರಗಳ ವಿಭಾಗದಲ್ಲಿಯೇ ಹೊಸ ಆರಂಭ ಎನಿಸಿಕೊಂಡಿದೆ.

ಮೊದಲಿಗೆ 155 ಎಂಎಂ ಆರ್ಟಿಲರಿ ಶೆಲ್‌ಗೆ ಬಳಕೆ

ನೂರಾರು ಮೀಟರ್‌ಗಳಿಂದ ಹತ್ತಾರು ಕಿಮೀ ದೂರದವರೆಗಿನ ಶತ್ರು ನೆಲೆಗಳ ಮೇಲೆ ದಾಳಿ ನಡೆಸುವುದಕ್ಕೆ ಬೋಫೋರ್ಸ್, ಹೋವಿಟ್ಜರ್ ಮೊದಲಾದ ಆರ್ಟಿಲರಿ ಗನ್‌ಗಳನ್ನು(ಫಿರಂಗಿಗಳನ್ನು) ಬಳಸಲಾಗುತ್ತದೆ. ಬಂದೂಕಿನಲ್ಲಿ ಗುಂಡುಗಳನ್ನು ಬಳಸಿದಂತೆ ಈ ಪಿರಂಗಿಗಳಲ್ಲಿ ಆರ್ಟಿಲರಿ ಶೆಲ್‌ಗಳನ್ನು ಬಳಸಲಾಗುತ್ತದೆ. ಈ ಆರ್ಟಿಲರಿ ಶೆಲ್‌ಗಳಲ್ಲಿಯೂ ಈಗ ರ್‍ಯಾಮ್‌ಜೆಟ್ ಅಳವಡಿಸಲಾಗುತ್ತಿದೆ. ಸಾಮಾನ್ಯ ಆರ್ಟಿಲರಿ ಶೆಲ್‌ಗಳು 5-10 ಕಿಮೀ ಸಾಗಬಲ್ಲವಾದರೆ, ರ್‍ಯಾಮ್‌ಜೆಟ್ ತಂತ್ರಜ್ಞಾನ ಅಳವಡಿಸಿದ ಆರ್ಟಿಲರಿ ಶೆಲ್‌ಗಳು 50 ಕಿಮೀಗೂ ಅಧಿಕ ದೂರದವರೆಗೂ ಸೂಪರ್‌ಸಾನಿಕ್ ವೇಗದಲ್ಲಿ ಸಾಗಿ ಗುರಿಯನ್ನು ಧ್ವಂಸಗೊಳಿಸಬಲ್ಲವು.

ಸದ್ಯ ರ್‍ಯಾಮ್‌ಜೆಟ್ ತಂತ್ರಜ್ಞಾನವನ್ನು 155 ಎಂಎಂ ಆರ್ಟಿಲರಿ ಗನ್‌ಗಳಲ್ಲಿ ಬಳಸುವ ಶೆಲ್‌ಗಳಿಗೆ ಅಳವಡಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಲೈಟ್ ಹೋವಿಟ್ಜರ್ ಗನ್ ಇತ್ಯಾದಿ ಇನ್ನೂ ಹಲವು ವೆಪನ್ ಸಿಸ್ಟಂಗಳಿಗೆ ರ್‍ಯಾಮ್‌ಜೆಟ್ ಶಕ್ತ ಆರ್ಟಿಲರಿ ಶೆಲ್‌ಗಳನ್ನು ಸೇರಿಸುವ ಯೋಜನೆ ಭಾರತದ ಸೇನಾಪಡೆಯದ್ದಾಗಿದೆ. ಆತ್ಮನಿರ್ಭರ ಭಾರತ ಪರಿಕಲ್ಪನೆಯಡಿ ಸಿದ್ಧಗೊಂಡಿರುವ ರ್‍ಯಾಮ್‌ಜೆಟ್ ಅಳವಡಿಸಿದ 155 ಎಂಎಂ ಆರ್ಟಿಲರಿ ಶೆಲ್‌ಗಳು 50 ಕಿಮೀಗಿಂತಲೂ ಹೆಚ್ಚು ದೂರ ಸಾಗಬಲ್ಲವಾಗಿವೆ.

ತ.ನಾಡಿನ ತಿರುನಲ್ವೇಲಿ ಜಿಲ್ಲೆಯ ಪೋಕ್ಸೊ ನ್ಯಾಯಾಲಯ ತೀರ್ಪು

2 ವಾರದಲ್ಲೇ ಇಬ್ಬರು ಪಾಪಿ ತಂದೆಯರಿಗೆ ಮರಣದಂಡನೆ ಆದೇಶ

ಅಪ್ರಾಪ್ತ ಪುತ್ರಿಯ ಗರ್ಭಿಣಿ ಮಾಡಿದ ಪಾಪಿಗೆ ಗಲ್ಲು ಶಿಕ್ಷೆ

ತಿರುನಲ್ವೇಲಿ: ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ವಲಿಯೂರು ಪಾಪಿ ತಂದೆಯೊಬ್ಬ ತನ್ನ 14 ವರ್ಷದ ಮಗಳ ಮೇಲೆ ಅತ್ಯಾಚಾರ ನಡೆಸಿ ಗರ್ಭಿಣಿಯನ್ನಾಗಿಸಿದ್ದಾನೆ. ಬಾಲಕಿ ಮಗುವಿಗೂ ಜನ್ಮ ನೀಡಿದ್ದಾಳೆ. ಆ ಮಗುವಿನ ಜನ್ಮಕ್ಕೆ ಬಾಲಕಿಯ ತಂದೆಯೇ ಕಾರಣ ಎಂಬುದು ಡಿಎನ್‌ಎ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಆ ಬಳಿಕ ಪೋಕ್ಸೊ ನ್ಯಾಯಾಲಯ ಪಾಪಿ ತಂದೆಗೆ ಮರಣದಂಡನೆ ವಿಧಿಸಿದೆ.

ತಿರುನೆಲ್ವೇಲಿ ಜಿಲ್ಲೆಯ ಪಣಗುಡಿ ಪ್ರದೇಶದ ದಿನಗೂಲಿ ಕಾರ್ಮಿಕನಿಗೆ ಇಬ್ಬರು ಪತ್ನಿಯರು. 2ನೇ ಪತ್ನಿಯ ಇಬ್ಬರು ಪುತ್ರಿಯರಲ್ಲಿ ಕಿರಿಯಳಾದ 14 ವರ್ಷದ ಮಗಳು 10ನೇ ತರಗತಿ ಓದುತ್ತಿದ್ದಾಳೆ. 2025ರ ಜನವರಿಯಲ್ಲಿ ಮಗಳ ದೇಹದಲ್ಲಿ ಬಹಳ ಬದಲಾವಣೆ ಆಗುತ್ತಿರುವುದು ತಾಯಿಗೆ ಗಮನಕ್ಕೆ ಬಂದಿದೆ. ಮಗಳನ್ನು ಆಸ್ಪತ್ರೆಗೆ ಕರೆದೊಯ್ದಾಗ ಆಕೆ 5 ತಿಂಗಳ ಗರ್ಭಿಣಿ ಎಂದು ತಿಳಿದಿದೆ. ಮಗಳನ್ನು ವಿಚಾರಿಸಿದಾಗ 'ಅಪ್ಪನೇ 2024ರಿಂದಲೂ ತನಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ' ಎಂದು ಅಳುತ್ತಾ ಹೇಳಿದ್ದಾಳೆ. ತೀವ್ರ ದುಃಖಿತಳಾದ ತಾಯಿ ಫೆಬ್ರವರಿಯಲ್ಲಿ ವಲ್ಲಿಯೂರು ಮಹಿಳಾ ಠಾಣೆಗೆ ದೂರು ದಾಖಲಿಸಿದ್ದಾರೆ. ಪಾಪಿ ತಂದೆಯನ್ನು ತಕ್ಷಣ ಬಂಧಿಸಿದ ಪೊಲೀಸರು ಕಾನೂನು ಕ್ರಮ ಜರುಗಿಸಿದ್ದಾರೆ.

ತಿರುನಲ್ವೇಲಿ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸುರೇಶ್ ಕುಮಾರ್, ಸೋಮವಾರ ತೀರ್ಪು ಪ್ರಕಟಿಸುವ ವೇಳೆ ಮೊದಲಿಗೆ ಪ್ರಕರಣದಲ್ಲಿ ಆರೋಪಿಗೆ ಕನಿಷ್ಠ ಶಿಕ್ಷೆ ನೀಡಲು ಪರಿಗಣಿಸಲಾಗಿದೆ ಎಂದಿದ್ದರು. ಆದರೆ, ಸಂತ್ರಸ್ತ ಬಾಲಕಿ ಮತ್ತು ಆಕೆಯ ತಾಯಿ ಇಬ್ಬರೂ ಅಪರಾಧಿಗೆ ಗರಿಷ್ಠ ಶಿಕ್ಷೆಯನ್ನೇ ನೀಡಬೇಕೆಂದು ಆಗ್ರಹಿಸಿದರು. ಅವರ ಮನವಿ ಪುರಸ್ಕರಿಸಿದ ನ್ಯಾಯಾಧೀಶರು ಅಪರಾಧಿಗೆ ಮರಣದಂಡನೆ ವಿಧಿಸಲಾಗುತ್ತಿದೆ ಎಂದು ಘೋಷಿಸಿದರು.

2 ವಾರದಲ್ಲೇ 2ನೇ ಆಘಾತಕಾರಿ ಪ್ರಕರಣ

ಇದೇ ನ್ಯಾಯಾಲಯ 11 ದಿನಗಳ ಹಿಂದೆ ಇಂತಹುದೇ ಮತ್ತೊಂದು ಪ್ರಕರಣದಲ್ಲಿಯೂ ಕಾಮುಕ ತಂದೆಗೆ ಮರಣ ದಂಡನೆ ವಿಧಿಸಿತ್ತು. 2 ವಾರಗಳಿಗೂ ಕಡಿಮೆ ಅವಧಿಯಲ್ಲೇ ಇಬ್ಬರು ಪಾಪಿ ತಂದೆಯರಿಗೆ ಮರಣದಂಡನೆ ವಿಧಿಸಿರುವುದು ಭಾರೀ ಚರ್ಚೆಗೆ ಕಾರಣವಾಗಿದೆ. ಪುಟ್ಟ ಬಾಲಕಿಯರ ಮೇಲೆ ಮನೆಯೊಳಗೇ ಲೈಂಗಿಕ ದೌರ್ಜನ್ಯ ಹೆಚ್ಚುತ್ತಿರುವುದಕ್ಕೆ, ಅದೂ ತಂದೆಯಿಂದಲೇ ಅತ್ಯಾಚಾರ ನಡೆಯುತ್ತಿರುವುದಕ್ಕೆ ನ್ಯಾಯಾಲಯ ಮತ್ತು ಸಮಾಜದಲ್ಲಿ ತೀವ್ರ ಕಳವಳ ವ್ಯಕ್ತವಾಗಿದೆ.

ಗೂಢಚರ್ಯೆ: 15ರ ಬಾಲಕ ಸೆರೆ

ಚಂಡೀಗಢ: ಭಾರತದ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳನ್ನು ಪಾಕಿಸ್ತಾನದ ಬೇಹುಗಾರಿಕಾ ಏಜೆಂಟರುಗಳಿಗೆ ದಾಟಿಸಿದ ಆರೋಪದಡಿ ಪಂಜಾಬ್ ರಾಜ್ಯದ ಪಠಾಣ್‌ಕೋಟ್‌ನಲ್ಲಿ 15 ವರ್ಷದ ಬಾಲಕನನ್ನು ಬಂಧಿಸಲಾಗಿದೆ. ಬಾಲಕ ಪಾಕ್ ಸೇನೆಯ ಕೆಳಹಂತದ ಅಧಿಕಾರಿಗಳು, ಐಎಸ್‌ಐ ಮತ್ತು ಉಗ್ರಗಾಮಿ ಸಂಘಟನೆ ನಡೆಸುತ್ತಿರುವ ಒಬ್ಬ ಗ್ಯಾಂಗ್‌ಸ್ಟರ್ ಜತೆಗೂ ಸಂಪರ್ಕದಲ್ಲಿದ್ದ. ಭಾರತದ ಸೂಕ್ಷ್ಮ ಪ್ರದೇಶಗಳ ಭದ್ರತಾ ವ್ಯವಸ್ಥೆ, ಸೇನಾಧಿಕಾರಿಗಳ ಚಲನವಲನ, ಗಡಿ ಭಾಗದ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದ ಬಾಲಕ, ಅದನ್ನೆಲ್ಲಾ ಪಾಕ್ ಐಎಸ್‌ಐ ಸಂಪರ್ಕದ ವ್ಯಕ್ತಿಗಳಿಗೆ ರವಾನಿಸುತ್ತಿದ್ದ. ಬಾಲಕ ತಂತ್ರಜ್ಞಾನದಲ್ಲಿ ಬಹಳಷ್ಟು ಪರಿಣತಿ ಪಡೆದಿದ್ದ. ಸಾಮಾಜಿಕ ಮಾಧ್ಯಮಗಳು ಬಾಲಕನನ್ನು ಮತಾಂಧನಾಗಿ ಬದಲಿಸಿದ್ದವು ಎಂದು ಪಠಾಣ್‌ಕೋಟ್ ಎಸ್‌ಎಸ್‌ಪಿ ದಲ್ಜಿಂದರ್ ಸಿಂಗ್ ಧಿಲ್ಲೋನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಜಮ್ಮು ವಲಯದ ಸಾಂಬಾ ಜಿಲ್ಲೆಯ ನಿವಾಸಿಯಾದ ಬಾಲಕನ ತಂದೆ ವರ್ಷಗಳ ಹಿಂದೆಯೇ ನಿಧನರಾಗಿದ್ದಾರೆ. ಅದು ಬಾಲಕನ ಮನಸ್ಸಿನ ಮೇಲೆ ಪರಿಣಾಮ ಬೀರಿದೆ. ಇದೇ ವಿಚಾರವಾಗಿ ಜಾಲತಾಣದಲ್ಲಿ ಶೋಧ ನಡೆಸಿದ್ದಾಗಲೇ ವರ್ಷದ ಹಿಂದೆ ಪಾಕ್ ಗುಪ್ತಚರ ಜಾಲದ ಸಂಪರ್ಕಕ್ಕೆ ಬಂದಿದ್ದಾನೆ. ಬಾಲಕನ ಮನವೊಲಿಸಿದ ಪಾಕ್ ಏಜೆಂಟರು ಬಾಲಕನ ಸ್ಮಾರ್ಟ್‌ಫೋನ್‌ನ ಕ್ಲೋನಿಂಗ್ (ಮತ್ತದೇ ಮಾದರಿಯ ಇನ್ನೊಂದು ಸ್ಮಾಟ್‌ಫೋನ್) ರಚಿಸಿದ್ದಾರೆ. ಅದರ ಮೂಲಕವೇ ಭಾರತದ ಭದ್ರತೆ ವ್ಯವಸ್ಥೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ ಎಂದು ಧಿಲ್ಲೋನ್ ವಿವರಿಸಿದ್ದಾರೆ.

ಕಾರ್ತಿಕ ದೀಪಕ್ಕೆ ಹೈ ಅನುಮತಿ ಸ್ಟಾಲಿನ್ ಸರಕಾರಕ್ಕೆ ಮುಖಭಂಗ

ಚೆನ್ನೈ: ತಮಿಳುನಾಡಿನ ತಿರುಪ್ಪಾರಂಕುಂಡ್ರಮ್ ದೇಗುಲವಿರುವ ಬೆಟ್ಟದ ಮೇಲೆ ಇರುವ 'ದೀಪಸ್ಥಂಭ'ದಲ್ಲಿ ದೊಡ್ಡ ದೀಪವನ್ನು ಬೆಳಗಿಸಿ ದೀಪೋತ್ಸವ ನಡೆಸುವ ಸಂಪ್ರದಾಯವನ್ನು ಮುಂದುವರಿಸುವ ಸಂಬಂಧ ತಮಿಳುನಾಡಿನ ಹೈಕೋರ್ಟ್ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರ ಏಕಸದಸ್ಯ ನೀಡಿದ್ದ ಆದೇಶವನ್ನು ಹೈಕೋರ್ಟ್ ಮದುರೈನ ದ್ವಿಸದಸ್ಯ ಪೀಠ ಮಂಗಳವಾರ ಎತ್ತಿ ಹಿಡಿದಿದೆ.

ನ್ಯಾಯಮೂರ್ತಿ ಜಿ.ಜಯಚಂದ್ರನ್ ಮತ್ತು ನ್ಯಾ. ಕೆ.ಕೆ.ರಾಮಕೃಷ್ಣನ್ ಅವರನ್ನೊಳಗೊಂಡ ದ್ವಿಸದಸ್ಯ ಪೀಠ ಏಕಸದಸ್ಯ ಪೀಠದ ಆದೇಶ ಸಮರ್ಪಕವಾಗಿದೆ ಎಂದು ಹೇಳಿದೆ.

ಸಂರಕ್ಷಿತ ಪ್ರದೇಶದಲ್ಲಿರುವ ಬೆಟ್ಟದ ಮೇಲಿನ ದೀಪಸ್ಥಂಭದಲ್ಲಿ ಕಾರ್ತಿಕ ದೀಪವನ್ನು ಹಿಂದಿನಂತೆಯೇ ನಿಯಮಗಳ ಅನುಸಾರ ಬೆಳಗಿಸಬಹುದಾಗಿದೆ. ಜಿಲ್ಲಾಡಳಿತವು ಭಾರತೀಯ ಪುರಾತತ್ವ ಇಲಾಖೆ(ಎಎಸ್‌ಐ)ಯನ್ನು ಸಂಪರ್ಕಿಸಿ ಸಲಹೆ ಪಡೆದುಕೊಂಡು, ಭಕ್ತರ ಸಂಖ್ಯೆಯನ್ನು

ನಿಗದಿಪಡಿಸಬೇಕು, ಆ ನಂತರ ದೀಪವನ್ನು ಬೆಳಗಿಸಲು ಜಿಲ್ಲಾಡಳಿತ ಅನುವು ಮಾಡಿಕೊಡಬಹುದಾಗಿದೆ ಎಂದು ದ್ವಿಸದಸ್ಯ ಪೀಠ ತನ್ನ ಆದೇಶದಲ್ಲಿ ಹೇಳಿದೆ.

ದ್ವಿಸದಸ್ಯ ಪೀಠದ ಆದೇಶ ಮೈಲುಗಲ್ಲು ರೀತಿಯಲ್ಲಿದೆ ಎಂದು ಬಣ್ಣಿಸಿರುವ ಅರ್ಜಿದಾರ ರಾಜೇಶ್, ತಮಿಳುನಾಡಿನ ಹಿಂದೂಗಳಿಗೆ ಮತ್ತು ಮುರುಗ ಸ್ವಾಮಿಯ ಭಕ್ತರಿಗೆ ಸಿಕ್ಕ ಜಯ ಇದು ಎಂದು ಹೇಳಿಕೊಂಡಿದ್ದಾರೆ. ದೇಗುಲದ ಆಡಳಿತ ದೀಪೋತ್ಸವ ನಡೆಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕಿದೆ ಎಂದೂ ರಾಜೇಶ್ ಹೇಳಿದ್ದಾರೆ.

ಕೇಂದ್ರ ಮಾಜಿ ಸಚಿವ ಕಲ್ಮಾಡಿ ನಿಧನ

ಪುಣೆ: ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ಕೇಂದ್ರ ಸಚಿವ ಸುರೇಶ್ ಕಲ್ಮಾಡಿ ಅವರು ದೀರ್ಘಕಾಲದ ಅನಾರೋಗ್ಯದಿಂದ ಪುಣೆಯಲ್ಲಿ ಮಂಗಳವಾರ ನಿಧನರಾದರು. ಅವರಿಗೆ 81 ವರ್ಷವಾಗಿತ್ತು. ವಾಯುಪಡೆಯಿಂದ ರಾಜಕೀಯ ಮತ್ತು ಕ್ರೀಡಾ ಆಡಳಿತದವರೆಗೆ ತಮ್ಮ ಛಾಪು ಮೂಡಿಸಿದ್ದ ಕಲ್ಮಾಡಿ, ಪುಣೆ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಿದ್ದರು.



ಸೇನೆ, ಕ್ರೀಡೆ, ರಾಜಕೀಯ ಸೇರಿ ಹಲವು ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ್ದ ಸುರೇಶ್ ಕಲ್ಮಾಡಿ

ಸುರೇಶ್‌ರದ್ದು ಉಡುಪಿ ಕಲ್ಮಾಡಿ ಮೂಲ, ಚೆನ್ನೈನಲ್ಲಿ ಜನನ

1944ರಲ್ಲಿ ಮದ್ರಾಸ್‌ನಲ್ಲಿ ಜನಿಸಿದ ಕಲ್ಮಾಡಿ ಮೂಲತಃ ಉಡುಪಿ ಜಿಲ್ಲೆಯ ಕಲ್ಮಾಡಿಯವರು. ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ಅಧ್ಯಯನ ಮಾಡಿದರು. 1964ರಿಂದ 1974ರವರೆಗೆ ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸಿದರು. 1974ರಲ್ಲಿ ಸೇವೆಯಿಂದ ನಿವೃತ್ತರಾದ ಬಳಿಕ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಅವರು, 1995, 1996ರ ನಡುವೆ ಕಾಂಗ್ರೆಸ್ ನೇತೃತ್ವದ ಸರಕಾರದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶರದ್ ಪವಾರ್ ಅವರ ಗುಂಪಿನಲ್ಲಿ ಗುರುತಿಸಿಕೊಂಡು ಪುಣೆ ಯುವ ಕಾಂಗ್ರೆಸ್ ಮುಖ್ಯಸ್ಥರಾದರು, ನಂತರ ಸಂಜಯ್ ಗಾಂಧಿ ಮತ್ತು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರೊಂದಿಗೆ ನಿಕಟ ಸಂಬಂಧ ವನ್ನು ಬೆಳೆಸಿಕೊಂಡರು. 1980ರ ದಶಕದ ಉತ್ತರಾರ್ಧದಲ್ಲಿ ಕಾಂಗ್ರೆಸ್ ವಿಭಜನೆಯಾದ ನಂತರ, ಕಲ್ಮಾಡಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿಯೇ ಇದ್ದರು. 1982, 1988, 1994 ಮತ್ತು 1998ರಲ್ಲಿ ರಾಜ್ಯಸಭೆಗೆ ಆಯ್ಕೆಯಾ ದರು. ರಾಜ್ಯಸಭಾ ಸದಸ್ಯರಾಗಿದ್ದ ಅವಧಿಯಲ್ಲಿ, 1995ರಲ್ಲಿ ಪಿ.ವಿ.ನರಸಿಂಹ ರಾವ್ ಸರಕಾರದಲ್ಲಿ ಕೇಂದ್ರ ರೈಲ್ವೆ ಸಹಾಯಕ ಸಚಿವರಾಗಿ ಸೇವೆ ಸಲ್ಲಿಸಿದರು.

1996ರಲ್ಲಿ ಪುಣೆಯಿಂದ ಲೋಕಸಭೆಗೆ ಆಯ್ಕೆಯಾದ ಕಲ್ಮಾಡಿ, ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಆ ಸ್ಥಾನವನ್ನು ಕಳೆದುಕೊಂಡರು, ನಂತರ 2004 ಮತ್ತು 2009ರ ಚುನಾವಣೆಗಳಲ್ಲಿ ಗೆದ್ದರು. 2003ರ ಆಫ್ರೋ ಏಷ್ಯನ್ ಕ್ರೀಡಾಕೂಟ, 2008ರ ಕಾಮನ್‌ವೆಲ್ತ್ ಯುವ ಕ್ರೀಡಾಕೂಟ, 2010ರ ಕಾಮನ್‌ವೆಲ್ತ್ ಕ್ರೀಡಾಕೂಟ, ಹಾಗೆಯೇ 1989 ಮತ್ತು 2013ರಲ್ಲಿ ನಡೆದ ಎರಡು ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಳು ಸೇರಿದಂತೆ ಹಲವಾರು ಉನ್ನತ ದರ್ಜೆಯ ಕ್ರೀಡಾಕೂಟಗಳನ್ನು ದೇಶಕ್ಕೆ ತಂದರು.

ಕಲ್ಮಾಡಿ ಅವರ ಐಒಎ ಮುಖ್ಯಸ್ಥರ ಅಧಿಕಾರಾವಧಿಯು 1996ರಿಂದ 2011ರವರೆಗೆ ಇತ್ತು, ಆ ವರ್ಷ ಕಾಮನ್‌ವೆಲ್ತ್ ಕ್ರೀಡಾಕೂಟ (ಸಿಡಬ್ಲ್ಯುಜಿ) ನಡೆಸುವಲ್ಲಿ ಭ್ರಷ್ಟಾಚಾರದ ಆರೋಪಗಳು ಹೊರಿಸಲ್ಪಟ್ಟವು. ನಂತರ ಅವರನ್ನು ಬಂಧಿಸಲಾಯಿತು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷವು ಅವರನ್ನು ಅಮಾನತುಗೊಳಿಸಿತ್ತು. ಏಪ್ರಿಲ್ 2025ರಲ್ಲಿ, ಜಾರಿ ನಿರ್ದೇಶನಾಲಯವು ಪ್ರಕರಣ ಮುಕ್ತಾಯಗೊಳಿಸಿ ವರದಿಯನ್ನು ಸಲ್ಲಿಸಿತು, ಅವರಿಗೆ ಕ್ಲೀನ್ ಚಿಟ್ ನೀಡಿತು.

ಒಲಿಂಪಿಕ್ ಕ್ರೀಡಾಕೂಟಗಳ ಕುರಿತು ಜಾಗೃತಿ ಮೂಡಿಸುವಲ್ಲಿ ಕಲ್ಮಾಡಿ ಮಾಡಿದ ಕೆಲಸಗಳಿಗಾಗಿ ಅವರನ್ನು 2008ರಲ್ಲಿ ಬೀಜಿಂಗ್‌ನಲ್ಲಿ ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳ ಸಂಘ ಪ್ರಶಸ್ತಿಯೊಂದಿಗೆ ಗೌರವಿಸಲಾಯಿತು. 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಶೂಟರ್ ಅಭಿನವ್ ಬಿಂದ್ರಾ, ದೇಶದ ಮೊದಲ ವೈಯಕ್ತಿಕ ಒಲಿಂಪಿಕ್ ಚಿನ್ನದ ಪದಕ ಗೆದ್ದಾಗ ಭಾರತವು ಐತಿಹಾಸಿಕ ಪ್ರಗತಿ ಸಾಧಿಸಿದ್ದು ಅವರ ಅಧಿಕಾರಾವಧಿಯ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.

ಸಮಾಚಾರ ಸಣ್ಣದಲ್ಲ

ಫೆಲೋಶಿಪ್ ಗಾಗಿ ಅರ್ಜಿ ಆಹ್ವಾನ

ಚಿಕ್ಕಬಳ್ಳಾಪುರ: ಕರ್ನಾಟಕ ಜಾನಪದ ಅಕಾಡೆಮಿಯು ಫೆಲೋಶಿಪ್ (ಅಧ್ಯಯನ ವೇತನ) ಲೇಖನಗಳಿಗೆ ಅರ್ಜಿಗಳನ್ನು ಕರೆದಿದ್ದು ಅಕಾಡೆಮಿಯ ವೆಬ್‌ಸೈಟ್‌ನಲ್ಲಿ ತಿಳಿಸಿರುವ ಶೀರ್ಷಿಕೆಗಳನ್ನು ಆಧರಿಸಿ ಕ್ಷೇತ್ರಕಾರ್ಯ ನಡೆಸಿ ಅಧ್ಯಯನ ಕೃತಿಗಳನ್ನು ಸಿದ್ಧಪಡಿಸಿಕೊಡಲು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ಕೋರಿದೆ. ನಿಗದಿಪಡಿಸಿರುವ ಒಂದು ಶೀರ್ಷಿಕೆಯನ್ನು ಆಯ್ಕೆ ಮಾಡಿ 5 ಪುಟಗಳ ಸಾರಲೇಖವನ್ನು ಬರೆದು ಜ.23 ರ ಒಳಗೆ ರಿಜಿಸ್ಟ್ರಾರ್,ಕರ್ನಾಟಕ ಜಾನಪದ ಅಕಾಡೆಮಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು 560002 ಅವರಿಗೆ ಕಳುಹಿಸಿಕೊಡಲು ಕೋರಿದೆ. ಫೆಲೋಶಿಪ್ಗಾಗಿ ಸಾಮಾನ್ಯ 1, ಪರಿಶಿಷ್ಟ ಜಾತಿ 5 ಮತ್ತು ಪರಿಶಿಷ್ಟ ಪಂಗಡ 9 ಮಂದಿಗಳು ಸೇರಿದಂತೆ 15 ಮಂದಿಗಾಗಿ ಅಭ್ಯರ್ಥಿಗಳಿಂದ ಫೆಲೋ ಶಿಪ್ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಇವರ ಸಂಯುಕ್ತಾಶ್ರಯದಲ್ಲಿ ಸಿರಿಧಾನ್ಯಗಳ ನಡಿಗೆ ಕಾರ್ಯಕ್ರಮವನ್ನು ಜ. 7 ರಂದು ಬೆಳಗ್ಗೆ 6 ಗಂಟೆಗೆ ನಗರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣ ದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ತುಮಕೂರು: ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ ಪಾಲುದಾರಿಕೆ ಸಂಸ್ಥೆ/ ಕಂಪನಿ/ ಜವಳಿ ಸಹಕಾರಿ ಸಂಘ/ ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತೀಸಣ್ಣ ಘಟಕಗಳನ್ನು ಸ್ಥಾಪಿಸಲು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಣ್ಣ ಮತ್ತು ಅತಿ ಸಣ್ಣ ಘಟಕಗಳನ್ನು ಸ್ಥಾಪಿಸಲು ಈಗಾಗಲೇ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದ ಹಾಗೂ ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಪಡೆದಿರುವ ಅರ್ಹ ಘಟಕಗಳು ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಜ. 31ರೊಳಗಾಗಿ ಸಲ್ಲಿಸಬೇಕು. ಯೋಜನೆ ಕುರಿತು ಪೂರ್ಣ ಮಾಹಿತಿಯನ್ನು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಾಗನಿಲಯ, 5ನೇ ಮುಖ್ಯರಸ್ತೆ, ಸಿದ್ದಗಂಗಾ ಬಡಾವಣೆ, ತುಮಕೂರು ಅಥವಾ ದೂ.ವಾ.ಸಂ. 0816-2275370ಯನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಪ್ರಾಂಶುಪಾಲರಿಗೆ ಅಭಿನಂದನೆ

ತುಮಕೂರು: ಸೇವೆಯಿಂದ ನಿವೃತ್ತಿಯಾದ ಪ್ರಾಂಶುಪಾಲ ಜಗದೀಶ್ ಪ್ರಸಾದ್ ಅವರನ್ನು ಅಭಿನಂದಿಸಲಾಯಿತು.



ಹಿರಿಯ ಪತ್ರಕರ್ತ ರಂಗನಾಥ ಕೆ. ಹೊನ್ನಮರಡಿ, ಸತೀಶ್ ಶಾಸ್ತ್ರಿ ಹಾಗೂ ಯದುವೀರ ಆರ್. ರಾಯರು ಇದ್ದರು. ಬೋಧಕ ವೃತ್ತಿಯೊಂದಿಗೆ ಜ್ಯೋತಿಷ್ಯ ಶಾಸ್ತ್ರವನ್ನು ಪ್ರವೃತ್ತಿಯಾಗಿ ಅಳವಡಿಸಿ ಕೊಂಡು ಪ್ರಖ್ಯಾತಿಗೊಂಡಿರುವ ಜಗದೀಶ್ ಪ್ರಸಾದ್ ಅವರು ನಿವೃತ್ತಿಯ ನಂತರ ಸಂಪೂರ್ಣವಾಗಿ ಜ್ಯೋತಿಷ್ಯ ಶಾಸ್ತ್ರದಲ್ಲಿ ತೊಡಗಿಕೊಂಡಿದ್ದಾರೆ.

6 4ಜಿ ಸ್ಯಾಚುರೇಶನ್ ಟವರ್ ಮಂಜೂರು

ತುಮಕೂರು: ನೆಟ್‌ವರ್ಕ್ ಸಮಸ್ಯೆ ಇರುವ ಜಿಲ್ಲೆಯ ಆರು ಕಡೆ ಭಾರತ ಸರಕಾರದ ಸಂಚಾರ ಇಲಾಖೆಯಿಂದ 4ಜಿ ಸ್ಯಾಚುರೇಶನ್ ಬಿಎಸ್‌ಎನ್‌ಎಲ್ ಟವರ್‌ಗಳು ಮಂಜೂರಾಗಿವೆ ಎಂದು ತುಮಕೂರು ಸಂಸದರು ಹಾಗೂ ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ಕುಣಿಗಲ್ ತಾಲೂಕಿನ ಕಿತ್ತನಮಂಗಲ, ತುರುವೇಕೆರೆ ತಾಲೂಕಿನ ಕನೂರು ಮತ್ತು ಕೋಳಾಲ, ಚಿಕ್ಕನಾಯಕನಹಳ್ಳಿ ತಾಲೂಕಿನ ಮದನಮಡು, ಪಂಕಜನಹಳ್ಳಿ, ಮಾಯಗೊಂಡನಹಳ್ಳಿಯಲ್ಲಿ ಸ್ಥಾಪನೆ ಮಾಡಲು 4ಜಿ ಸ್ಯಾಚುರೇಶನ್ ಬಿಎಸ್‌ಎಲ್‌ಎನ್ ಟವರ್ಗಳು ಮಂಜೂರಾಗಿವೆ ಎಂದು ಹೇಳಿದ್ದಾರೆ. ತಾವು ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಸಂದರ್ಭದಲ್ಲಿ ನೆಟ್‌ವರ್ಕ್ ಸಮಸ್ಯೆ ಇರುವ ಬಗ್ಗೆ ಈ ಭಾಗದ ಸಾರ್ವಜನಿಕರ ಅಹವಾಲುಗಳಿದ್ದವು. ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದೆ. ಸೂಕ್ತ ಪ್ರಸ್ತಾವನೆಯೊಂದಿಗೆ ಕೆಲ ದಿನಗಳ ಹಿಂದೆ ಕೇಂದ್ರದ ಸಂಚಾರ ಇಲಾಖೆ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಅವರನ್ನು ಭೇಟಿಯಾಗಿ ಶೀಘ್ರ ಅನುಮೋದನೆ ನಿಡುವಂತೆ ಮನವಿ ಮಾಡಲಾಗಿತ್ತು. ಮನವಿಗೆ ಸ್ಪಂದಿಸಿ ಸಚಿವರು ಅನುಮೋದನೆ ನೀಡಿದ್ದಾರೆ. 4ಜಿ ಸ್ಯಾಚುರೇಶನ್ ಬಿ.ಎಸ್.ಎಲ್.ಎನ್ ಟವರ್ಗಳು ಮಂಜೂರಾತಿಗೆ ಸಹಕರಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು, ಕೇಂದ್ರ ಸಚಿವ ಜ್ಯೋತಿರಾದಿತ್ಯಾ ಸಿಂಧ್ಯಾ ಅವರನ್ನು ಸಚಿವ ವಿ.ಸೋಮಣ್ಣ ಅಭಿನಂದಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಡಿ.ಕೆ.ಶಿವಕುಮಾರ } ಡಿಸಿಎಂ

ಜನರಿಗೆ ತಪ್ಪು ಮಾಹಿತಿ ಕೊಟ್ಟರೇ ತಮ್ಮ ಘನತೆ ಕಡಿಮೆಯಾಗ್ತದೆ. ಜನಾರ್ದನ ರೆಡ್ಡಿ ಕೈಯಲ್ಲಿ ಬುಲೆಟ್ ಹೇಗೆ ಬಂತು. ಯಾವ ಪಾರ್ಟ್ ಗೆ ಬಿತ್ತು ಅನ್ನೋ ಬಗ್ಗೆ ಮಾಹಜರು ಮಾಡಿಸಲಿ. ಹೊರಗೆ ಬಿದ್ದಿ ರೋದು ಬುಲೆಟ್ ತಂದು ತೋರಿಸಿದ್ದಾರೆ. ಜನಾರ್ದನ ರೆಡ್ಡಿ ತಪ್ಪು ಮಾಹಿತಿ ನೀಡೋದು ಅಗತ್ಯ ವಿಲ್ಲ. ಅವರು ಹೇಳಿದ್ದಕ್ಕೆ ಉತ್ತರ ಕೊಡೋದಿಲ್ಲ. ಅವರ ಊರಿನ ಗೌರವ ಉಳಿಸಿಕೊಳ್ಳಬೇಕು.

ಕೆಎಸ್.ಆರ್.ಟಿಸಿ ತುಮಕೂರು ವಿಭಾಗದ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಟ್ರಸ್ಟ್ ವಾರ್ಷಿಕೋತ್ಸವ ಸಮಾರಂಭ

ಸಾರಿಗೆ ನೌಕರರು ಪಿಂಚಣಿ ಪಡೆಯುವುದು ಸತ್ಯ

ತುಮಕೂರು: ನ್ಯಾಷನಲ್ ಆಂದೋಲನ ಸಮಿತಿ ಹೋರಾಟ ಫಲವಾಗಿ ಸಾರಿಗೆ ನೌಕರರು ಪಿಂಚಣಿ ಪಡೆಯುವುದು ಸತ್ಯ ಎಂದು ಎನ್.ಎ.ಸಿ.ಯ ರಾಷ್ಟ್ರೀಯ ಮುಖ್ಯ ಸಂಯೋಜಕ ರಮಾಕಾಂತ್ ನರಗುಂದ ತಿಳಿಸಿದರು.

ನಗರದ ಶ್ರೀಕೊಲ್ಲಾಪುರದಮ್ಮ ಸಮುದಾಯಭವನದಲ್ಲಿ ಕೆಎಸ್.ಆರ್.ಟಿಸಿ ತುಮಕೂರು ವಿಭಾಗದ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಟ್ರಸ್ಟ್ ಮೊದಲ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದೇಶದ ಅಭಿವೃದ್ಧಿಗಾಗಿ ವಿವಿಧ ನಿಗಮ, ಮಂಡಳಿಗಳಲ್ಲಿ ಕೆಲಸ ಮಾಡಿರುವ ನಾವುಗಳು, ಸಂಧ್ಯಾಕಾಲದಲ್ಲಿ ಗೌರವಯುತ ಜೀವನ ನಡೆಸುವ ಸಲುವಾಗಿ ಕನಿಷ್ಠ ಪಿಂಚಣಿ ಹಾಗೂ ಅರ್ಹರಿಗೆ ಹೆಚ್ಚುವರಿ ಪಿಂಚಣಿ ನೀಡುವುದು ನಮ್ಮನ್ನು ದುಡಿಸಿಕೊಂಡು ಹೊರ ಹಾಕಿರುವ ಸಂಸ್ಥೆಗಳು ಮತ್ತು ಸರಕಾರಗಳ ಕರ್ತವ್ಯವಾಗಿದೆ ಎಂದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಧನಿಯಕುಮಾರ್ ಮಾತನಾಡಿ, ಕೆ.ಎಸ್.ಆರ್.ಟಿ.ಸಿ.ಯ ಎಲ್ಲ ಹೋರಾಟಗಳಿಗೆ ಕನ್ನಡ ಪರ ಸಂಘಗಳ ಕೈಜೋಡಿಸಿವೆ.

ಕೆಎಸ್.ಆರ್.ಟಿಸಿ ತುಮಕೂರು ವಿಭಾಗದ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಟ್ರಸ್ಟ್ ಮೊದಲ ವಾರ್ಷಿಕೋತ್ಸವ ಸಮಾರಂಭದಲ್ಲಿ ಎನ್.ಎ.ಸಿ.ಯ ರಾಷ್ಟ್ರೀಯ ಮುಖ್ಯ ಸಂಯೋಜಕ ರಮಾಕಾಂತ್ ನರಗುಂದ ಅವರನ್ನು ಸನ್ಮಾನಿಸಲಾಯಿತು.

ಮಹಾರಾಷ್ಟ್ರದಲ್ಲಿ ಕರ್ನಾಟಕದ ಸಾರಿಗೆ ಬಸ್ ಸಿಬ್ಬಂದಿಯ ಮೇಲೆ ಹಲ್ಲೆಯಾದಾಗ, ಹಲ್ಲೆಗೊಳಗಾದ ಸಂತ್ರಸ್ಥರ ಪರವಾಗಿ ಕನ್ನಡ ಸೇನೆ ಹೋರಾಟ ನಡೆಸಿದೆ. ಮುಂದೆಯೂ ಕೆ.ಎಸ್.ಆರ್.ಟಿ.ಸಿ ನೌಕರರ ಪರವಾಗಿ ಎಲ್ಲ ರೀತಿಯ ಹೋರಾಟಕ್ಕೂ ಸಿದ್ಧ ಎಂದರು.

ಇಪಿಎಸ್-95 ಸಾರಿಗೆ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷರಾದ ಆರ್.ಸುಬ್ಬಣ್ಣ ಮಾತನಾಡಿ,ಕೆ.ಎಸ್.ಆರ್.ಟಿ.ಸಿ ಪಿಂಚಣಿಗೆ ಸಂಬಂಧಿಸಿದಂತೆ ಸರಕಾರದ ನೀತಿಗಳು ಬದಲಾಗಬೇಕೆಂಬ ಉದ್ದೇಶದಿಂದ ಹಲವಾರು ಹೋರಾಟಗಳನ್ನು ಮಾಡಿ ಒಂದು ಹಂತಕ್ಕೆ ಯಶಸ್ವಿಯಾಗಿದ್ದೇವೆ.ಸರಕಾರ ನಮ್ಮ ಬೇಡಿಕೆಗಳಿಗೆ ಮನ್ನಣೆ ನೀಡಿರುವುದಲ್ಲದೆ, ತಪ್ಪಿನ ಅರಿವಾಗಿದೆ.2025ರ ಅಕ್ಟೋಬರ್13 ರಂದು ಸರಕಾರವೇ ಲಿಖಿತ ರೂಪದಲ್ಲಿ ಬೇಡಿಕೆ ಈಡೇರಿಸುವ ಭರವಸೆ ನೀಡಿದೆ. ಇದಕ್ಕೆ ಕಾರಣ ದೆಹಲಿ ಚಲೋದಂತಹ ಕಾರ್ಯಕ್ರಮಗಳಲ್ಲಿ ನಾವು ಪ್ರದರ್ಶಿಸಿದ ಒಗ್ಗಟ್ಟು. ಹಾಗಾಗಿ ಮುಂಬರುವ ಹೋರಾಟಗಳಲ್ಲಿಯೂ ತಾವೆಲ್ಲರೂ ಸಂಘದೊಂದಿಗೆ ಕೈಜೋಡಿಸಬೇಕೆಂದರು.

> **ಹಲವಾರು ವರ್ಷಗಳ ನಮ್ಮ ಹೋರಾಟ ನಿರ್ಣಾಯಕ ಹಂತದಲ್ಲಿದ್ದು,2026ರ ಫೆಬ್ರವರಿ ಅಥವಾ ಮಾರ್ಚ ತಿಂಗಳಲ್ಲಿ ಕನಿಷ್ಠ ಮಾಸಿಕ 7500 ರು. ಪಿಂಚಣಿ ವ್ಯವಸ್ಥೆಯನ್ನು ಸರಕಾರ ಜಾರಿಗೊಳಿಸಲಿದೆ ಎಂಬ ದೃಢ ನಂಬಿಕೆ ನಮಗಿದೆ. ಆಗ ಇದೇ ವೇದಿಕೆಯಲ್ಲಿ ಸಂಭ್ರಮ ಆಚರಿಸೋಣ.**
>
> **– ರಮಾಕಾಂತ್ ನರಗುಂದ,** ಎನ್.ಎ.ಸಿ.ಯ ರಾಷ್ಟ್ರೀಯ ಮುಖ್ಯ ಸಂಯೋಜಕ

ನಿವೃತ್ತ ಕೆ.ಎಸ್ ಆರ್.ಟಿ.ಸಿ ಡಿಸಿ ಗಜೇಂದ್ರಕುಮಾರ್ ಮಾತನಾಡಿ,ನಿವೃತ್ತ ನೌಕರರ ಕಷ್ಟ, ಸುಖಃಗಳನ್ನು ಹಂಚಿಕೊಳ್ಳಲು ಒಂದು ವೇದಿಕೆ ನಿರ್ಮಿಸಿ, ಎಲ್ಲ ನೌಕರರ ಚಟುವಟಿಕೆ ಇರುವಂತೆ ಮಾಡಿರುವ ತುಮಕೂರು ಘಟಕ ಒಳ್ಳೆಯ ಕೆಲಸ ಮಾಡಿದೆ.ಕೆ.ಎಸ್ಆರ್.ಟಿ.ಸಿ ಯಂತಹ ನಿಗಮಗಳಲ್ಲಿ ಕೆಲಸ ಮಾಡುವ ನೌಕರರು ನೌಕರಿಯಲ್ಲಿ ಇದ್ದಾಗಲೇ ಯೋಚಿತ ಜೀವನ ನಡೆಸಬೇಕು.ಮಕ್ಕಳ ಶಿಕ್ಷಣ, ಮನೆ, ವಾಹನಗಳ ಸಾಲ ಹೀಗೆ ಎಲ್ಲವನ್ನು ನಿಭಾಯಿಸುವುದು ಸವಾಲಿನ ಕೆಲಸ. ಅಲ್ಲದೆ ನಿವೃತ್ತಿ ನಂತರ ಆರೋಗ್ಯಕರ ಜೀವನವೂ ಮುಖ್ಯ.ಹಾಗಾಗಿ ಸದಾ ಚಟುವಟಿಕೆಯಿಂದ ಇರುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೆ.ಎಸ್.ಆರ್.ಟಿ.ಸಿ ತುಮಕೂರು ವಿಭಾಗೀಯ ನಿಯಂತ್ರಣಾಧಿಕಾರಿ ಜಗದೀಶ್ ಮಾತನಾಡಿದರು.

ಟ್ರಸ್ಟ್ ಅಧ್ಯಕ್ಷರಾದ ಭೀಮಾನಾಯ್ಕ್ ಮಾತನಾಡಿದರು.ವೇದಿಕೆಯಲ್ಲಿ ಎನ್.ಎ.ಸಿಯ ರಾಜ್ಯ ಖಜಾಂಚಿ ಕುಲಕರ್ಣಿ,ತುಮಕೂರು ಜಿಲ್ಲಾ ಮುಖಂಡರಾದ ದೊಡ್ಡೇಗೌಡ, ಕೆ.ಎಸ್.ಆರ್.ಟಿ.ಸಿ ಡಿಟಿಓ ಮಂಜುನಾಥ್, ಡಿಎಂಇ ಅಶೀಫ್ವುಲ್ಲಾ ಷರೀಫ್ ,ಮುಖಂಡರಾದ ಕುಂಭಯ್ಯ ಹಾಗೂ ಕೆ.ಎಸ್.ಆರ್.ಟಿ.ಸಿ ತುಮಕೂರು ವಿಭಾಗ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ರಸ್ತೆ ಸುರಕ್ಷತಾ ಮಾಸದ ಬಗ್ಗೆ ಅರಿವು ಜ.30ರವರೆಗೆ

ಬಾಗೇಪಲ್ಲಿ: ಹೋಬಳಿ, ತಾಲೂಕು ಮಟ್ಟದಲ್ಲಿ ರಸ್ತೆ ಸುರಕ್ಷತಾ ಮಾಸ ಅರಿವು ಕಾರ್ಯಕ್ರಮವನ್ನು ಜ.30 ರವರೆಗೆ ತಾಲೂಕಿನಾದ್ಯಂತ ವ್ಯಾಪಕವಾಗಿ ಹಮ್ಮಿಕೊಳ್ಳಲಾಗುವುದು ಎಂದು ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹಾಗೂ ಕಿರಿಯ ಶ್ರೇಣಿ ನ್ಯಾಯಾಧೀಶ ಮಂಜುನಾಥ ಚಾರಿ ತಿಳಿಸಿದರು.

ತಾಲ್ಲೂಕು ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಆಡಳಿತ, ಜಿಲ್ಲಾ ಪಂಚಾಯಿತಿ, ಪೊಲೀಸ್ ಇಲಾಖೆ, ಪ್ರಾದೇಶಿಕ ಸಾರಿಗೆ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಪಟ್ಟಣದ ಜೆಎಂಎಫ್.ಸಿ ನ್ಯಾಯಾಲಯದ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ 'ರಸ್ತೆ ಸುರಕ್ಷತಾ ಮಾಸಾಚರಣೆ ಜಾಥಾ'ಕ್ಕೆ ಚಾಲನೆ ನೀಡಿದರು.

ವರ್ಷದಿಂದ ವರ್ಷಕ್ಕೆ ರಸ್ತೆ ಅಪಘಾತಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗುತ್ತಿದೆ. ಅಪಘಾತಗಳಲ್ಲಿನ ಸಾವಿನ ಸಂಖ್ಯೆಯೂ ಹೆಚ್ಚುತ್ತಿದೆ. ಈ ರೀತಿಯ ಸಾವುಗಳಲ್ಲಿ ಹೆಲ್ಮೆಟ್ ರಹಿತ ದ್ವಿಚಕ್ರ ವಾಹನ ಚಾಲನೆಯೂ ಪ್ರಮುಖ ಕಾರಣವಾಗಿದೆ. ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿದಲ್ಲಿ ಅಪಘಾತಗಳನ್ನು ತಪ್ಪಿಸಬಹುದು ಎಂದು ಹೇಳಿದರು.

ಕೆಲವು ವಾಹನ ಸವಾರರ ಅಜಾಗರೂಕತೆ ಮತ್ತು ಬೇಜವಾಬ್ದಾರಿ ಚಾಲನೆಯ ಕಾರಣದಿಂದ ಸಂಚಾರ ನಿಯಮಗಳನ್ನು ಪಾಲಿಸುತ್ತಿಲ್ಲ. ಯಾರದ್ದೋ ನಿರ್ಲಕ್ಷ್ಯ ಮತ್ತು ತಪ್ಪಿಗೆ ಮತ್ತಾರೋ ಬಲಿ ಆಗುವ ಹಾಗೂ ಅವರ ಕುಟುಂಬಗಳು ವಿನಾಕಾರಣ ಬೀದಿಗೆ ಬರುವಂತಾಗುತ್ತಿದೆ ಎಂದರು.

ಪಟ್ಟಣದ ಜೆ.ಎಂ.ಎಫ್. ಸಿ ನ್ಯಾಯಾಲಯದ ಮುಂಭಾಗದಲ್ಲಿ 'ರಸ್ತೆ ಸುರಕ್ಷತಾ ಮಾಸಾಚರಣೆ ಜಾಥಾ'ಕ್ಕೆ ಕಿರಿಯ ಶ್ರೇಣಿ ನ್ಯಾಯಾಧೀಶ ಮಂಜುನಾಥ ಚಾರಿ ಚಾಲನೆ ನೀಡಿದರು.

> **ದಿನೇ ದಿನೇ ಹೆಚ್ಚುತ್ತಿರುವ ರಸ್ತೆ ಅಪಘಾತಗಳಿಂದ ಸಾವಿನ ಸಂಖ್ಯೆಯಲ್ಲಿಯೂ ಗಣನೀಯ ಏರಿಕೆಯಾಗುತ್ತಿದೆ. ರಸ್ತೆ ಅಪಘಾತಗಳನ್ನು ತಡೆಯಲು ಸಂಚಾರ ನಿಯಮಗಳನ್ನು ಪಾಲಿಸುವ ಜತೆಗೆ ಜಾಗರೂಕತೆಯ ವಾಹನ ಚಾಲನೆ ಅತ್ಯಗತ್ಯ. ಅದರಲ್ಲೂ ದ್ವಿಚಕ್ರವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಾಲನೆ ಮಾಡಬೇಕು.**
>
> **– ಮಂಜುನಾಥ ಚಾರಿ,** ಕಿರಿಯ ಶ್ರೇಣಿ ನ್ಯಾಯಾಧೀಶ

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆ ಸಹಯೋಗದೊಂದಿಗೆ ಸಂಚಾರ ನಿಯಮ, ಅಪಘಾತಗಳ ಸಾವು ನೋವುಗಳು ಹಾಗೂ ಸುರಕ್ಷಿತ ಮತ್ತು ಜವಾಬ್ದಾರಿಯುತ ವಾಹನ ಚಾಲನೆ ಮಾಡುವ ಬಗ್ಗೆ ಒಂದು ತಿಂಗಳ ಕಾಲ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ವಕೀಲರು ಸಂಘದ ಅಧ್ಯಕ್ಷ ಮಂಜುನಾಥ ಆರಕ್ಷಕ ವೃತ್ತ ನಿರೀಕ್ಷಕ ಸುನಿಲ್ ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ.ಸತ್ಯನಾರಾಯಣ ರೆಡ್ಡಿ, ವಕೀಲರಾದ ಬಾಲು ನಾಯಕ್, ನಾಗಭೂಷಣ , ಸಿಬ್ಬಂದಿಗಳಾದ ಗಂಗುಲಪ್ಪ ಇದ್ದರು.

ದಿ.ಹಳೆಮನೆ ಶಿವನಂಜಪ್ಪ 'ಶಿವಗಣಾರಾಧನೆ' ಇಂದು

ಚಿಕ್ಕನಾಯಕನಹಳ್ಳಿ: ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ತುಮುಲ್) ಮಾಜಿ ಅಧ್ಯಕ್ಷರು ಹಾಗೂ ಸಹಕಾರಿ ರಂಗದ ಅಪ್ರತಿಮ ನಾಯಕ ದಿ.ಹಳೆಮನೆ ಶಿವನಂಜಪ್ಪ ಅವರ ''ಶಿವಗಣಾರಾಧನೆ'' ಕಾರ್ಯಕ್ರಮವು ಜ.7ರಂದು ತಾಲೂಕಿನ ಹಾಲುಗೊಣದ ಸ್ವಗೃಹದಲ್ಲಿ ನೆರವೇರಲಿದೆ.

ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಮೈಲಿಗಲ್ಲು ಸ್ಥಾಪಿಸಿದ್ದ ಶಿವನಂಜಪ್ಪ ಅವರು ತುಮುಲ್ ಸಂಸ್ಥೆಯಲ್ಲಿ ಸತತ 3 ಬಾರಿ ನಿರ್ದೇಶಕರಾಗಿ ಹಾಗೂ 2 ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಜಿಲ್ಲೆಯ ಹೈನುಗಾರರ ಆರ್ಥಿಕ ಪ್ರಗತಿಗೆ ಭದ್ರ ಬುನಾದಿ ಹಾಕಿಕೊಟ್ಟಿದ್ದರು. ರೈತ ಕುಟುಂಬದಿಂದ ಬಂದ ಇವರು, ಅಧಿಕಾರಾವಧಿಯಲ್ಲಿ ಪಾರದರ್ಶಕ ಆಡಳಿತದ ಮೂಲಕ ಸಂಸ್ಥೆಯನ್ನು ಲಾಭದಾಯಕ ಹಾದಿಗೆ ತಂದಿದ್ದರು.

ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರ ಆಪ್ತ ಒಡನಾಡಿಯಾಗಿದ್ದ ಶಿವನಂಜಪ್ಪ ಅವರು, ಸಹಕಾರಿ ತತ್ವದ ಅಡಿಯಲ್ಲಿ ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುತ್ತಿದ್ದರು.

ಜ.7ರಂದು ಚಿಕ್ಕನಾಯಕನಹಳ್ಳಿ ತಾಲೂಕಿನ ಹಾಲುಗೊಣ ಗ್ರಾಮದ ಸ್ವಗೃಹದಲ್ಲಿ ಬೆಳಗ್ಗೆಯಿಂದಲೇ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಶಿವಗಣಾರಾಧನೆ ಹಾಗೂ ಪುಣ್ಯಸ್ಮರಣೆ ನಡೆಯಲಿದ್ದು, ಸುರೇಶ್ ಹಳೆಮನೆ ಹಾಗೂ ಕುಟುಂಬಸ್ಥರು ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಅಭಿಮಾನಿಗಳು ಲಿಂಗೈಕ್ಯ ಚೇತನಕ್ಕೆ ಭಾವಪೂರ್ಣ ನಮನ ಸಲ್ಲಿಸಲಿದ್ದಾರೆ. ಸಜ್ಜನ ವ್ಯಕ್ತಿತ್ವದ ಹಳೆಮನೆ ಶಿವನಂಜಪ್ಪ ಅವರು ಹಾಕಿಕೊಟ್ಟ ದಾರಿ ಸಹಕಾರಿ ರಂಗಕ್ಕೆ ಸದಾ ಮಾದರಿ.

ಅವರ ಪವಿತ್ರ ಆತ್ಮಕ್ಕೆ ಶಿವಸಾಯುಜ್ಯ ಪ್ರಾಪ್ತಿಯಾಗಲಿ ಎಂದು ಜಿಲ್ಲೆಯ ಹೈನುಗಾರರು ಹಾಗೂ ಅಭಿಮಾನಿ ಬಳಗ ಪ್ರಾರ್ಥಿಸಿದೆ.

ಅಬಕಾರಿ ಎಲೆಕ್ಟ್ರಾನಿಕ್ ಹರಾಜಿಗೆ ತರಬೇತಿ ಶಿಬಿರ

ಕೋಲಾರ: ರಾಜ್ಯದಲ್ಲಿನ 477 ಚಿಲ್ಲರೆ ಮದ್ಯದಂಗಡಿ ಮತ್ತು 92 ಬಾರ್‌ಗಳ ಪಾರದರ್ಶಕ ಎಲೆಕ್ಟ್ರಾನಿಕ್ ಹರಾಜಿಗೆ ಇಲಾಖೆ ಸಿದ್ದವಾಗಿದ್ದು ಈ ಸಂಬಂಧ ಸಂಭಾವ್ಯ ಬಿಡ್ದಾರರಿಗೆ ಜ.7ರಂದು ಬೆಳಗ್ಗೆ 11 ಗಂಟೆಗೆ ತರಬೇತಿ ಆಯೋಜಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತರಾದ ಸಯ್ಯದ್ ಅಜ್ಮತ್ ಆಫ್ರೀನ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, 1992ರಿಂದಲೂ ಸಿಎಲ್2 ಮತ್ತು ಸಿಎಲ್9 ಲೈಸೆನ್ಸ್ ವಿತರಣೆಗೆ ಸರಕಾರ ನಿರ್ಬಂಧ ಹೇರಿದ್ದು ಇದೀಗ ನಾನಾ ಕಾರಣಗಳಿಂದಾಗಿ ಬಾಕಿ ಉಳಿದುಕೊಂಡಿದ್ದ 569 ಲೈಸೆನ್ಸ್‌ಗಳ ಹರಾಜಿಗೆ ನಿರ್ಧರಿಸಲಾಗಿರುವುದರಿಂದಾಗಿ ಆಸಕ್ತರಿಗೆ ಸಮಗ್ರ ಮಾಹಿತಿ ಹಾಗೂ ಬಿಡ್ನಲ್ಲಿ ಭಾಗವಹಿಸಲು ಅಗತ್ಯವಿರುವ ತಾಂತ್ರಿಕ ಮಾಹಿತಿಯನ್ನು ನೀಡಲು ತರಬೇತಿಯನ್ನು ಆಯೋಜಿಸಲಾಗಿದೆ ಎಂದರು.

ಸುದ್ದಿಗಾರರೊಂದಿಗೆ ಕೋಲಾರ ಅಬಕಾರಿ ಉಪ ಆಯುಕ್ತರಾದ ಸಯ್ಯದ್ ಅಜ್ಮತ್ ಆಫ್ರೀನ್ ಮಾತನಾಡಿದರು.

ಅಬಕಾರಿ ಇಲಾಖೆ ಅಪರ ಆಯುಕ್ತ ಬಸವರಾಜ ಸೋಮಣ್ಣ ಹಾಗೂ ಎಂಎಸ್ಟಿಸಿ ತಂಡದವರು ತರಬೇತಿಯಲ್ಲಿ ಗೊಂದಲಗಳನ್ನು ಪರಿಹರಿಸುವರು. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗೆ ಸೇರಿದಂತೆ ರಂಗಮಂದಿರದಲ್ಲಿ ತರಬೇತಿ ಆಯೋಜಿಸಲಾಗಿದೆ. ಬಿಡ್ನಲ್ಲಿ ಎಸ್ಸಿ, ಎಸ್ಟಿ ಮತ್ತು ಒಳ ಮೀಸಲು ಸೇರಿದಂತೆ ಶೇ.26 ಮೀಸಲು ನೀಡಲಾಗಿದ್ದು ಉಳಿದ ಸ್ಥಾನಗಳಿಗೆ ಸಾಮಾನ್ಯರು ಸ್ಪರ್ಧಿಸಬಹುದಾಗಿದೆ.

ನಂತರ ನೇರ ಹರಾಜು ಜ.13ರಿಂದ 20ರವರೆಗೆ ನಡೆಯಲಿದೆ. ದೇಶದ ಯಾವುದೇ ಭಾಗದವರು ಬಿಡ್ನಲ್ಲಿ ಭಾಗವಹಿಸಬಹುದಾಗಿದ್ದು, ಆದರೆ ಮೀಸಲಾತಿ ಕರ್ನಾಟಕದವರಿಗೆ ಮಾತ್ರವೇ ಸೀಮಿತ ಎಂದು ಸಯ್ಯದ್ ಅಜ್ಮತ್ ಆಫ್ರೀನ್ ತಿಳಿಸಿದರು.

ಅಬಕಾರಿ ಇನ್ಸಪೆಕ್ಟರ್‌ಸುಮರಮೇಶ್, ರಮಾಮಣಿ ಇದ್ದರು.

ತುಮಕೂರು ನಗರದ ಗಾಜಿನ ಮನೆ ಆವರಣದಲ್ಲಿ 17ನೇ ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳದ ಸಮಾರೋಪ ಸಮಾರಂಭದಲ್ಲಿ ಸಮಾಜ ಸೇವಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ದಿಯಾಚಾರಿಟಬಲ್ ಟ್ರಸ್ಟ್ ಇಂಡಿಯಾದ ಸಂಸ್ಥಾಪಕ ಡಾ.ಇಮ್ಯಾನ್ಯುಯಲ್ ಜಯಕುಮಾರ್‌ಅವರನ್ನು ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಶ್ವ ಒಕ್ಕಲಿಗರ ಪೀಠಾಧ್ಯಕ್ಷ ಡಾ.ಶ್ರೀ ನಿಶ್ಚಲಾನಂದ ನಾಥ ಸ್ವಾಮೀಜಿ, ಮಾಜಿ ಸಹಕಾರ ಸಚಿವ ಕೆ.ಎನ್.ರಾಜಣ್ಣ, ನಗರ ಶಾಸಕ ಜಿ.ಬಿ.ಜ್ಯೋತಿ ಗಣೇಶ್, ಸಮ್ಮೇಳನದ ಅಧ್ಯಕ್ಷ ಡಾ.ಕರೀಗೌಡ ಬೀಚನಹಳ್ಳಿ, ಕ.ಸಾ.ಪ. ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ ಹಾಜರಿದ್ದರು.

ರಸ್ತೆ ಅಗಲೀಕರಣಕ್ಕೆ ಆಗ್ರಹಿಸಿ ಪ್ರತಿಭಟನೆ

ಗೌರಿಬಿದನೂರು: ನಗರದಲ್ಲಿ ಹಾದುಹೋ ಗುವ ರಾಷ್ಟ್ರೀಯ ಹೆದ್ದಾರಿಯನ್ನು ಅಭಿವೃದ್ಧಿ ಹಾಗೂ ಆಗಲೀಕರಣವನ್ನು ರಾಷ್ಟ್ರೀಯ ಹೆದ್ದಾರಿಯ ಮಾನದಂಡಗಳನ್ನು ಅನುಸರಿಸಿ, ರಸ್ತೆಯನ್ನು ನೂರು ಅಡಿಗಳಷ್ಟು ಆಗಲೀಕರಣ ಮಾಡಬೇಕೆಂದು ಒತ್ತಾಯಿಸಿ ನಗರದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಮುಖಂಡರು ಪ್ರತಿಭಟನೆಯನ್ನು ನಡೆಸಿದರು.

ನಗರದ ನಾಗಯ್ಯರೆಡ್ಡಿ ವೃತ್ತದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಅಖಿಲ ಕರ್ನಾಟಕ ರೈತ ಸಂಘದ ಸಂಚಾಲಕ ರವಿಚಂದ್ರರೆಡ್ಡಿ ಮಾತನಾಡಿ, ನಗರದ ಮಧುಗಿರಿ ರಸ್ತೆಯ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಹಾಗೂ ಅಭಿವೃದ್ಧಿ ಕೆಲಸ ಪ್ರಗತಿಯಲ್ಲಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿ ಮಾನದಂಡಗಳನ್ನು ಹಾಗೂ ನಿಯಮಾವಳಿಗಳನ್ನು ಉಲ್ಲಂಘಿಸಿ ಕಟ್ಟಡ ಮಾಲೀಕರ ಆಮಿಷ ಹಾಗೂ ಒತ್ತಡಗಳಿಗೆ ಮಣಿದು ಎಂಬತ್ತು ಅಡಿಗಳ ರಸ್ತೆ ವಿಸ್ತೀರಣಕ್ಕೆ ಮುಂದಾಗಿರುವುದು ನಿಜಕ್ಕೂ ಆಘಾತಕಾರಿ ವಿಚಾರ ಎಂದರು.

ಪ್ರತಿಭಟನಾಕಾರರಿಂದ ಆಗ್ರಹ ಪತ್ರವನ್ನು ಸ್ವೀಕರಿಸಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಇಇ ರಾಜಾರೆಡ್ಡಿ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸತ್ಯನಾರಾಯಣ ಕರವೇ ಜೆಎಲ್ ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.

ನಿರಂತರ ಬರವಣಿಗೆಯಿಂದ ಕಾವ್ಯ ಸೃಷ್ಟಿ: ತಗಡೂರು

ಹಾಸನ: ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಕವಿತೆ, ಕಾದಂಬರಿಗಳ ವಿಮರ್ಶೆಯಾಗದೆ ಬರಹಗಾರರ ಬೆಳವಣಿಗೆಗೆ ಪ್ರೋತ್ಸಾಹ ಇಲ್ಲದಂತಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮನೆ-ಮನೆ ಕವಿಗೋಷ್ಠಿ ಎರಡು ದಶಕಗಳಿಂದ ಸಾಹಿತ್ಯ ಕೃಷಿ ಮಾಡಿಕೊಂಡು ಬಂದಿರುವುದು ಶ್ಲಾಘನೀಯ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿ ವತಿಯಿಂದ ಪತ್ರಕರ್ತರ ಭವನದಲ್ಲಿ ಭಾನುವಾರ ಸಂಜೆ ಹಮಿಕೊಂಡಿದ್ದ ಮನೆ-ಮನೆ ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿದರು. ಕವಿಗಳು ತಮ್ಮ ಬರವಣಿಗೆ ಮೂಲಕ ಇವತ್ತಿನ ತಾಕಲಾಟಗಳಿಗೆ ಮುಖಾಮುಖಿಯಾಗಬೇಕು.

ಎಷ್ಟು ದೊಡ್ಡದಾಗಿ ಬರೆಯುತ್ತೇವೆ ಎಂಬುದರ ಬದಲು ಎಷ್ಟು ಪರಿಣಾಮಕಾರಿಯಾಗಿ ಬರೆಯುತ್ತೇವೆ ಎನ್ನುವುದು ಮುಖ್ಯವಾಗುತ್ತದೆ.

ಇತ್ತೀಚೆಗೆ ವಾಟ್ಸಾಪ್ ವಿಶ್ವವಿದ್ಯಾಲಯ ಪ್ರವೃತ್ತಿ ಹೆಚ್ಚಿದೆ.

ಮನೆ-ಮನೆ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರಿಗೆ ಸನ್ಮಾನಿಸಲಾಯಿತು.

ಯಾವುದೇ ಒಂದು ಕವನವನ್ನು ವಿಮರ್ಶಿಸಿ ಮಾರ್ಗದರ್ಶನ ಮಾಡುವ ಕಾರ್ಯಾಗಾರಗಳು ಆಗಬೇಕು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಿದ್ದರು. ಮನೆ ಮನೆ ಕವಿಗೋಷ್ಠಿ ಸಂಚಾಲಕಿ ಸುಕನ್ಯಾ ಮುಕುಂದ ಮಾತನಾಡಿದರು. ಕಮಲಮ್ಮ ಅವರ ಕಾಲವೆಂಬ ಕನ್ನಡಿಯಲ್ಲಿ ಕೃತಿಯನ್ನು ಲೇಖಕ ಉಮೇಶ್ ಹೊಸಳ್ಳಿ ಪರಿಚಯ ಮಾಡಿಕೊಟ್ಟರು. ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಉದಯರವಿ, ಪತ್ರಕರ್ತರಾದ ಲೀಲಾವತಿ, ಚಲಂ, ಬಿ.ಆರ್.ಬೊಮ್ಮೇಗೌಡ ಹಾಗೂ ಮನೆ ಮನೆ ಕವಿಗೋಷ್ಠಿ ಸದಸ್ಯರು ಹಾಜರಿದ್ದರು.

ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳ ನಾಳೆ

ಚಿಕ್ಕಬಳ್ಳಾಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳ ಕಾರ್ಯಕ್ರಮವನ್ನು ಜ.8 ರಂದು ಬೆಳಗ್ಗೆ 10.30 ಗಂಟೆಗೆ ಗೌರಿಬಿದನೂರು ತಾಲ್ಲೂಕಿನ ಹೀರೇಬಿದನೂರು ನೇತಾಜಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸಚಿವ ಡಾ.ಎಂ.ಸಿ. ಸುಧಾಕರ್ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಉಪಸ್ಥಿತಿಯನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೌರಿಬಿದನೂರು ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಡಾ.ಕೆ.ಸುಧಾಕರ್,ಎಂ.ಮಲ್ಲೇಶ್ ಬಾಬು, ಶಾಸಕರಾದ ಎಸ್.ಎನ್. ಸುಬ್ಬಾರೆಡ್ಡಿ, ಬಿ.ಎನ್. ರವಿಕುಮಾರ್,ಪಿ.ಇ.ಪ್ರದೀಪ್ ಈಶ್ವರ್,ವಿಧಾನ ಪರಿಷತ್ತು ಶಾಸಕರಾದ ಚಿದಾನಂದ ಎಂ. ಗೌಡ, ಎಂ.ಎಲ್.ಅನಿಲ್ ಕುಮಾರ್ ,ಡಿ.ಟಿ.ಶ್ರೀನಿವಾಸ, ಡಾ.ಎಚ್.ನರಸಿಂಹಯ್ಯ ವಿಜ್ಞಾನ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎಚ್ ಶಿವಶಂಕರರೆಡ್ಡಿ, ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎನ್.ಸಂಪಂಗಿ, ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎನ್. ಕೇಶವರೆಡ್ಡಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಯಲುವಹಳ್ಳಿ ಎನ್. ರಮೇಶ್ ಭಾಗವಹಿಸಲಿದ್ದಾರೆ.

ಜಲ್ಲಿ ಕಾಣದ ರಸ್ತೆಗೆ ಬಂತು ಕಾಂಕ್ರೀಟಿಕರಣ ಭಾಗ್ಯ!

ಹದಗೆಟ್ಟಿದ್ದ ಎಸ್.ಗೊಲ್ಲಹಳ್ಳಿ ಕಡೆ ಹೋಗುವ ರಸ್ತೆ | ಮುಷ್ಟೂರಿನ ಕೆರೆ ಕಟ್ಟೆವರೆಗೆ ಸಿಮೆಂಟ್ ರಸ್ತೆ

ಚಿಕ್ಕಬಳ್ಳಾಪುರ: ಕಳೆದೆರಡು ದಶಕಗಳಿಂದ ನಗರದಿಂದ ಮುಷ್ಟೂರು-ಆದಿಯೋಗಿ ಗೇಟ್ ಮಾರ್ಗ ಎಸ್.ಗೊಲ್ಲಹಳ್ಳಿ ಕಡೆ ಹೋಗುವ ರಸ್ತೆ ಹದಗೆಟ್ಟಿದ್ದು, ಇದೀಗ ಸಿಮೆಂಟ್ ರಸ್ತೆಯಾಗಿ ಮಾರ್ಪಡುತ್ತಿರುವುದರಿಂದಾಗಿ ಈ ಭಾಗದ ಜನತೆಗೆ ತುಸು ನಿರಾಳವಾಗಿದೆ.

ಕಳೆದ ಎರಡು ದಶಕಗಳಿಂದಲೂ ಸಿಮೆಂಟ್ ರಸ್ತೆ ಇರಲಿ ಸರಿಯಾಗಿ ಜಲ್ಲಿ ಕಾಣದ ರಸ್ತೆಯಿಂದ ಈ ಭಾಗದಲ್ಲಿ ಹಾದು ಹೋಗುವ ಜನರು ವ್ಯವಸ್ಥೆಯ ವಿರುದ್ಧ ಹರಿಹಾಯ್ದಿದ್ದರು.

ಇದೀಗ ನಗರದ ವಿನಾಯಕ ಕಲ್ಯಾಣ ಮಂಟಪದಿಂದ ಮುಷ್ಟೂರು ಹಾಗೂ ಮುದ್ದೂರಿನ ಕೆರೆಕಟ್ಟೆವರೆವಿಗೆ ಸುಸಜ್ಜಿತವಾಗಿ ಸಿಮೆಂಟ್ ರಸ್ತೆ ನಿರ್ಮಾಣ ಆಗುತ್ತಿರುವುದರಿಂದಾಗಿ ಈ ಭಾಗದಿಂದ ಹಾದು ಹೋಗುತ್ತಿದ್ದ ಜನತೆಗೆ ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಗಿದೆ.

ಮುಖಂಡ ಶ್ರೀಧರ್ ಎಂಬುವವರು ತನ್ನ ವೈಯಕ್ತಿಕ ಹಿತಾಸಕ್ತಿಯಿಂದ ರಸ್ತೆಗೆ ಒಂದಷ್ಟು ಜೆಲ್ಲಿ ಹಾಗೂ ಮಣ್ಣು ಹಾಕಿಸಿ ರಸ್ತೆಯ ಮೂಲಕ ಜನ ಸ್ವಲ್ಪ ದಿನ ಆದರೂ ಸುಧಾರಿ ಸಿಕೊಂಡು ಹೋಗುವಂತೆ ಮಾಡಿದ್ದರು. ಅಲ್ಲದೆ ಸಾಕಷ್ಟು ಬಾರಿ ಗ್ರಾಮಸ್ಥರೊಂದಿಗೆ ಸೇರಿ ರಸ್ತೆ ತಡೆ ನಡೆಸಿ. ಶಾಸಕ ಪ್ರದೀಪ್ ಈಶ್ವರ್‌ಅವರ ಗಮನವನ್ನು ಸಹ ಸೆಳೆದು ಈ ರಸ್ತೆ ದುರಸ್ತಿ ಮಾಡಿಸಿಕೊಡಲು ಮನವಿಯನ್ನು ಸಲ್ಲಿಸಿದ್ದ ಮನವಿಯ ಮೇರೆಗೆ ಅವರು ತಮ್ಮ ಅನುದಾನದಲ್ಲಿ ರಸ್ತೆಯನ್ನು ಮಾಡಿಸಿ ಕೊಡುವ ಇಂಗಿತ ವ್ಯಕ್ತಪಡಿಸಿದರು.

ಅದರಂತೆ ಕಳೆದ 15 ದಿನಗಳಿಂದ ಈ ರಸ್ತೆ ವ್ಯವಸ್ಥಿತವಾಗಿ ಸಿಮೆಂಟ್ ರಸ್ತೆಯಾಗಿ ಮಾರ್ಪಡುತ್ತಿದೆ. ಇನ್ನು ಒಂದು ತಿಂಗಳ ವರವಿಗೆ ಸಿಮೆಂಟ್ ರಸ್ತೆಯ ಕಾಮಗಾರಿ ನಡೆಯುತ್ತಿದ್ದು, ಈ ರಸ್ತೆಯ ಮೂಲಕ ಆದಿಯೋಗಿ ಶಿವ, ವಡ್ರೆಪಾಳ್ಯ, ಆವಲಗುರ್ಕಿ ಎಸ್. ಗೊಲ್ಲಹಳ್ಳಿ ಮಾರ್ಗವಾಗಿ ಕೇತೇನಹಳ್ಳಿ ಗುಡಿಬಂಡೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆ ಇನ್ನು ಕೆಲವೇ ದಿನಗಳಲ್ಲಿ ಸುಗಮ ಹಾದಿ ಕಲಿಸಲಿದೆ. ಮುನ್ನೂರಿನ ಶ್ರೀಧರ್ಸಹ ಗುಣಮಟ್ಟದ ರಸ್ತೆ ಹಾಗೂನಿಗದಿತ ವೇಳೆಗೆ ಸಮರ್ಪಕವಾಗಿ ಮಾಡುತ್ತಿರುವುದರ ಬಗ್ಗೆ ಕಾಲ ಕಾಲಕ್ಕೆ ಶಾಸಕರಿಗೆ ಮಾಹಿತಿಯನ್ನು ನೀಡಿ ಸಾರ್ವಜನಿಕರ ಹಿತಾಸಕ್ತಿ ಬಯಸಿ ಕಾರ್ಯ ನಿರ್ವಹಿಸುತ್ತಿರುವುದು ಅವರ ಸಾಮಾಜಿಕ ಕಾಳಜಿ ಎತ್ತಿ ತೋರಿಸಿದೆ.

ಎಲ್ಲವೂ ಅಂದುಕೊಂಡಂತೆ ನಡೆದರೆ ಇನ್ನೊಂದು ತಿಂಗಳಲ್ಲಿ ಚಿಕ್ಕಬಳ್ಳಾಪುರ ನಗರದಿಂದ ಕೇತೇನಹಳ್ಳಿ ಕಡೆಗೆ ತೆರಳುವ ಈ ರಸ್ತೆಗೆ ಮೋಕ್ಷ ಪ್ರಾಪ್ತಿಯಾಗಿ ಲೋಕ ಕಲ್ಯಾಣಕ್ಕಾಗಿ ಸಮರ್ಪಣೆ ಗೊಳ್ಳಲಿದೆ. ಆಗ ಈ ರಸ್ತೆಯ ಮೂಲಕ ಆದಿಯೋಗಿ ಕಡೆ ಬೆಂಗಳೂರು ಸೇರಿದಂತೆ ದಿನಂಪ್ರತಿ ಇತರೆಡೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ಹಾದು ಹೋಗುವ ಜನ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಲಿದೆ.

> **ಯುವ ಮುಖಂಡನ ಸಾಮಾಜಿಕ ಕಳಕಳಿ**
>
> **ಸಂಪೂರ್ಣ ಹಾಳಾಗಿದ್ದ ಈ ರಸ್ತೆಯ ಯಾತನೆ ಕಂಡ ಮುಷ್ಟೂರು ಗ್ರಾಮದ ಯುವ ನಗರದ ವಿನಾಯಕ ಕಲ್ಯಾಣ ಮಂಟಪದಿಂದ ಮುಷ್ಟೂರು ಹಾಗೂ ಮುತ್ತೂರಿನ ಕೆರೆಕಟ್ಟೆವರೆವಿಗೆ ಸುಸಜ್ಜಿತವಾಗಿ ನಿರ್ಮಾಣ ಆಗುತ್ತಿರುವ ಸಿಮೆಂಟ್ ರಸ್ತೆ ಕಾಮಗಾರಿ.**

> **ಅಂಶಗಳು**
>
> - **ಕಳೆದ ಎರಡು ದಶಕಗಳಿಂದಲೂ ರಸ್ತೆ ಟಾರ್ ಕಾಣದೆ ಗುಣಿ ಬಿದ್ದ ರಸ್ತೆಗಳಲ್ಲಿ ಎದ್ದು ಬಿದ್ದು ಹೋಗಬೇಕಾದ ಅನಿವಾರ್ಯತೆ.**
> - **ಸಣ್ಣಮಳೆ ಬಂದರೂ ಜನ ಪರದಾಡುವಂತಹ ಪರಿಸ್ಥಿತಿ ನಿರ್ಮಾಣ.**
> - **ರಸ್ತೆಯಲ್ಲಿ ಗದ್ದೆ ಪೈರು ನಾಟಿ ಮಾಡಬೇಕು ಅಂತಹ ಪರಿಸ್ಥಿತಿ ನಿರ್ಮಾಣ.**
> - **ಜನ ಬೇಸತ್ತು ವ್ಯವಸ್ಥೆ ವಿರುದ್ಧ ಕಿಡಿಕಾರಿ ಸಾಕಷ್ಟು ಬಾರಿ ಯಾತನೆ ಅನುಭವಿಸಿದ ಜನತೆ.**

ಸಮಾಚಾರ ಸಣ್ಣದಲ್ಲ

ತೆರಿಗೆ ಪಾವತಿಯಲ್ಲಿ ಕೊಡಗಿಗೆ ರಶ್ಮಿಕಾ ನಂ.1

ಮಡಿಕೇರಿ: ಹೆಸರಾಂತ ಚಿತ್ರನಟಿ ರಶ್ಮಿಕಾ ಮಂದಣ್ಣ ಅತ್ಯಧಿಕ ತೆರಿಗೆ ಪಾವತಿ ಮೂಲಕ ಕೊಡಗಿನಲ್ಲಿ ತೆರಿಗೆ ಪಾವತಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಕಿರಿಕ್ ಪಾರ್ಟಿ ಸಿನಿಮಾ ಮೂಲಕ ಖ್ಯಾತಿ ಗಳಿಸಿದ

ಕೊಡಗಿನ ಯುವನಟಿ ರಶ್ಮಿಕಾ ಮಂದಣ್ಣ ಮೂಲತಃ ವಿರಾಜಪೇಟೆಯವರಾಗಿದ್ದು, ತನ್ನದೇ ಆದ ರಶ್ಮಿಕಾ ಮಂದಣ್ಣ ಫರ್ಮ್ ಮಾಲೀಕರಾಗಿದ್ದಾರೆ. ಈ ಸಂಸ್ಥೆಯ ಮೂಲಕ ಕೊಡಗಿನಲ್ಲಿ ತೆರಿಗೆ ಪಾವತಿದಾರರಾಗಿರುವ ರಶ್ಮಿಕಾ 2025-26 ನೇ ಆರ್ಥಿಕ ವರ್ಷದ ಮೂರು ತ್ರೈಮಾಸಿಕ ಅವಧಿಯಲ್ಲಿಯೂ ಅತ್ಯಧಿಕ ತೆರಿಗೆ ಪಾವತಿಸಿ ಕೊಡಗು ಜಿಲ್ಲೆಯಲ್ಲಿಯೇ ಅತ್ಯಧಿಕ ತೆರಿಗೆ ಪಾವತಿದಾರರಾಗಿದ್ದಾರೆ. 1 ವರ್ಷದ ತ್ರೈಮಾಸಿಕ ಅವಧಿಯಲ್ಲಿ ರಶ್ಮಿಕಾ 4.69 ಕೋಟಿ ರು. ಪಾವತಿ ಮಾಡಿದ್ದಾರೆ ಎನ್ನಲಾಗಿದೆ. ಕನ್ನಡ ಚಿತ್ರದ ಮೂಲಕ ಸಿನಿ ರಂಗ ಪ್ರವೇಶಿಸಿದ ರಶ್ಮಿಕಾ ನಂತರ ತೆಲುಗು ಚಿತ್ರಗಳಲ್ಲಿ ಖ್ಯಾತಿ ಪಡೆದು ಹಿಂದಿ ಚಿತ್ರರಂಗದಲ್ಲಿಯೂ ಪ್ರಸಿದ್ಧಿ ಗಳಿಸಿ ಭಾರತದಾದ್ಯಂತ ಹೆಸರುವಾಸಿಯಾಗಿದ್ದಾರೆ. ತೆಲುಗಿನ ವಿಜಯ್ ದೇವರಕೊಂಡ ಜತೆ ರಶ್ಮಿಕಾ ಈ ವರ್ಷದಲ್ಲಿ ವಿವಾಹ ನಡೆಯಲಿದೆ.

ಚಿಕ್ಕಮಗಳೂರು: ಯುವಕನಿಗೆ ಕೆಎಫ್‌ಡಿ ದೃಢ

ಚಿಕ್ಕಮಗಳೂರು: ಎನ್‌ಆರ್‌ಪುರ ತಾಲೂಕಿನ ಕಟ್ಟಿನಮನೆ ಗ್ರಾಮದ ಯುವಕನೊಬ್ಬನಿಗೆ ಕೆಎಫ್‌ಡಿ ಸೋಂಕು ದೃಢವಾಗಿದೆ. ಈ ಮೂಲಕ ಗ್ರಾಮದ ಇಬ್ಬರಲ್ಲಿ



ಸೋಂಕು ಪತ್ತೆಯಾದಂತಾಗಿದೆ. ಗ್ರಾಮದ 30 ವರ್ಷದ ಯುವಕನಲ್ಲಿ ಮಂಗನ ಕಾಯಿಲೆ ಕಾಣಿಸಿಕೊಂಡಿದೆ. ಆತನನ್ನು ಕೊಪ್ಪ ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮತ್ತೊಬ್ಬನಿಗೆ ಬೇರೆ ಅನಾರೋಗ್ಯದ ಕಾರಣ ಮಣಿಪಾಲ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕಟ್ಟಿಮನೆ ಗ್ರಾಮಕ್ಕೆ ಆರೋಗ್ಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಗ್ರಾಮಸ್ಥರಿಗೆ ಗ್ರಾಮದ ಶುಚಿತ್ವದ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆರೋಗ್ಯ ಸಮಸ್ಯೆ ಕಾಣಿಸಿಕೊಂಡರೆ ತಕ್ಷಣ ವೈದ್ಯರನ್ನು ಸಂಪರ್ಕಿಸುವಂತೆ ಸೂಚಿಸಿದ್ದಾರೆ. ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಬಿಲ್ಗೋಡಿ ಗ್ರಾಮದ 6 ಮಂದಿಗೆ ಮಂಗನ ಕಾಯಿಲೆ ಕಾಣಿಸಿಕೊಂಡಿತ್ತು.

ಅಪಘಾತ: ಬೈಕ್ ಸವಾರ ದುರ್ಮರಣ

ದಾವಣಗೆರೆ: ರಸ್ತೆ ಅಪಘಾತದಲ್ಲಿ ಬೈಕ್ ಸವಾರನೊಬ್ಬ ಮೃತಪಟ್ಟ ಘಟನೆ ದಾವಣಗೆರೆಯ ಶಿರಮಗೊಂಡನಹಳ್ಳಿ ರಸ್ತೆಯ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ನಡೆದಿದೆ. ಬೈಕ್ ಸವಾರ ಮಂಜುನಾಥ (27) ಮೃತ ಯುವಕ. ಗದಗ ಜಿಲ್ಲೆಯ ಶಿಂಗ್ಲಿ ಗ್ರಾಮದ ಯುವಕ ಬೈಕ್‌ನಲ್ಲಿ ಬೆಂಗಳೂರಿಗೆ ಬರುತ್ತಿದ್ದಾಗ ಹಿಂಬದಿಯಿಂದ ಅಪರಿಚಿತ ವಾಹನ ಡಿಕ್ಕಿ ಹೊಡೆದಿರುವ ಶಂಕೆ ವ್ಯಕ್ತವಾಗಿದೆ. ಡಿಕ್ಕಿ ಹೊಡೆದ ರಭಸಕ್ಕೆ ಮಂಜುನಾಥ ಸ್ಥಳದಲ್ಲೇ ಸಾವನ್ನಪ್ಪಿದ್ದು, ಸ್ಥಳಕ್ಕೆ ಸಂಚಾರಿ ಸಿಪಿಐ ಮಂಜುನಾಥ್ ಹಾಗೂ ದಕ್ಷಿಣ ಸಂಚಾರಿ ಪೊಲೀಸರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೊಲೆರೋ ಪಲ್ಟಿಯಾಗಿ ಮೂವರ ಸಾವು

ಚಿತ್ರದುರ್ಗ: ಬೊಲೆರೋ ವಾಹನವೊಂದು ಪಲ್ಟಿಯಾಗಿ ಮೂವರು ಸಾವನ್ನಪ್ಪಿರುವ ಘಟನೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಸಾಸಲು ಬಳಿ ಮಂಗಳವಾರ (ಜ.6) ನಡೆದಿದೆ. ಅಡಿಕೆ ಖೇಣಿ ಮುಗಿಸಿ ವಾಪಸ್ ಬರುವಾಗ ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಈ ಘಟನೆ ನಡೆದಿದೆ. ಬೊಲೆರೋ ಪಲ್ಟಿಯಾಗಿ ಗಿರಿರಾಜ್, ಕಿರಣ್, ಅರುಣ್ ಎನ್ನುವವರು ಮೃತಪಟ್ಟಿದ್ದಾರೆ. ಮೃತರು ಕಲ್ಲವ್ವನಾಗತಿ ಹಳ್ಳಿ ಗ್ರಾಮದ ಮೂಲದವರು ಎಂದು ತಿಳಿದು ಬಂದಿದೆ. ಮಾಯಕೊಂಡ ಬಳಿ ಅಡಿಕೆ ಕೆಲಸಕ್ಕೆ ಹೋಗಿ ವಾಪಾಸ್ ಬರುತ್ತಿದ್ದರು. ಈ ವೇಳೆ ವಾಹನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಬುಲೆರೋ ವಾಹನ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದಲೇ ಘಟನೆ ನಡೆದಿದೆ ಎನ್ನಲಾಗಿದೆ. ಐದು ಮಂದಿ ಗಂಭೀರ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸ್ಥಳಕ್ಕೆ ಚಿಕ್ಕಜಾಜೂರು ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.

ದಿನ ವಿಶೇಷ

7 ಜನವರಿ 2026 ಬುಧವಾರ
ಸೂರ್ಯೋದಯ: 06-44
ಸೂರ್ಯಾಸ್ತ: 06-08
ರಾಹುಕಾಲ: ಮಧ್ಯಾಹ್ನ 12:25-1:50
ತಿಥಿ: ಚತುರ್ಥಿ
ನಕ್ಷತ್ರ: ಮಘಾ
ಸಂವತ್ಸರ: ಶ್ರೀ ವಿಶ್ವಾವಸು
ಆಯನ: ಉತ್ತರಾಯಣ
ಋತು: ಶಿಶಿರ
ಮಾಸ: ಪುಷ್ಯ
• ತ್ಯಾಗರಾಜರ ಆರಾಧನೆ

ವಿಶ್ವವಾಣಿ ಕ್ಲಬ್ ಹೌಸ್
07.01.2026
ಸಂಜೆ: 06.55 ರಿಂದ 08.05 ರವರೆಗೆ



ಬುಧವಾರದ ಅತಿಥಿ
ಡಾ.ಸಿ.ಆರ್. ಚಂದ್ರಶೇಖರ
ವಿಷಯ
ಮಿದುಳಿಗೆ ಪೆಟ್ಟು - ಪರಿಣಾಮಗಳು - ಪರಿಹಾರ
vishwavani.news

ಬಳ್ಳಾರಿ ಬ್ಯಾನರ್ ಗಲಾಟೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತನ ಮನೆಗೆ ಡಿಸಿಎಂ ಡಿಕೆಶಿ ಭೇಟಿ

ಪೊಲೀಸ್ ತನಿಖೆ ಚುರುಕು: ಡಿಕೆಶಿ ಸಾಂತ್ವನ

ಬಳ್ಳಾರಿ: ನಗರದಲ್ಲಿ ಬ್ಯಾನರ್ ಕಟ್ಟುವ ವಿಚಾರದಲ್ಲಿ ನಡೆದ ಗಲಭೆಯಲ್ಲಿ ಗುಂಡೇಟಿಗೆ ಬಲಿಯಾದ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಕುಟುಂಬವನ್ನು ಡಿಸಿಎಂ ಡಿಕೆ ಶಿವಕುಮಾರ್ ಮಂಗಳವಾರ ಭೇಟಿ ಮಾಡಿ ಸಾಂತ್ವನ ಹೇಳಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಘಟನೆ ಆಗಬಾರದಾಗಿತ್ತು. ಮೃತ ವ್ಯಕ್ತಿಯ ಕುಟುಂಬದ ದುಃಖದಲ್ಲಿ ನಾನು ಭಾಗಿಯಾಗುವೆ. ಕುಟುಂಬ ಜತೆಗೆ ಪಕ್ಷ ಇದೆ ಎಂದು ತಿಳಿಸಿರುವೆ. ಮೃತ ವ್ಯಕ್ತಿಯ ಕುಟುಂಬ ಸರಕಾರಿ ಉದ್ಯೋಗಕ್ಕಾಗಿ ಬೇಡಿಕೆ ಇಟ್ಟಿದ್ದು, ಈ ಬಗ್ಗೆ ವಿಚಾರ ಮಾಡಲಾಗುತ್ತದೆ. ಪ್ರೊಸೀಜರ್ ನೋಡಿಕೊಂಡು ಕಾನೂನು ಚೌಕಟ್ಟಿನ ಅಡಿ ನೌಕರಿ ಕೊಡುವ ಪ್ರಯತ್ನ ಮಾಡುವೆ ಎಂದು ತಿಳಿಸಿದರು.

ನನ್ನ ತಂಡದಿಂದ ಸತ್ಯಶೋಧನೆ ಮಾಡಿಸಿದ್ದೇನೆ. ಶಾಸಕರಿಂದಲೂ ಮಾಹಿತಿ ಪಡೆದಿರುವೆ. ಸತ್ಯ ಮುಚ್ಚಿಹಾಕಲು ಬಿಡುವುದಿಲ್ಲ.

ವಾಲ್ಮೀಕಿ ಪುತ್ಥಳಿ ಅನಾವರಣ ಪ್ರಸ್ತಾವನೆ ಸಲ್ಲಿಸಿದ್ದಾರೆ. ಪ್ರೊಸಿಜರ್ ಮಾಡಿ ಅನುಮತಿ ಕೊಡುವ ಹಂತದಲ್ಲಿ ಇತ್ತು. ಅನುಮತಿ ಇರಲಿಲ್ಲ. ಇನ್ನೂ ಆಮಂತ್ರಣ ಪತ್ರಿಕೆ ಮುದ್ರಣವಾಗಿರಲಿಲ್ಲ. ಪಕ್ಷಾತೀತವಾಗಿ ಗೌರವದ ಪ್ರತಿಮೆಯಾಗಬೇಕು ಎಂದರು. ಸಾರ್ವಜನಿಕ ಸ್ಥಳದಲ್ಲಿ ಬ್ಯಾನರ್ ಕಟ್ಟುವುದು ಸಹಜ. ಜನಾರ್ದನ ರೆಡ್ಡಿ ಶ್ರೀರಾಮುಲು ಸಮಾಧಾನ ಇಲ್ಲವಾಗಿದೆ ಎಂದರೆ ದೂರು ಕೊಡಬಹುದಿತ್ತು. ಬ್ಯಾನರದದ ತೆಗೆಯಿರಿ ಎಂದರೆ ತೆಗೆದು ಹಾಕ್ತಿದ್ದರು. ಅವರ ಮುಖಂಡತ್ವದಲ್ಲಿ ಹರಿದು ಹಾಕಿದ್ದಾರೆ. ಇದನ್ನು ನೀವೇ ತೀರ್ಮಾನ ಮಾಡಬೇಕು. ಯಾರನ್ನು ದೂಷಿಸಲು ಇಲ್ಲಿಗೆ ಬಂದಿಲ್ಲ. ಕಾನೂನು ತನ್ನ ಕೆಲಸ ಮಾಡುತ್ತದೆ. ಸರಿ ತಪ್ಪು ಯಾವುದು ಹೇಳಲ್ಲ. ಗನ್ ಮ್ಯಾನ್ ಸೇರಿದಂತೆ ಎಲ್ಲರನ್ನು ಬಂಧಿಸಿದ್ದಾರೆ. ಜನಾರ್ದನ ರೆಡ್ಡಿ ಸೇರಿದಂತೆ ಎಲ್ಲರಿಗೂ ಗನ್ ಮ್ಯಾನ್‌ಗಳ ಭದ್ರತೆ ಕೊಟ್ಟಿದ್ದಾರೆ. ಗನ್ ಮ್ಯಾನ್‌ಗಳು ದೂರು ಕೊಡಬಹುದಾಗಿದೆ. ಶಾಸಕರನ್ನು ಹೊಡೆಯೋಕೆ ಬಂದಿದ್ದರು ಎಂದು ದೂರು ಕೊಡಬಹುದು ಎಂದರು.

ಜನಾರ್ದನರೆಡ್ಡಿ ಅವರಿಂದ ಪೊಲೀಸರು ಗಲಾಟೆ ಕುರಿತು ಮಾಹಿತಿ ಪಡೆದುಕೊಂಡರು.

ಬಳ್ಳಾರಿ ಗಲಭೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಮನೆಗೆ ಡಿಸಿಎಂ ಡಿಕೆ ಶಿವಕುಮಾರ್ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಸಚಿವ ಜಮೀರ್ ಅಹಮದ್ ಖಾನ್, ಮಾಜಿ ಸಚಿವ ನಾಗೇಂದ್ರ ಇದ್ದರು.

ಜನಾರ್ದನ ರೆಡ್ಡಿ ಮನೆ ಮುಂದೆ ಮಹಜರು

ಬಳ್ಳಾರಿ ನಗರದಲ್ಲಿ ಇತ್ತೀಚೆಗೆ ನಡೆದ ಬ್ಯಾನರ್ ವಿಚಾರಕ್ಕೆ ನಡೆದ ಘರ್ಷಣೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಗುಂಡೇಟಿಗೆ ಮೃತಪಟ್ಟ ಹಿನ್ನೆಲೆಯಲ್ಲಿ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಶಾಸಕ ಜನಾರ್ದನರೆಡ್ಡಿ ನಿವಾಸದ ಮುಂಭಾಗದಲ್ಲಿ ಸ್ಥಳ ಮಹಜರು ನಡೆಸಿದ ಪೊಲೀಸರು ಸಾಕ್ಷ್ಯ ಸಂಗ್ರಹಿಸಿದ್ದಾರೆ. ಗಲಾಟೆ ನಡೆದ ಸಂದರ್ಭದ ಸನ್ನಿವೇಶ, ಬ್ಯಾನರ್ ಅಳವಡಿಕೆ ಹಿನ್ನೆಲೆ, ಘರ್ಷಣೆ ನಡೆದ ಕ್ರಮ ಸೇರಿದಂತೆ ಹಲವು ಅಂಶಗಳ ಕುರಿತು ತನಿಖಾಧಿಕಾರಿಗಳು ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದ್ದಾರೆ.

ಪ್ರಕರಣ ಮುಚ್ಚಿಹಾಕುವ ಅನುಮಾನ: ರಾಮುಲು

ಬಳ್ಳಾರಿ ಗಲಭೆ ವಿಚಾರದ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಶ್ರೀರಾಮುಲು, ಮೃತರ ಮನೆಗೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಡಿಕೆ ಭೇಟಿಯಾಗಿ ಸಾಂತ್ವನ ಹೇಳಿದ್ದಾರೆ. ಇವರ ಆಗಮನಕ್ಕೂ ಮುನ್ನ ನಿಮ್ಮ ಸರಕಾರದ ವತಿಯಿಂದ ಸತ್ಯ ಶೋಧ ಕಮಿಟಿ ಬಂದು ಪರಿಶೀಲನೆ ನಡೆಸಿತ್ತು. ಈಗ ನೀವು ಬಂದಿದ್ದೀರಿ. ಹಾಗಾದರೆ, ಈ ಪ್ರಕರಣವನ್ನು ಎಸ್‌ಐಟಿಗೆ ಕೊಡ್ತೀರಾ? ಪ್ರಕರಣದ ಮೂಲ ಬುಡವನ್ನು ಹುಡುಕುವ ಕೆಲಸವಾಗುತ್ತಿಲ್ಲ. ಇದಕ್ಕೆಲ್ಲ ಕಾರಣ ಭರತ್ ರೆಡ್ಡಿ. ಮೊನ್ನೆ ಸಿಎಂ ಏರ್ಪೋರ್ಟ್‌ಗೆ ಬಂದಾಗ ಭರತ್ ರೆಡ್ಡಿ ಹತ್ತಿರ ಮಾತನಾಡಿದ್ದಾರೆ. ಭರತ್ ರೆಡ್ಡಿ ಪ್ರಕರಣದ ಎ1 ಜತೆಗೆ ಮಾತನಾಡುತ್ತಾರೆ. ಡಿ.ಕೆ.ಶಿವಕುಮಾರ್ ಈಗ ಬಂದು ಭರತ್ ರೆಡ್ಡಿ ಜತೆ ಸುದ್ದಿಗೋಷ್ಠಿ ಮಾಡಬಹುದು. ಈ ಮೂಲಕ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ಕೂಡ ನಡೆಸಬಹುದು ಎಂಬ ಅನುಮಾನ ಮೂಡುತ್ತಿದೆ ಎಂದು ಕಿಡಿಕಾರಿದರು.

ಕೊಲ್ಲಲು ಸಂಚು ನಡೆದಿದೆ ಎಂದು ಜನಾರ್ದನ ರೆಡ್ಡಿ ದೂರು ಕೊಟ್ಟಿದ್ದಾರೆ. ಝಡ್ ಕೆಟಗೇರಿ ಭದ್ರತೆ ಕೊಡುವುದು ಕೇಂದ್ರಕ್ಕೆ ಬಿಟ್ಟ ವಿಚಾರ. ಕೇಂದ್ರ ಭದ್ರತೆ ಕೊಟ್ಟರೆ ಇವರು ಪಡೆಯಲಿ. ಘಟನೆ ನಡೆಯಬಾರದಾಗಿತ್ತು. ನಮ್ಮವರಿಗೆ ಬುದ್ಧಿವಾದ ಹೇಳಿದ್ದೇನೆ. ಬಿಜೆಪಿಯವರು ದೊಡ್ಡವರಾಗಿದ್ದಾರೆ. ಕುಮಾರಸ್ವಾಮಿ ದೊಡ್ಡವರು ಯಾವ ರೀತಿ ರಿಸರ್ಚ್ ಮಾಡಿದ್ದಾರೋ ಗೊತ್ತಿಲ್ಲ.

-ಡಿ.ಕೆ.ಶಿವಕುಮಾರ್, ಡಿಸಿಎಂ

5 ರಿಂದ 6 ಲಕ್ಷ ಭಕ್ತರಿಗೆ ದಾಸೋಹದಲ್ಲಿ ಬಜ್ಜಿ ವಿತರಣೆ

ಗವಿಮಠದ ಜಾತ್ರೆಯಲ್ಲಿ ಮಿರ್ಚಿ ಘಮ

ಕೊಪ್ಪಳ: ದಕ್ಷಿಣ ಭಾರತದ ಕುಂಭಮೇಳ ಎಂದೇ ಹೆಸರಾದ ಕೊಪ್ಪಳದ ಅಭಿನವ ಗವಿಮಠದ ಜಾತ್ರೆ ವಿಜೃಂಭಣೆಯಿಂದ ಜರುಗುತ್ತಿದ್ದು, ಮಂಗಳವಾರ ದಾಸೋಹದಲ್ಲಿ ಭಕ್ತರಿಗೆ ಬಜ್ಜಿ ವಿತರಿಸಲಾಯಿತು. ಸರಿಸುಮಾರು 5 ರಿಂದ 6 ಲಕ್ಷ ಜನರಿಗೆ ಸಾಕಗುಷ್ಟು ಬಜ್ಜಿ ತಯಾರು ಮಾಡಲಾಗಿತ್ತು.

ನಿರಂತರವಾಗಿ 20 ದಿನಗಳ ಕಾಲ ದಾಸೋಹ ನಡೆಯತ್ತದೆ. ಲಕ್ಷಾಂತರ ಭಕ್ತರು ಗವಿ ಸಿದ್ದನ ಆಶೀರ್ವಾದ ಪಡೆದು, ದಾಸೋಹದಲ್ಲಿ ಪ್ರಸಾದ ಸ್ವೀಕಾರ ಮಾಡುತ್ತಾರೆ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಅಜ್ಜನ ಸೇವೆಗೆ 25ಕ್ಕೂ ಹೆಚ್ಚು ಗ್ರಾಮದಿಂದ ಬಂದು ಮಿರ್ಚಿ ಬಜ್ಜಿ ಮಾಡಿದ್ದಾರೆ. ಈ ಬಾರಿ ಮಿರ್ಚಿಗೆ ಸುಮಾರು 25 ಕ್ವಿಂಟಾಲ್ ಕಡಲೆ ಹಿಟ್ಟು, 22 ಕ್ವಿಂಟಾಲ್ ಹಸಿ ಮೆಣಸಿನಕಾಯಿ, 25 ಕೆ.ಜಿ ಅಜವಾನ, 25 ಕೆ.ಜಿ ಸೋಡಾಪುಡಿ, 75 ಕೆ.ಜಿ ಉಪ್ಪು, 60 ಸಿಲಿಂಡರ್, 12 ಬ್ಯಾರೆಲ್ ಒಳ್ಳೆಣ್ಣೆ ಬಳಕೆ ಮಾಡಿಕೊಂಡು ಮಿರ್ಚಿ ಬಜ್ಜಿ ತಯಾರಿಸಿದ್ದಾರೆ.

ಈ ಬಾರಿ ಜಾತ್ರೆ ಹಿನ್ನೆಲೆ ಐದು ದಿನ ಮೊದಲೇ ದಾಸೋಹ ಆರಂಭ ಮಾಡಲಾಗಿದೆ. ಜ.1ರಂದು ಅಧಿಕೃತವಾಗಿ ದಾಸೋಹಕ್ಕೆ ಚಾಲನೆ ನೀಡಲಾಗಿದ್ದು, ಮಂಗಳವಾರಕ್ಕೆ ದಾಸೋಹ ಆರಂಭವಾಗಿ ಆರು ದಿನ ಕಳೆಯಿತು. ಕಳೆದ 11 ವರ್ಷದ ಹಿಂದೆ ಸಣ್ಣದಾಗಿ ಆರಂಭವಾದ ಮಿರ್ಚಿ ದಾಸೋಹ, ಇಂದು ಲಕ್ಷ ಲಕ್ಷ ಮಂದಿಗೆ ತಲುಪುತ್ತಿದೆ. ಯಾರಿಂದಲೂ ಹಣ ಪಡೆಯದೇ ಸಮಾನ ಮನಸ್ಕರ ತಂಡದ ಸದಸ್ಯರು ಸ್ವಂತ ಹಣ ಹಾಕಿ, ಮಿರ್ಚಿಯನ್ನ ಉಣ ಬಡಿಸುತ್ತಿದ್ದಾರೆ. ನಿತ್ಯ ದಾಸೋಹಕ್ಕೆ ಲಕ್ಷ ಲಕ್ಷ ಮಂದಿ ಬರುತ್ತಿದ್ದಾರೆ.

ದಾಖಲೆ ಇಲ್ಲದೇ ಕೇಂದ್ರ ಸಚಿವರ ಆರೋಪ ಸರಿಯಲ್ಲ: ಪರಮೇಶ್ವರ್

2ನೇ ಬಾರಿಗೆ ಮರಣೋತ್ತರ ಪರೀಕ್ಷೆಯಾಗಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಳ್ಳಾರಿ ಗಲಭೆಯಲ್ಲಿ ಮೃತಪಟ್ಟ ರಾಜಶೇಖರ್‌ಗೆ ಎರಡನೇ ಬಾರಿಗೆ ಪೋಸ್ಟ್ ಮಾರ್ಟಂ ಆಗಿರುವ ಸುದ್ದಿಗಳು ಹರಿದಾಟುತ್ತಿರುವ ನಡುವೆಯೇ, ಗೃಹ ಸಚಿವ ಡಾ.ಜಿ. ಪರಮೇಶ್ವರ ಈ ರೀತಿಯ ಯಾವುದೇ ಘಟನೆ ನಡೆದಿಲ್ಲ ಎನ್ನುವ ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ಸೋಮವಾರ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜಶೇಖರ್ ಮೃತದೇಹವನ್ನು ಎರಡನೇ ಬಾರಿಗೆ ಮರಣೋತ್ತೋರ ಪರೀಕ್ಷೆ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಇದಕ್ಕೆ ಪೂರಕವಾಗಿ ಮರಣೋತ್ತರ ಪರೀಕ್ಷೆ ನಡೆದಿರುವ ಹಲವು ಚರ್ಚೆಗಳು ನಡೆದಿದ್ದವು. ಆದರೆ ಈಗ ಎರಡನೇ ಬಾರಿಗೆ ಮರಣೋತ್ತರ ಪರೀಕ್ಷೆಯೇ ನಡೆದಿಲ್ಲ. ಯಾವುದನ್ನೂ ತಿಳಿಯದೇ ಮಾತನಾಡಬಾರದು ಎಂದು ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಯಾವುದನ್ನೇ ಆಗಲಿ ತಿಳಿದು ಮಾತನಾಡಬೇಕು. ತಿಳಿಯದೇ ಮಾತನಾಡಿದರೆ ಇಂಪ್ಯಾಕ್ಟ್ ಹೆಚ್ಚುತ್ತದೆ. ಸಮಾಜದಲ್ಲಿ ಏನಾಗುತ್ತೆ ಅರಿತು ಮಾತನಾಡಬೇಕು. ಈಗಾಗಲೇ ವೈದ್ಯರು ಅದರ ಬಗ್ಗೆ ಹೇಳಿದ್ದಾರೆ. ಎರಡು ಬಾರಿ ಪೋಸ್ಟ್ ಮಾರ್ಟಂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇದನ್ನು ನಾಯಕರು ನೋಡಿದ್ದಾರಾ?. ನಾನು ವೈದ್ಯರ ಮಾತನ್ನು ಒಪ್ಪುತ್ತೇನೆ. ನಾನು ಗೃಹ ಸಚಿವನಾಗಿ ಹೇಳುತ್ತೇನೆ, ಯಾವ ಸಂದರ್ಭದಲ್ಲಿ ಏನು ಮಾಡಬೇಕು? ಯಾವ ತೀರ್ಮಾನ ಮಾಡಬೇಕು ಗೊತ್ತಿದೆ. 38 ವರ್ಷದಿಂದ ರಾಜಕೀಯದಲ್ಲಿದ್ದೇನೆ. ನನಗೂ ಅಪಾರ ಅನುಭವವಿದೆ. ಕಾನೂನು ಸುವ್ಯವಸ್ಥೆ ಕಾಪಾಡೋದಕ್ಕೆ ನಾನು ಎಲ್ಲ ರೀತಿಯ ತೀರ್ಮಾನ ಮಾಡಿದ್ದೇನೆ. ಕೇವಲ ಒಂದು ಘಟನೆ ಆಧಾರದ ಮೇಲೆ ಸರ್ಟಿಫಿಕೇಟ್ ಕೊಡೋದಲ್ಲ ಎಂದು ಕಿಡಿಕಾರಿದರು.

ನಿಮ್ಮ ಮಾಯಾಜಾಲ ಬಯಲಾಗುತ್ತದೆ: ಪರಂಗೆ ಎಚ್‌ಡಿಕೆ ತಿರುಗೇಟು

ಬಿಮ್ಸ್ ಅಧೀಕ್ಷಕರ ಬ್ರೇನ್ ಮ್ಯಾಪಿಂಗ್ ಆಗಲಿ

ಬೆಂಗಳೂರು: ಪರಮೇಶ್ವರ ಹೇಳಿಕೆಗೆ ತಿರುಗೇಟು ನೀಡಿರುವ ಕುಮಾರಸ್ವಾಮಿ ಅವರು, ಬಳ್ಳಾರಿಯಲ್ಲಿ ಕಗ್ಗೊಲೆಯಾದ ನಿಮ್ಮದೇ ಪಕ್ಷದ ನತದೃಷ್ಟ ಕಾರ್ಯಕರ್ತನ ಡಬಲ್ ಪೋಸ್ಟ್ ಮಾರ್ಟಂ ಕಥಾನಕದ ಬಗ್ಗೆ ನಾನು ಹೇಳಿದ್ದು ಸತ್ಯ. ಸತ್ತ ಶರೀರವನ್ನೂ ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಳ್ಳುವ ನಿಮ್ಮ ಕೀಳು ನಡವಳಿಕೆ ಕುರಿತು ನಾನು ಹೇಳಿದ್ದು ಅಕ್ಷರಶಃ ನಿಜ. ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಿರುವುದು ಸುಳ್ಳಾದರೆ, ಬಿಮ್ಸ್ ಅಧಿಕ್ಷಕರನ್ನು ತಕ್ಷಣವೇ ಬ್ರೈನ್ ಮ್ಯಾಪಿಂಗ್‌ಗೆ ಒಳಪಡಿಸಿ. ಆಗ ನಿಮ್ಮ ಮಾಯಾಜಾಲ ಬಯಲಾಗುತ್ತದೆ. ಬ್ರೇನ್ ಮ್ಯಾಪಿಂಗ್ ನಡೆಸಲು ಸಾಧ್ಯವೇ ಎಂದು ಸವಾಲು ಹಾಕಿದ್ದಾರೆ.

ಪ್ರಕರಣ ಮುಚ್ಚಿಹಾಕಲು ನಿಮ್ಮ ಸರಕಾರ ನಡೆಸುತ್ತಿರುವ ಹರಸಾಹಸ ಏನೇನು ಎಂಬುದು ನನಗೆ ಗೊತ್ತಿದೆ. ಹಾಗೆಯೇ, ಬಿಮ್ಸ್ ಅಧಿಕ್ಷಕರ ಹೇಳಿಕೆಯನ್ನೂ ಗಮನಿಸಿದ್ದೇನೆ. ಅವರ ಪ್ರಕಾರ 6 ಗಂಟೆಯಿಂದ ಶುರುವಾದ ಪೋಸ್ಟ್ ಮಾರ್ಟಂ 3 ಗಂಟೆಗಳ ಕಾಲ ನಡೆದು ವಿಳಂಬವಾಯಿತು. ದೇಹದಲ್ಲಿ ಅನೇಕ ಚೂರುಗಳು ಇದ್ದವು ಎಂದು ಹೇಳಿದ್ದಾರೆ. ಸರಿ. ಆದರೆ, ಆ ವೈದ್ಯರೇ ಮರಣೋತ್ತರ ಪರೀಕ್ಷೆಯನ್ನು ಮುಗಿಸಬಹುದಿತ್ತು. ಹಾಗಿದ್ದ ಮೇಲೆ ಇನ್ನೊಬ್ಬ ವೈದ್ಯರನ್ನು ಕರೆಸಿಕೊಂಡ ಗುಟ್ಟೇನು? ಮೃತದೇಹ ಪರೀಕ್ಷೆಗೆ ಎಷ್ಟು ವೈದ್ಯರು ಬೇಕು? ಮರಣೋತ್ತರ ಪರೀಕ್ಷೆ ವೇಳೆ ನೀವು ಜೀವ ಉಳಿಸಬೇಕಿತ್ತೆ? ಅಥವಾ ಸತ್ಯ ಹುಡುಕಬೇಕಿತ್ತೆ? ಆಗ ನೀವು ಕರೆಸಬೇಕಿದ್ದದ್ದು ಫೊರೆನ್ಸಿಕ್ ತಜ್ಞರನ್ನು ಎಂದು ಅವರು ಹೇಳಿದ್ದಾರೆ.

ಮರಣೋತ್ತರ ಪರೀಕ್ಷೆ ವೇಳೆ ಇಬ್ಬರು ವೈದ್ಯರ ನಡುವೆ ಏನೆಲ್ಲಾ ತಿಕ್ಕಾಟ ನಡೆಯಿತು? ಎನ್ನುವುದು ಕೂಡ ನನಗೆ ಗೊತ್ತಿದೆ. ಬಿಮ್ಸ್ ಅಧಿಕ್ಷಕರ ಹೇಳಿಕೆಯಲ್ಲೇ ನಿಮಗೆ ಪ್ರಶ್ನೆಯೂ ಅಡಗಿದೆ, ಉತ್ತರವೂ ಇದೆ. ಮೊದಲ ವೈದ್ಯರೇ ಮರಣೋತ್ತರ ಪರೀಕ್ಷೆ ಮುಗಿಸಬಹುದಿತ್ತು. ಇನ್ನೊಬ್ಬ ವೈದ್ಯರ ಅವಶ್ಯಕತೆ ಏನಿತ್ತು? ಸಮಾಜವನ್ನು ಹಾಳು ಮಾಡಲಿಕ್ಕೊ ಅಥವಾ ನಿಮ್ಮ ತನಿಖೆ ದಿಕ್ಕು ತಪ್ಪಿಸಲಿಕ್ಕೊ, ಮಾಹಿತಿ ಇಲ್ಲದೆಯೋ ನಾನು ಹೇಳಿದ್ದಲ್ಲ. ಮೃತದೇಹವನ್ನೂ ನಿಮ್ಮ ಮನೆಹಾಳು ರಾಜಕೀಯಕ್ಕೆ ಬಳಸಿಕೊಂಡಿದ್ದನ್ನು ರಾಜ್ಯದ ಜನತೆಗೆ ಗಮನಕ್ಕೆ ತಂದಿದ್ದೇನೆ. ಪ್ರಶ್ನಿಸಿದ್ದೇನೆ ಎಂದು ಟೀಕಿಸಿದ್ದಾರೆ.

ಮೂಲ್ಕಿ ಬಾಲಿಕಾಶ್ರಮದಲ್ಲಿ ಅಮ್ಮನ ಆಸರೆ-ವಿಶಿಷ್ಟ ಸಂಭ್ರಮದಲ್ಲಿ ಶ್ರೀ ಚಂದ್ರಶೇಖರ ಸ್ವಾಮೀಜಿ

ತಾಯಿಯ ಋಣದಲ್ಲಿ ಬದುಕು ಕಟ್ಟಿಕೊಳ್ಳೋಣ

ಮಂಗಳೂರು: ಹೆತ್ತ ತಾಯಿಯ ಋಣವನ್ನು ನಮ್ಮ ಆತ್ಮಸ್ಥೈರ್ಯವನ್ನಾಗಿ ಮಾಡಿಕೊಂಡು ಬದುಕನ್ನು ಕಟ್ಟಿಕೊಳ್ಳೋಣ. ನೋವನ್ನು ಪಡೆದುಕೊಂಡು ಪ್ರೀತಿಯನ್ನು ಹಂಚುವ ಅಮ್ಮನ ಆಸರೆಯನ್ನು ವಿಶ್ವಾಸಕ್ಕೆ ಪರಿವರ್ತಿಸಿಕೊಳ್ಳುವುದೇ ಮಾನವನ ಧರ್ಮವಾಗಬೇಕು. ಉಸಿರಿನ ಕೊನೆಯವರೆಗೂ ತಾಯಿಯನ್ನು ಕಣ್ಣಮುಂದೆಯೇ ಸಾಕಿ ಸಲಹುವುದು ಮಕ್ಕಳ ಕರ್ತವ್ಯ ಎಂದು ಆಧ್ಯಾತ್ಮಿಕ ವಿಶ್ವಗುರು, ಅಂತಾರಾಷ್ಟ್ರೀಯ ವಾಸ್ತುತಜ್ಞ ಶ್ರೀ ಚಂದ್ರಶೇಖರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮಾತೃಶ್ರೀ ಶಾರದಮ್ಮ ಗೋವಿಂದ ಭಟ್ ಅವರ 91ನೇ ಜನ್ಮದಿನಾಚರಣೆಯ ಅಂಗವಾಗಿ ಮೂಲ್ಕಿಯ ಸಿಎಸ್‌ಐ ಬಾಲಿಕಾಶ್ರಮದಲ್ಲಿ ಶ್ರೀಚಂದ್ರಶೇಖರ ಸ್ವಾಮೀಜಿ ಸೇವಾಶ್ರಮದ ಸಂಯೋಜನೆಯಲ್ಲಿ ನಡೆದ ಅಮ್ಮನ ಆಸರೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ಸಂದರ್ಭದಲ್ಲಿ ಯುವ ಉದ್ಯಮಿ ರಾಹುಲ್ ಚಂದ್ರಶೇಖರ್ ಅವರು ವಿಶೇಷವಾಗಿ ಅಮ್ಮನ ಆಸರೆ ಸರಣಿ ಕಾರ್ಯಕ್ರಮವನ್ನು ಸಂಯೋಜಿಸಿ, ಎಲ್ಲಾ ಮಕ್ಕಳಿಗೆ ದೈನಂದಿನ ವಸ್ತುಗಳನ್ನು ವಿತರಿಸಿ, ಮೂಲ್ಕಿಯ ಯಾವುದೇ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಹಾಗೂ ಸೂಕ್ತವಾದ ಸ್ಪಂದನೆಯನ್ನು ಸೇವಾಶ್ರಮದ ಮೂಲಕ ನಡೆಸುವ ಭರವಸೆ ನೀಡಿದರು.

ಶ್ರೀಚಂದ್ರಶೇಖರ ಸ್ವಾಮೀಜಿ ಸೇವಾಶ್ರಮದ ಸಂಯೋಜನೆಯಲ್ಲಿ ಮೂಲ್ಕಿಯ ಸಿಎಸ್‌ಐ ಬಾಲಿಕಾಶ್ರಮದಲ್ಲಿ ಮಾತೃಶ್ರೀ ಶಾರದಮ್ಮ ಗೋವಿಂದ ಭಟ್ ಅವರ 91ನೇ ಜನ್ಮದಿನಾಚರಣೆ ನಿಮಿತ್ತ ನಡೆದ ಅಮ್ಮನ ಆಸರೆ ಕಾರ್ಯಕ್ರಮದಲ್ಲಿ ಮಾತೃಶ್ರೀ ಶಾರದಮ್ಮ ಗೋವಿಂದ ಭಟ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಅಂತಾರಾಷ್ಟ್ರೀಯ ವಾಸ್ತುತಜ್ಞ ಶ್ರೀ ಚಂದ್ರಶೇಖರ ಸ್ವಾಮೀಜಿ, ಉದ್ಯಮಿ ರಾಹುಲ್ ಚಂದ್ರಶೇಖರ್ ಇದ್ದರು.

ಶಾರದಮ್ಮ ಗೋವಿಂದ ಭಟ್, ಸೇವಾಶ್ರಮದ ನಿರ್ದೇಶಕಿ ರಜನಿ ಸಿ.ಭಟ್, ರಾಘವ ಸೂರ್ಯ, ನ್ಯಾಯವಾದಿ ರೋಶನಿ ಚಂದ್ರಶೇಖರ್ ಆಶ್ರಮದ ಸಂಚಾಲಕ ಪುನೀತ್ ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಆಶ್ರಮದ ವಕ್ತಾರ ನರೇಂದ್ರ ಕೆರೆಕಾಡು ನಿರೂಪಿಸಿದರು.

ಮಕ್ಕಳೊಂದಿಗೆ ಶಾರದಮ್ಮನ ಸಂಭ್ರಮ: ಈ ಸಂದರ್ಭದಲ್ಲಿ ಶ್ರೀ ಚಂದ್ರಶೇಖರ ಸ್ವಾಮೀಜಿಯವರು ಮಕ್ಕಳೊಂದಿಗೆ ತಮ್ಮ ತಾಯಿ ಶಾರದಮ್ಮ ಗೋವಿಂದ ಭಟ್ ಅವರು ಮುಗ್ಧ ಮಕ್ಕಳಿಗೆ ಬದುಕಿನ ನೀತಿ ಪಾಠವನ್ನು ತಿಳಿಸಿದರು. ಭವಿಷ್ಯದಲ್ಲಿ ಉತ್ತಮ ಶಿಕ್ಷಣ ಪಡೆದುಕೊಂಡು ಸಮಾಜದಲ್ಲಿ ಸತ್ಪ್ರಜೆಗಳಾಗಿ ಜೀವನ ನಿರ್ವಹಿಸಲು ಸಲಹೆ ನೀಡಿದರು. ಮಕ್ಕಳೊಂದಿಗೆ ವಿಶೇಷವಾಗಿ ಸಂವಾದ ನಡೆಸಿ, ತಮ್ಮ ಅನುಭವವನ್ನು ಹಂಚಿಕೊಂಡರು.

ಮುಂದಿನ ಅವಧಿಗೂ ಸಿದ್ದರಾಮಯ್ಯನವರೇ ಸಿಎಂ

ಬೆಳಗಾವಿ: ಫೆಬ್ರವರಿ 1 ರಂದು ಸಿಎಂ ಸಿದ್ದರಾಮಯ್ಯ ಬಜೆಟ್ ಮಂಡನೆ ಮಾಡುತ್ತಾರೆ. ಮುಂದಿನ ಅವಧಿಗೆ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿ ಎಂಬುದು ನಮ್ಮ ಆಶಯ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಹುಕ್ಕೇರಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಐದು ವರ್ಷ ಮುಖ್ಯಮಂತ್ರಿಯಾಗಿ ಇರ್ತಾರೆ ಎಂದು ಭಾವಿಸಿದ್ದೇವೆ. ಈಗಾಗಲೇ ಎರಡೂವರೆ ವರ್ಷ ಮುಗಿಸಿದ್ದಾರೆ. ಸಿಎಂ ಆಗಿ ಪೂರ್ಣಾವಧಿ ಮುಗಿಸುವ ವಿಶ್ವಾಸವಿದೆ ಎಂದು ಸ್ವತಃ ಅವರೇ ಹೇಳಿದ್ದಾರೆ ಎಂದರು. ದೇವರಾಜ ಅರಸು ಅವರ ಸುದೀರ್ಘ ಸೇವೆಯ ನಂತರ ಸಿಎಂ ಸಿದ್ದರಾಮಯ್ಯ ಸೇವೆ ಮುಂದುವರಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ, ನಮಗೆ ಇದೊಂದು ಹೆಮ್ಮೆಯ ವಿಷಯವಾಗಿದೆ. ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಸಿದ್ದರಾಮಯ್ಯ ಸಾಕಷ್ಟು ಶ್ರಮಪಟ್ಟಿದ್ದಾರೆ. ಹೋರಾಟ ಮಾಡಿದ್ದಾರೆ. ಸಿದ್ದರಾಮಯ್ಯನವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಸಿದ್ದರಾಮಯ್ಯ ಬದಲಾವಣೆ ಕುರಿತ ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿಕೆ ವಿಚಾರವಾಗಿ ಮಾತನಾಡಿ, ಸಮಯ ಬಂದಾಗ ಚರ್ಚೆ ಮಾಡೋಣ ಸದ್ಯ ಮುಖ್ಯಮಂತ್ರಿ ಬದಲಾವಣೆ ಸಂದರ್ಭ ಬಂದಿಲ್ಲ. ಅವರೇ ಮುಂದುವರಿಯುತ್ತಾರೆ ಎಂದರು. ಬಳ್ಳಾರಿ ಗಲಾಟೆ ವಿಚಾರವಾಗಿ ಮಾತನಾಡಿ, ಈಗಾಗಲೇ ತನಿಖೆ ನಡೆಯುತ್ತಿದೆ. ಎರಡೂ ಕಡೆಯವರ ಬಂಧನ ಆಗಿದೆ, ಸರಿಯಾಗಿ ತನಿಖೆ ನಡೆಯುತ್ತಿದೆ ಎಂದರು.

ಯುವ ಸಮೂಹದ ಕನಸುಗಳಿಗೆ ರೆಕ್ಕೆ ನೀಡಲಿರುವ ಕಲಬುರಗಿಯ ಪ್ರಬುದ್ಧ ಅಕಾಡೆಮಿ ಲೋಕಾರ್ಪಣೆಗೆ ಸಿದ್ಧ

ಶೈಕ್ಷಣಿಕ ಕ್ರಾಂತಿಗೆ ಸಜ್ಜಾದ ಕಲ್ಯಾಣ ಕರ್ನಾಟಕ

ದೇವೇಂದ್ರ ಜಾಡಿ ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದ ಉದ್ಯೋಗಾಕಾಂಕ್ಷಿಗಳ ದಶಕಗಳ ಕಾಲದ ಕನಸೊಂದು ಈಗ ನನಸಾಗುವ ಕಾಲ ಹತ್ತಿರ ಬಂದಿದೆ. ಶೈಕ್ಷಣಿಕವಾಗಿ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಸರಕಾರ ಹಲವು ಕ್ರಮ ಕೈಗೊಂಡಿದೆ.

ಗುಣಮಟ್ಟದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಗಾಗಿ ಬೆಂಗಳೂರು, ಹೈದರಾಬಾದ್ ಅಥವಾ ದೆಹಲಿಯಂತಹ ಮಹಾನಗರಗಳಿಗೆ ಅಲೆಯುತ್ತಿದ್ದ ಯುವಜನತೆಗೆ ಕಲಬುರಗಿಯಲ್ಲೇ ಅಂತಾರಾಷ್ಟ್ರೀಯ ಮಟ್ಟದ ಸೌಲಭ್ಯವಿರುವ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ 'ಪ್ರಬುದ್ಧ ಅಕಾಡೆಮಿ' ಸಿದ್ಧಗೊಂಡಿದೆ. 29.52 ರು. ವೆಚ್ಚದಲ್ಲಿ ಬೃಹತ್ ಹೈಟೆಕ್ ಕಟ್ಟಡ ನಿರ್ಮಾಣ ಮಾಡಿದ್ದು, ಇನ್ನೊಂದು ವಾರದಲ್ಲಿ ಲೋಕಾರ್ಪಣೆ ಆಗಲಿದೆ. ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ಪೊಲೀಸ್ ಇಲಾಖೆ ಉನ್ನತ ಹುದ್ದೆಗಳ ತಯಾರಿ ನಡೆಸುತ್ತಿರುವ

ಅಭ್ಯರ್ಥಿಗಳಿಗೆ ಸ್ಥಳೀಯವಾಗಿ ಗುಣಮಟ್ಟದ ತರಬೇತಿ ನೀಡುವ ಉದ್ದೇಶವಿದೆ.

ಮೆಟ್ರೊ ನಗರಗಳಿಗೆ ಕೋಚಿಂಗ್ ಪಡೆಯಲು ಹೋಗುತ್ತಿರುವ ಸ್ಪರ್ಧಾರ್ಥಿಗಳು ದುಬಾರಿ ಜೀವನಶೈಲಿ, ಅಪರಿಚಿತ ಪರಿಸರ ಮತ್ತು ವಸತಿ ಸಮಸ್ಯೆಗಳು ಅನೇಕ ಪ್ರತಿಭಾವಂತರನ್ನು ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಮಾಡುತ್ತಿದ್ದವು. ಆದರೆ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ದೂರದೃಷ್ಟಿಯಿಂದಾಗಿ, ದೇಶದ ಖ್ಯಾತ ವಿಷಯ ತಜ್ಞರೇ ಕಲಬುರಗಿಗೆ ಬಂದು ಸ್ಥಳೀಯ ವಿದ್ಯಾರ್ಥಿಗಳಿಗೆ ಪಾಠ ಮಾಡಲಿದ್ದಾರೆ. ಇದರಿಂದ ಅಭ್ಯರ್ಥಿಗಳ ಆರ್ಥಿಕ ಹೊರೆ ತಗ್ಗುವುದಲ್ಲದೆ. ಆತ್ಮವಿಶ್ವಾ ಸವೂ ವೃದ್ಧಿಸಲಿದೆ.

ಯುವಜನತೆಗೆ ತರಬೇತಿ ನೀಡಲು ಪ್ರಬುದ್ಧ ಅಕಾಡೆಮಿ ಸಜ್ಜಾಗಿದೆ. ಗುಣಮಟ್ಟದ ತರಬೇತಿಗಾಗಿ ದೇಶದ ಪ್ರಮುಖ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗುವುದು. ನಾನೇ ಖುದ್ದಾಗಿ ಕಟ್ಟಡ ಮತ್ತು ಸೌಲಭ್ಯಗಳನ್ನು ಪರಿಶೀಲಿಸಿದ್ದೇನೆ. ಸಚಿವರೊಂದಿಗೆ ಚರ್ಚಿಸಿ ಶೀಘ್ರದಲ್ಲೇ ಉದ್ಘಾಟನಾ ದಿನಾಂಕ ನಿಗದಿಪಡಿಸಲಾಗುವುದು.

-ಫೌಜಿಯಾ ತರನ್ನುಮ್, ಕಲಬುರಗಿ ಜಿಲ್ಲಾಧಿಕಾರಿ

ಕಲ್ಯಾಣ ಕರ್ನಾಟಕ ಭಾಗದ ಉದ್ಯೋಗಾಕಾಂಕ್ಷಿಗಳಿಗೆ ಅತ್ಯುತ್ತಮ ತರಬೇತಿ ನೀಡಲು ಕಲಬುರಗಿಯಲ್ಲಿ ಪ್ರಬುದ್ಧ ಅಕಾಡೆಮಿ ಸ್ಥಾಪಿಸಲಾಗಿದೆ. ಇದರ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಉದ್ಘಾಟನೆಯಾಗಲಿದೆ. ಇದು ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಹೊಸ ಶಕ್ತಿ ಮತ್ತು ಆತ್ಮವಿಶ್ವಾಸ ನೀಡಲಿದೆ.

-ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

ಹೈಟೆಕ್ ಮೂಲಸೌಕರ್ಯದ ಸಂಗಮ: ಜೇವರ್ಗಿ ರಸ್ತೆಯ ಅಟಲ್ ಬಿಹಾರಿ ವಾಜಪೇಯಿ ಲೇಔಟ್‌ನಲ್ಲಿ ಸುಮಾರು 29.52 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಅಕಾಡೆಮಿ, ಒಂದು ಸುಸಜ್ಜಿತ ವಿಶ್ವವಿದ್ಯಾಲಯದಂತೆ ಕಂಗೊಳಿಸುತ್ತಿದೆ. 10,450 ಚದರ ಮೀಟರ್ ವಿಸ್ತೀರ್ಣದಲ್ಲಿ ಹರಡಿರುವ ಈ ಕ್ಯಾಂಪಸ್‌ನಲ್ಲಿ ಏಕಕಾಲಕ್ಕೆ 1,000 ಅಭ್ಯರ್ಥಿಗಳಿಗೆ ಉನ್ನತ ಮಟ್ಟದ ತರಬೇತಿ ನೀಡುವ ಸಾಮರ್ಥ್ಯವಿದೆ.

ಅಕಾಡೆಮಿ ಪ್ರಮುಖ ಸೌಲಭ್ಯಗಳು

- ಸ್ಮಾರ್ಟ್ ಕ್ಲಾಸ್‌ರೂಮ್‌ಗಳು, ಡಿಜಿಟಲ್, ಎಐಆಧಾರಿತ ಕಲಿಕಾ ವ್ಯವಸ್ಥೆ
- ಡಿಜಿಟಲ್ ಲೈಬ್ರರಿ ಮತ್ತು ಸಮಗ್ರ ಉಲ್ಲೇಖಿತ ಪುಸ್ತಕಗಳ ಸಂಪನ್ಮೂಲ ಕೇಂದ್ರ
- ಆನ್‌ಲೈನ್ ಪರೀಕ್ಷೆಗಳಿಗಾಗಿ ಕಂಪ್ಯೂಟರ್ ಲ್ಯಾಬ್ ಮತ್ತು ಮಾಕ್ ಟೆಸ್ಟ್ ಕೇಂದ್ರಗಳು.
- ಗುಂಪು ಅಧ್ಯಯನ ವಲಯಗಳು, ಸಮಾಲೋಚನಾ ಕೊಠಡಿಗಳು ಮತ್ತು ವಿಶ್ರಾಂತಿ ಕೇಂದ್ರ
- ಸಂವಹನ ಕಲೆ, ಐಕ್ಯೂ, ಎಸ್‌ಕ್ಯೂ ಮತ್ತು ಸೈಕೋಮೆಟ್ರಿಕ್ ಮೌಲ್ಯಮಾಪನಗಳಿಗೆ ವಿಶೇಷ ವ್ಯವಸ್ಥೆ.

ಪ್ರಬುದ್ಧ ಅಕಾಡೆಮಿಗೆ ಪ್ರವೇಶ ಹೇಗೆ?

ಪ್ರಬುದ್ಧ ಅಕಾಡೆಮಿಯಲ್ಲಿ ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳಿಗೆ ಮುಕ್ತ ಅವಕಾಶವಿರುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸುವ ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅತ್ಯಾಧುನಿಕ ಮೂಲ ಸೌಕರ್ಯ ಮತ್ತು ಪರಿಣಿತ ತರಬೇತಿ ಮಾದರಿಯೊಂದಿಗೆ, ಪ್ರಬುದ್ಧ ಅಕಾಡೆಮಿಯು ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳ ಭವಿಷ್ಯವನ್ನು ಬದಲಿಸುವ 'ಗೇಮ್ ಚೇಂಜರ್' ಆಗಿ ಹೊರಹೊಮ್ಮುವ ನಿರೀಕ್ಷೆಯಿದೆ.

ವಿಶ್ವವಾಣಿ ಬೆಂಗಳೂರು 07-01-2026 ಬುಧವಾರ @vishwavaninews

ವಿರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಸಹಜ ಸಾವಿಲ್ಲದ ಅಮರತ್ವವನ್ನು ಪಡೆದಿರುವ ಒಂದು ಜೀವಿಯು ವಿಜ್ಞಾನಿಗಳ ಕುತೂಹಲವನ್ನು ಕೆರಳಿಸಿದೆ. ಈ ಜೀವಿಯ ಅಮರತ್ವದ ಕಡೆಗೆ ಒಂದು ಸ್ಥೂಲ ನೋಟವನ್ನು ಹರಿಸೋಣ.

ಬೆರಗು ಮೂಡಿಸುವ ಅಂಬಲಿ ಮೀನು



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

naasomeswara@gmail.com

ಅಂಬಲಿ ಮೀನಿಗೂ ಹಾಗೂ ನಾವು ತಿನ್ನುವ ಮೀನಿಗೂ ಯಾವುದೇ ಸಂಬಂಧವಿಲ್ಲ. 'ಮೀನು' ಎಂಬ ಹೆಸರಿದ್ದರೂ ಇದು ಮೀನಲ್ಲ. ಅಂಬಲಿ ಮೀನುಗಳು ಪ್ರಧಾನವಾಗಿ ಸಮುದ್ರಜೀವಿಗಳು. ಸಿಹಿ ನೀರಿನಲ್ಲಿಯೂ ಕೆಲವು ಪ್ರಭೇದಗಳು ಜೀವಿಸುತ್ತವೆ. ಇವು 'ನೈಡೇರಿಯ' ಎನ್ನುವ ವಂಶಕ್ಕೆ ಸೇರಿವೆ. ಇವುಗಳ ಒಡಲು ಗಂಟೆಯ ಹಾಗೆ ಪಾರದರ್ಶಕವಾಗಿರುತ್ತದೆ. ಗಂಟೆಯ ಅಂಚಿನಿಂದ ಕೆಲವು ಸಲ ನೂರಾರು ಲತಾ ಬಾಹುಗಳು ಹುಟ್ಟಿರುತ್ತವೆ. ಈ ಬಾಹುಗಳ ಮೂಲ ಕೆಲಸ ಆಹಾರ ಸಂಪಾದನೆ. ಕೆಲವು ಬಾಹುಗಳಲ್ಲಿ 'ನೈಡೋಸಿಸ್ಟ್' ಗುಂಡುಗಳು (ಬುಲೆಟ್ಸ್) ಇರುತ್ತವೆ. ಹತ್ತಿರ ಬಂದ ಶತ್ರುಗಳತ್ತ ಈ ಗುಂಡುಗಳನ್ನು ಹಾರಿಸಿ ಅವನ್ನು ಓಡಿಸುತ್ತವೆ. ಈ ಗುಂಡುಗಳು ಒಂದು ವೇಳೆ ಮನುಷ್ಯರಿಗೇನಾದರೂ ತಾಗಿದರೆ, ಅವು ತೀವ್ರ ಸ್ವರೂಪದ ಅಲರ್ಜಿಯನ್ನು ಉಂಟುಮಾಡಬಲ್ಲವು. ಕೆಲವು ಸಲ ಸಾವಿಗೂ ಕಾರಣವಾಗುತ್ತದೆ. 'ಸ್ಟಾರೋ ಕ್ಲಾಡಿಯ' ಎಂಬ ಅಂಬಲಿ ಮೀನು ಕೇವಲ 0.5 ಮಿ.ಮೀ. ಇರುತ್ತದೆ. ಅದೇ 'ಸಯನಿಯ ಕ್ಯಾಪಿಲ್ಲೇಟ' ಎಂಬ ಬೃಹತ್ ಅಂಬಲಿ ಮೀನಿನ ಲತಾಬಾಹುಗಳು 100-120 ಅಡಿ ಉದ್ದವಿರುತ್ತವೆ. ಹಾಗಾಗಿ ಕೆಲವರು ಈ ಅಂಬಲಿ ಮೀನನ್ನು 'ಸಾಗರದ ಅತ್ಯಂತ ಉದ್ದನೆಯ ಜೀವಿ' ಎಂದು ಕರೆಯುವರು.

ಜೀವನಚಕ್ರ

ಅಂಬಲಿ ಮೀನಿನ ಜೀವನಚಕ್ರದಲ್ಲಿ ಎರಡು ಪ್ರಮುಖ ಘಟ್ಟಗಳಿವೆ. ವಯಸ್ಕ ಹಂತದ 'ಮೆಡುಸ' ಎನ್ನುವ ಘಟ್ಟ ಹಾಗೂ ಬೆಳವಣಿಗೆಯ ಹಂತವನ್ನು ಸೂಚಿಸುವ 'ಪಾಲಿಪ್' ಹಂತ. ಮೆಡುಸ ಎಂದರೆ ಗ್ರೀಕ್ ಪುರಾಣದಲ್ಲಿ ಬರುವ ಓರ್ವ ಸ್ತ್ರೀ ದೈತ್ಯದೇಹಿ. ಈಕೆಯ ತಲೆಯಲ್ಲಿ ಕೂದಲು ಇರಬೇಕಾದ ಕಡೆಯಲ್ಲಿ ವಿಷಸರ್ಪಗಳು ಇದ್ದು ಅವು ಪೂತ್ಕರಿಸುತ್ತಿದ್ದವಂತೆ! ಅಂಬಲಿಮೀನಿನ ಮೆಡುಸ ಅಂಚಿನಿಂದ ಹೊರಚಾಚಿರುವ ಲತಾಬಾಹುಗಳು ವಿಷಪೂರಿತ ಸರ್ಪಗಳ ಹಾಗೆ ಕಂಡ ಕಾರಣ ಲಿನೇಯಸ್ 1752ರಲ್ಲಿ ಅಂಬಲಿ ಮೀನಿನ ವಯಸ್ಕ ಹಂತವನ್ನು ಮೆಡುಸ ಎಂದು ಕರೆದನು. ಈ ಮೆಡುಸವನ್ನು ನಾವು ಕನ್ನಡದಲ್ಲಿ 'ಶಿರ' ಎಂದು ಕರೆಯಬಹುದು. ಈಗ ಅಂಬಲಿಮೀನುಗಳ ಜೀವನಚಕ್ರವನ್ನು ಸ್ಥೂಲವಾಗಿ ಗಮನಿಸೋಣ.

- ಅಂಬಲಿ ಮೀನುಗಳು ಲೈಂಗಿಕವಾಗಿ (ಸೆಕ್ಷುವಲ್) ಹಾಗೂ ಅಲ್ಯೆಂಗಿಕವಾಗಿಯೂ (ಏಸೆಕ್ಷುವಲ್) ಸಂತಾನವರ್ಧನೆಯನ್ನು ನಡೆಸುತ್ತವೆ.
- ಅಂಬಲಿ ಮೀನಿನಲ್ಲಿ ಲಿಂಗಗಳು ಪ್ರತ್ಯೇಕ. ಗಂಡು ಹಾಗೂ ಹೆಣ್ಣು ಅಂಬಲಿ ಮೀನುಗಳಿರುತ್ತವೆ.
- ವಯಸ್ಕ ಹೆಣ್ಣು ಅಂಡಗಳನ್ನು ನೀರಿನೊಳಗೆ ವಿಸರ್ಜಿಸುತ್ತದೆ. ಅದೇ ವೇಳೆಗೆ ಗಂಡು ಅಂಬಲಿ ಮೀನು ವೀರ್ಯಾಣುಗಳನ್ನು ವಿಸರ್ಜಿಸುತ್ತದೆ.
- ನೀರಿನಲ್ಲಿ ವೀರ್ಯಾಣು ಹಾಗೂ ಅಂಡಾಣುಗಳ ಸಂಯೋಗವಾಗುತ್ತದೆ. ಯುಗ್ಮಜವು (ಜೈಗೋಟ್) ಬೆಳೆಯುತ್ತದೆ.
- ಯುಗ್ಮಜವು ಬೆಳೆದು ಪ್ಲಾನ್ಯುಲ ಎನ್ನುವ ಮರಿಹುಳು (ಲಾರ್ವ) ಆಗುತ್ತದೆ.
- ಪ್ಲಾನ್ಯುಲ ನೇರವಾಗಿ ಸಮುದ್ರ ತಳವನ್ನು ತಲುಪುತ್ತದೆ. ಬೇರುಬಿಡುತ್ತದೆ, ಬೆಳೆಯುತ್ತದೆ. ಇದನ್ನು 'ಪಾಲಿಪ್' ಎಂದು ಕರೆಯುವರು.
- ಪಾಲಿಪ್ ಕಾಯ ನೀಳವಾಗಿದೆ. ಪಾರದರ್ಶಕವಾಗಿದೆ. ತುದಿಯಲ್ಲಿ ಬಾಯಿಯಿದೆ. ಸುತ್ತಲೂ ಲತಾಪಾದಗಳ ಪೂರ್ವರೂಪವಿದೆ. ಹತ್ತಿರಬಂದ ಆಹಾರ ಪದಾರ್ಥಗಳನ್ನು ಸೆಳೆದು ತಿನ್ನುತ್ತವೆ. ಹೀಗೆ ಆಹಾರವನ್ನು ಸೇವಿಸಿ ಚೆನ್ನಾಗಿ ಬೆಳೆಯುತ್ತವೆ.
- ಒಂದು ಹಂತಕ್ಕೆ ಬೆಳೆದ ಪಾಲಿಪ್ ಅಲೈಂಗಿಕವಾಗಿ ಸಂತಾನವರ್ಧನೆಯನ್ನು ನಡೆಸುತ್ತದೆ.
- ಮೊದಲು ಪಾಲಿಪ್ ಒಡಲು ಉಂಗುರಮಯವಾಗಿರುತ್ತದೆ. ಕ್ರಮೇಣ ಒಡಲಿನಿಂದ ಒಂದೊಂದೇ ಉಂಗುರವು ಪ್ರತ್ಯೇಕಗೊಳ್ಳುತ್ತದೆ. ಸುಮಾರು 1 ಮಿ.ಮೀ. ಗಾತ್ರದ ಈ ಉಂಗುರ ರೂಪದ ಮೊಗ್ಗು ನೀರಿನಲ್ಲಿ ಈಜುತ್ತಾ ಸಾಗುತ್ತದೆ.
- ಈ ಮೊಗ್ಗು ಮೆಡುಸ ಆಗಿ ಬೆಳೆಯುತ್ತದೆ. ಸುಮಾರು ಒಂದು ತಿಂಗಳಿನವರೆಗೆ ಆಹಾರವನ್ನು ಸೇವಿಸಿ ಬೆಳೆದು ಸಂತಾನವರ್ಧನೆಯನ್ನು ನಡೆಸುವ ಸಾಮರ್ಥ್ಯವನ್ನು ಗಳಿಸುತ್ತದೆ. ಇದುವೇ ವಯಸ್ಕ ಮೆಡುಸ. ಇದು ಅಂಡಾಣು ಇಲ್ಲವೇ ವೀರ್ಯಾಣುಗಳನ್ನು ಉತ್ಪಾದಿಸುವುದರ ಮೂಲಕ ಮತ್ತೆ ಮತ್ತೆ ಸಂತಾನವರ್ಧನಾ ಚಕ್ರವನ್ನು ಪುನರಾವರ್ತಿಸುತ್ತದೆ.

ಟುರ್ರಿಟಾಪ್ಸಿಸ್ ನ್ಯೂಟ್ರಿಕ್ಯುಲ

ಟುರ್ರಿಟಾಪ್ಸಿಸ್ ನ್ಯೂಟ್ರಿಕ್ಯುಲ ಎನ್ನುವುದು ಸಹಾ ಒಂದು ಅಂಬಲಿಮೀನು! ಟುರ್ರಿಟಾಪ್ಸಿಸ್ ಮೂಲತಃ ಕ್ಯಾರೆಬಿಯನ್ ಸಮುದ್ರದ ಜೀವಿ. ಈಗ ಈ ಜೀವಿಯನ್ನು ವಿಶ್ವದ ಎಲ್ಲ ಸಾಗರ ಹಾಗೂ ಸಮುದ್ರಗಳಲ್ಲಿ ನೋಡಬಹುದು. ಘಂಟಾಕೃತಿಯ ದೇಹ. ಸುಮಾರು 4.5 ಮಿ.ಮೀ. ಎತ್ತರ ಹಾಗೂ ಅಷ್ಟೇ ಅಗಲವಿರುತ್ತದೆ. ಒಡಲು ಪಾರದರ್ಶಕ. ಜಠರಾಂಗವು ಸ್ವಲ್ಪ ದಟ್ಟವಾಗಿರುತ್ತದೆ. ಮರಿ ಅಂಬಲಿ ಮೀನು ಸುಮಾರು 1 ಮಿ.ಮೀ. ಇರುತ್ತದೆ. ಘಂಟಾಕೃತಿ ಒಡಲಂಚಿನಲ್ಲಿ ಸಮಾನಾಂತರವಾಗಿ ಎಂಟು ಲತಾಬಾಹುಗಳು (ಟೆಂಟಕಲ್ಸ್) ಇರುತ್ತವೆ. ವಯಸ್ಕ ಅಂಬಲಿ ಮೀನಿನ ಅಂಚಿನಲ್ಲಿ ಲತಾಪಾದಗಳ ಸಂಖ್ಯೆ 80-90ರವರೆಗೆ ಇರಬಹುದು.

ಜೈವಿಕ ಚಿರಂಜೀವತ್ವ

- ಅಂಬಲಿ ಮೀನುಗಳ ಜಗತ್ತು ಸಾಕಷ್ಟು ವೈವಿಧ್ಯಮಯವಾಗಿದೆ. ಅಂಬಲಿ ಮೀನುಗಳು ಕೆಲವು ಗಂಟೆಗಳಿಂದ ಹಿಡಿದು ಹಲವು ತಿಂಗಳುಗಳ ವರೆಗೆ ಬದುಕಿರುತ್ತವೆ.
- ಮೆಡುಸ ಅಂಬಲಿಮೀನು ತನ್ನ ಸಂತಾನವರ್ಧನಾ ಜವಾಬ್ದಾರಿಯನ್ನು ಪೂರ್ಣಗೊಳಿಸಿರುವ ಕಾರಣ, ಅದರ ಒಡಲು ಕ್ರಮೇಣ ಶಿಥಿಲವಾಗಿ ನಾಶವಾಗಿಬಿಡುತ್ತದೆ. 'ಜಾತಸ್ಯ ಮರಣಂ ಧ್ರುವಂ'- ಹುಟ್ಟಿದ ಜೀವಿ ಸಾಯಲೇಬೇಕು!
- ಮೆಡುಸ ಹಂತದಲ್ಲಿರುವ ಚಿರಂಜೀವಿ ಅಂಬಲಿ ಮೀನು ಆಹಾರಾಂಶಗಳ ಕೊರತೆ ಅಥವಾ ಇನ್ನಿತರ ಅನಾನುಕೂಲಕರ ಪರಿಸ್ಥಿತಿಯು ರೂಪುಗೊಂಡಾಗ, ಮೆಡುಸ ಹಂತವನ್ನು ಬಿಟ್ಟು ತನ್ನ ಪೂರ್ವರೂಪವಾದ ಪಾಲಿಪ್ ಹಂತಕ್ಕೆ ಮರಳುತ್ತದೆ.
- ಪಾಲಿಪ್ ಹಂತದಲ್ಲಿ ಜೀವವನ್ನು ಹಿಡಿದಿಟ್ಟುಕೊಳ್ಳುತ್ತದೆ.
- ಮತ್ತೆ ಅನುಕೂಲಕರ ಪರಿಸ್ಥಿತಿ ರೂಪುಗೊಂಡಾಗ, ಆಹಾರವನ್ನು ಸೇವಿಸಿ ಬೆಳೆಯುತ್ತದೆ. ಅಲೈಂಗಿಕವಾಗಿ ಉಂಗುರ ರೂಪದ ಮೊಗ್ಗುಗಳನ್ನು ರೂಪಿಸುತ್ತದೆ. ಮೊಗ್ಗುಗಳು ಪ್ರತ್ಯೇಕಗೊಳ್ಳುತ್ತವೆ. ನೀರಿನಲ್ಲಿ ಈಜುತ್ತಾ, ಮತ್ತೆ ಸ್ವತಂತ್ರ ಬದುಕನ್ನು ನಡೆಸುತ್ತ, ವಯಸ್ಕ ಹಂತವನ್ನು ತಲುಪಿ ಲೈಂಗಿಕವಾಗಿ ಸಂತಾನ ವರ್ಧನೆಯಲ್ಲಿ ತೊಡಗುತ್ತವೆ. ಮತ್ತೆ ಏನಾದರೂ ಅನಾನುಕೂಲಕರ ಪರಿಸ್ಥಿತಿ ರೂಪುಗೊಂಡರೆ ಇದೇ ಮೆಡುಸಗಳು ಮತ್ತೆ ಪಾಲಿಪ್ ಹಂತಕ್ಕೆ ಹಿಂದಿರುಗಬಲ್ಲವು. ಅನುಕೂಲಕರ ಪರಿಸ್ಥಿತಿ ರೂಪುಗೊಳ್ಳುವವರೆಗೂ ಕಾಯಬಲ್ಲವು. ಮತ್ತೆ ಹೊಸ ಬದುಕನ್ನು ಆರಂಭಿಸಬಲ್ಲವು. ಹೀಗೆ ಬಾಲ್ಯ-ಯೌವನಗಳು ನಿರಂತರವಾಗಿ ಮುಂದುವರಿಯುತ್ತಲೇ ಇರುವ ಕಾರಣ ಇವುಗಳಿಗೆ ಸಹಜ ಸಾವು ಎನ್ನುವುದಿಲ್ಲ. ಹಾಗಾಗಿ ಇವನ್ನು 'ಜೈವಿಕ ಚಿರಂಜೀವಿಗಳು' (ಬಯಲಾಜಿಕಲ್ ಇಮ್ಮಾರ್ಟಲ್ಸ್) ಎಂದು ಕರೆಯಬಹುದು.
- ಚಿರಂಜೀವಿ ಅಂಬಲಿಮೀನು ಹೇಗೆ ಮೆಡುಸ ಹಂತದಿಂದ ಪಾಲಿಪ್ ಹಂತಕ್ಕೆ ಮರಳುತ್ತದೆ ಎನ್ನುವುದು ಕುತೂಹಲಕರ ವಿಷಯವಾಗಿದೆ.
- ಅನಾನುಕೂಲಕರ ಪರಿಸ್ಥಿತಿಯು ಮೂಡಿದಾಗ ಸಾಮಾನ್ಯವಾಗಿ ಅಂಬಲಿಮೀನಿನ ಘಂಟಾಕೃತಿಯ ಒಡಲು ಶಿಥಿಲವಾಗುತ್ತದೆ. ಆನಂತರ ಲತಾಪಾದಗಳೆಲ್ಲ ಶಿಥಿಲವಾಗಿ ಕರಗಿಹೋಗುತ್ತವೆ. ಈ ಕರಗುವಿಕೆ 'ಅಪೋಪ್ಟೋಸಿಸ್' ಎನ್ನುವ ಸ್ವಯಂ ಜೀರ್ಣಕಾರಿ ಕ್ರಿಯೆಯ ಮೂಲಕ ನಡೆಯುತ್ತದೆ. ಅಂತಿಮವಾಗಿ ಅಂಬಲಿಮೀನು ಕೇವಲ ಪ್ಲಾನ್ಯುಲ ಗಾತ್ರಕ್ಕಿಳಿದು ಸಮುದ್ರ ತಳವನ್ನು ಮುಟ್ಟುತ್ತದೆ, ಬೇರು ಬಿಡುತ್ತದೆ, ಬೇರನ್ನು ಹರಡುತ್ತದೆ. ಬೇರಿನಿಂದ ಮತ್ತೆ ಪಾಲಿಪ್ ರೂಪುಗೊಂಡು ಬೆಳೆಯಲಾರಂಭಿಸುತ್ತದೆ.

ಟ್ರಾನ್ಸ್‌ಡಿಫರೆನ್ಷಿಯೇಶನ್

- ವಯಸ್ಕ ಹಂತದಲ್ಲಿದ್ದ ಅಂಬಲಿಮೀನಿನಲ್ಲಿರುವ ಜೀವಕೋಶಗಳು 'ಟ್ರಾನ್ಸ್‌ಡಿಫರೆನ್ಷಿಯೇಶನ್' ಎನ್ನುವ ಪ್ರಕ್ರಿಯೆಯ ಮೂಲಕ ಮತ್ತೆ ಪಾಲಿಪ್ ಹಂತಕ್ಕೆ ಮರಳುತ್ತವೆ.
- ಒಂದು ವಯಸ್ಕ ಕಾಯಕೋಶವು ಮತ್ತೊಂದು ವಯಸ್ಕ ಕಾಯಕೋಶಕ್ಕೆ ನೇರವಾಗಿ ಜನ್ಮ ನೀಡುವುದೇ ಈ ಪ್ರಕ್ರಿಯೆಯ ತಿರುಳು.
- ಒಂದು ಕ್ಯಾನ್ಸರ್ ಜೀವಕೋಶವು ಮತ್ತೊಂದು ಕ್ಯಾನ್ಸರ್ ಜೀವಕೋಶಕ್ಕೆ ಜನ್ಮನೀಡುತ್ತದೆ. ಅತ್ಯಂತ ವೇಗವಾಗಿ, ಯಾವುದೇ ತಪ್ಪುಗಳಿಲ್ಲದೇ, ಕೇವಲ ಕ್ಯಾನ್ಸರ್ ಜೀವಕೋಶಗಳಿಗೇ ಜನ್ಮ ನೀಡುತ್ತಾ ಹೋಗುತ್ತದೆ. ಹೀಗೆ ಜನ್ಮನೀಡುವ ಸಾಮರ್ಥ್ಯ ಬಹುಶಃ ಸದಾ ಕಾಲಕ್ಕೂ ನಡೆಯಬಲ್ಲದು. ಅಂದರೆ ಒಂದರ್ಥದಲ್ಲಿ ಕ್ಯಾನ್ಸರ್ ಜೀವಕೋಶಗಳೂ ಚಿರಂಜೀವಕೋಶಗಳು! ಆದರೆ ಈ ಎಲ್ಲ ಜೀವಕೋಶಗಳು ಅಸಹಜವಾದವು. ಇಂಥ ಅಸಹಜ ಜೀವಕೋಶಗಳು ನಮಗೆ ಅನುಪಯುಕ್ತ ಹಾಗೂ ಮಾರಕ.
- 'ಟ್ರಾನ್ಸ್‌ಡಿಫರೆನ್ಷಿಯೇಶನ್' ಪ್ರಕ್ರಿಯೆಯಲ್ಲಿ ಹೊಸ ಹೊಸ ಜೀವಕೋಶಗಳು ಹುಟ್ಟುತ್ತವೆ. ಆದರೆ ಇವೆಲ್ಲ ಆರೋಗ್ಯಕರ ಜೀವಕೋಶಗಳು. ಹೊಸ ಸಂತಾನವನ್ನು ರೂಪಿಸುವ ಜೀವಕೋಶಗಳು. ಮಾತೃ ಜೀವಿಗೂ ಹಾಗೂ ಸಂತಾನಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ, ಏಕರೂಪವಾಗಿರುತ್ತವೆ.

ಭವಿಷ್ಯ

ಅನಾದಿ ಕಾಲದಿಂದಲೂ ಮನುಷ್ಯನಿಗೆ ಚಿರಂಜೀವಿಯಾಗುವ ಆಸೆ. ಆದರೆ ಚಿರಂಜೀವಿಯಾಗುವ ದಿಶೆಯಲ್ಲಿ ನಡೆಸಬಹುದಾದ ಪ್ರಯೋಗಗಳ ಬಗ್ಗೆ ಪರ-ವಿರೋಧದ ಧ್ವನಿಗಳೆದ್ದಿವೆ. ವಿಜ್ಞಾನಿಗಳು ದೀರ್ಘಾಯಸ್ಸನ್ನು ನೀಡುವುದು ಅಥವಾ ವೃದ್ಧಾಪ್ಯವನ್ನು ನಿಧಾನಗೊಳಿಸುವುದು ಸಾಧ್ಯ ಎಂದು ನಂಬಿದ್ದಾರೆ. ಅಲ್ಲದೆ ಒಂದಲ್ಲ ಒಂದು ದಿನ ಸಾವನ್ನು ಗೆಲ್ಲಬಹುದು ಎಂಬ ಕನಸನ್ನೂ ಕಾಣುತ್ತಿದ್ದಾರೆ. 2012ನೆಯ ವರ್ಷದಲ್ಲಿ ಸಾವನ್ನು ಗೆಲ್ಲಬಲ್ಲ ಪ್ರಯೋಗಗಳು ನಡೆಯಬೇಕು ಎಂದು ರಷ್ಯ, ಅಮೆರಿಕ, ನೆದರ್ಲ್ಯಾಂಡ್ಸ್ ಹಾಗೂ ಇಸ್ರೇಲ್ ದೇಶಗಳು ಬಹಿರಂಗವಾಗಿ ಬೆಂಬಲವನ್ನು ಸೂಚಿಸಿವೆ. ಹಾಗಾಗಿ ಈ ದಿಶೆಯಲ್ಲಿ ಪ್ರಯೋಗಗಳು ಆರಂಭವಾಗಬಹುದು ಎಂದು ಜನಸಾಮಾನ್ಯರು, ವಿಜ್ಞಾನಿಗಳು ಹಾಗೂ ರಾಜಕಾರಣಿಗಳು ನಿರೀಕ್ಷಿಸುತ್ತಿದ್ದಾರೆ.

ಸಾಮಾಜಿಕ ಜಾಲತಾಣಗಳ ಬರಹ ಕಿರು ಓದಿನ ಓದುಗರಿಗಿದು ಸಕಾಲ

ಶೋಭಾ ಎಂ.ಜಿ ಹಳ್ಳಿಕಾರ್

ವಾಟ್ಸಪ್‌ನಲ್ಲಿ ಅದೆಷ್ಟೋ ಅಪರೂಪದ ಸಂಗತಿಗಳು ಬರುತ್ತವೆ. ಟೆಕ್ಸ್ಟ್ ಮೆಸೇಜ್, ವೀಡಿಯೋ, ಫೋಟೋಗಳು, ಇನ್ನೇನೋ ಲಿಂಕ್ಸ್... ಓದುವುದಕ್ಕೆ ನೋಡುವುದಕ್ಕೆ ಅದೆಷ್ಟು ಸಂಗತಿಗಳು, ಅಬ್ಬಾ.. ಪರಿಚಯದ ಹಿರಿಯರೊಬ್ಬರು ಹೇಳುತ್ತಿದ್ದರು. ಎಷ್ಟನ್ನೆಲ್ಲ ನೋಡುವುದು, ಏನೆಲ್ಲಾ ಓದುವುದು? ಹಾಗೆ ಓದಿದರೂ ಪುಸ್ತಕವೊಂದನ್ನು ಕುಳಿತು ಓದಿದ ಅನುಭವವಾಗುವುದಿಲ್ಲ, ಇದು ಅವರ ಮುಂದಿದ್ದ ಸಮಸ್ಯೆ.

ಹೌದು, ಜಗತ್ತು ಕಿರಿದಾಗಿದೆ. ಹೀಗಾಗಿ ನಮ್ಮ ಅಂಗೈಗೇನೇ ಓದಿನ ಸರಕೂ ಸೇರಿದಂತೆ ಬಹಳಷ್ಟು ಬಂದು ಕೂರುತ್ತವೆ. ಬರೀ ವಾಟ್ಸಪ್‌ನಲ್ಲಿ ಹರಿದು ಬಂದು ಮೆಸೇಜ್‌ಗಳು, ಅಲ್ಲೆಲ್ಲೋ ಸಿಕ್ಕ ಲಿಂಕ್ ಮೂಲಕ ಓದುವ ಓದು ಎಲ್ಲವನ್ನೂ ಸೇರಿಸಿದರೂ ದಿನವೊಂದಕ್ಕೆ ನಾವು ಬಹಳಷ್ಟು ಓದಬಹುದು. ಎಷ್ಟೊಂದು ಸುಲಭ, ಪುಸ್ತಕ ಕೊಳ್ಳಬೇಕಿಲ್ಲ, ಹಿಡಿದು ಕೂರಬೇಕಿಲ್ಲ ಅನ್ನುವುದು ಹಲವರಿಗೆ ಇಷ್ಟ ಮತ್ತು ಬಹಳ ಅನುಕೂಲ. ಓದುವುದಕ್ಕೇನೋ ರಾಶಿ ರಾಶಿ ಇರುತ್ತದೆ. ಆದರೆ ಒಂದು ಪುಸ್ತಕ ಓದಿದ ಅನುಭವವಾಗುವುದಿಲ್ಲ ಎಂಬುದು ಮಾತ್ರ ಹೆಚ್ಚಿನವರು ಅನಿಸಿಕೆ, ನಮ್ಮ ಓದು ಎಷ್ಟು ತೆಳುವಾಗುತ್ತಿದೆ ಎಂಬುದನ್ನು ಆ ಅಭಿಪ್ರಾಯಗಳು ಹೇಳುತ್ತದೆ.

ಇದು ಎಲ್ಲರೂ ಬಿಝಿಯಾಗಿರುವ ಕಾಲ. ವೃತ್ತಿ, ವೈಯಕ್ತಿಕ ಬದುಕಿನ ಹಲವು ಬದ್ಧತೆಗಳ ನಡುವೆ ಎಲ್ಲರೂ ಸಮಯದ ಹಿಂದೆ ಓಡುತ್ತಿರುವವರೇ ಎಲ್ಲ, ಹೀಗಾಗಿ ನಡೆವ ದಾರಿಯಲ್ಲಿ ಹೆಚ್ಚಿನವರಿಗೆ ಸುಲಭದಾರಿ ಬೇಕು. ಯಾವುದರಲ್ಲಿ ಬೇಗ ಆಗುತ್ತದೆ ಎಂಬುದರತ್ತಲೇ ಹೆಚ್ಚಿನವರ ಗಮನ. ಓದುವಿಕೆಯೂ ಇದೇ ರೀತಿ ಕಿರು ಅವಧಿಯದ್ದಾಗಿದೆ.

ಈಗೆಲ್ಲ ವಾಟ್ಸಾಪ್, ಫೇಸ್‌ಬುಕ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ವಿಶೇಷ ಮಾಹಿತಿಗಳೇ ಇರುತ್ತವೆ. ಹಲವರು ತಾವು ಓದಿದ್ದನ್ನೇನೋ ಹಂಚಿಕೊಳ್ಳಬಹುದು. ಇನ್ನಾರೋ ಕೃತಿಯೊಂದರ ಬಗ್ಗೆ ವಿಮರ್ಶೆ ಬರೆದಿರಬಹುದು. ಮತ್ತಾರೋ ಚರ್ಚೆಯೊಂದನ್ನು ಹುಟ್ಟುಹಾಕಬಹುದು. ಅದಕ್ಕೆ ಪರ-ವಿರೋಧದ ವಾದಗಳೆರಡೂ ಅಲ್ಲಿಯೇ ದಾಖಲಾಗಿ ಆಸಕ್ತಿದಾಯಕ

ಚರ್ಚೆಯೂ ಮೂಡಿಬರಬಹುದು. ಇವನ್ನೆಲ್ಲ ನೋಡುತ್ತೇವೆ, ಕಣ್ಣಾಡಿಸುತ್ತೇವೆ. ಇಂತವುಗಳ ಮಧ್ಯೆ ಹಾದು ಹೋದಂತೆ ಒಳ್ಳೆಯದೇನೋ ಓದಿದ ಖುಷಿ ನಮ್ಮಲ್ಲಿ ಮೂಡುತ್ತದೆ ನಿಜ, ಆದರೆ ಇವೆಲ್ಲವೂ ನಾವು ಬಯಸುವ ಅಥವಾ ಅಂದುಕೊಳ್ಳುವ ಗಂಭೀರ ಓದು ಆಗಿರುವುದಿಲ್ಲ. ವಾಟ್ಸಪ್ ಗ್ರೂಪ್ ಒಂದರಲ್ಲಿ ಕಾವ್ಯದ ಬಗ್ಗೆ ಕೊಂಚ ಚರ್ಚೆ ಓದಿಕೊಂಡು ಅತ್ತ ಹೊರಳಿದರೆ, ಇನ್ನೊಂದು ಗ್ರೂಪ್‌ನಲ್ಲಿ ಕಥೆಯೊಂದು ಹಾರಿ ಬರಬಹುದು, ಮತ್ತೊಂದು ಗ್ರೂಪ್‌ನಲ್ಲಿ ಫಿಟ್ನೆಸ್ ಬಗ್ಗೆ ಟಿಪ್ಸ್ ಇಬಹುದು. ಇದೇ ವೇಳೆ ಫೇಸ್‌ಬುಕ್‌ನಲ್ಲಿ ಹೊಸ ಕವನವೊಂದು ಎದುರಾಗಬಹುದು. ಹೀಗೆ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಓದಿ ಬಂದಿರುತ್ತೇವಷ್ಟೇ ಹೊರತು, ಒಂದೇ ವಿಷಯದ ಬಗ್ಗೆ ಗಮನವಿಟ್ಟು ಏಕಾಗ್ರತೆಯ ಓದು ಆಗಿರುವುದೇ ಇಲ್ಲ. ಯಾವುದಾದರೊಂದು ವಿಷಯದಲ್ಲಿ ಗಾಢ ಓದು, ಓದಿ ಮುಗಿಸಿದೆ ಎಂಬ ತೃಪ್ತಿ ಸಿಗುವುದೂ ಇಲ್ಲ ಎಂಬುವುದು ಹಲವರ ಅಭಿಪ್ರಾಯ.

ಅಲ್ಲಲ್ಲಿ ಕೈಗೆ ಸುಲಭವಾಗಿ ಮಾಹಿತಿ ಹರಿದು ಬರುವಾಗ ಅದನ್ನು ಓದಿಬಿಡುತ್ತೇವೆ, ಅಂದರೆ ನಮ್ಮ ನಿಜದ ಓದಿನ ಸಮಯ ಇಲ್ಲೇ ಒಂದಷ್ಟು ಸೋರಿ ಹೋದಂತಾಯಿತು. ಇಲ್ಲಿ ಹೋದ ಸಮಯವನ್ನು ಇನ್ನೆಲ್ಲೋ ಸರಿ ಹೊಂದಿಸಬೇಕೆಂದರೆ ಪುಸ್ತಕ ಹಿಡಿದು ಕೂರುವ ಸಮಯವನ್ನು ಕಡಿತಗೊಳಿಸುವುದೇ ಆಗಿರುತ್ತದೆ. ಪುಸ್ತಕದ ಆಳ ಓದು ಕಡಿಮೆಯಾಗುವುದು ಹೀಗೆ ನಮಗೇ ಗೊತ್ತಿಲ್ಲದಂತೆ ನಮ್ಮ ಓದಿನ ರೀತಿ ಬದಲಾಗುವುದು ಹೀಗೆ.

ಸೋಶಿಯಲ್ ಮೀಡಿಯಾದ ಓದಿನ ಹೊರತಾಗಿಯೂ ವಿಸ್ತೃತ ಓದು ನಮ್ಮದಾಗಬೇಕೆಂದರೆ ನಾವು ಆ ಬಗ್ಗೆ ಗಮನಹರಿಸಬೇಕು, ಅದಕ್ಕಾಗಿ ಸಮಯ ಮೀಸಲಿಡಲೇಬೇಕು. ಅಗತ್ಯವಿದ್ದಲ್ಲಿ ಜಾಲತಾಣಗಳಲ್ಲಿ ಅನಗತ್ಯವಾಗಿ ಸಮಯ ಸೋರಿ ಹೋಗುವುದನ್ನು ಕಡಿತಗೊಳಿಸಬೇಕು. ಸೋಶಿಯಲ್ ಮೀಡಿಯದಲ್ಲಿ ಸಿಗುವ ಜ್ಞಾನವೆಂದರೆ ಇಡೀ ಓದಿನ ಲೋಕದ ಪಕ್ಷಿನೋಟವಿದ್ದಂತೆ ಎನ್ನಬಹುದು. ಪಕ್ಷಿ ಎತ್ತರದಲ್ಲಿ ಹಾರುವಾಗ ಕಂಡುದನ್ನು ಇನ್ನಷ್ಟು ಸೂಕ್ಷ್ಮವಾಗಿ ನೋಡಬೇಕೆಂದರೆ ಹತ್ತಿರಕ್ಕೆ ಹೋಗುತ್ತದಲ್ಲವೇ, ನಮ್ಮ ಓದೂ ಅದರಂತೆಯೇ ಇರಬೇಕು. ಜಾಲತಾಣಗಳಲ್ಲಿ ಯಾವುದೋ ಕೃತಿಯ ಬಗ್ಗೆ ಸಿಕ್ಕ ಮಾಹಿತಿ ನಮ್ಮ ಮುಂದಿನ ಓದಿಗೆ ಮಾರ್ಗಸೂಚಿಯಾಗಬೇಕು. ಆ ಕೃತಿಯನ್ನು ಕೈಗೆತ್ತಿ ಓದಲು ಪ್ರೇರಣೆಯಾಗಬೇಕು. ಇಲ್ಲಿನ ಚರ್ಚೆಗಳೇ ನಮ್ಮ ಆಳ ತಿಳಿವಳಿಕೆಗೆ ಸ್ಫೂರ್ತಿಯಾಗಬೇಕು. ಹಾಗಾದಾಗಲಷ್ಟೇ ನಮ್ಮ ಓದು ವಿಸ್ತೃತವಾಗಬಹುದು, ಇಲ್ಲವಾದರೆ ಸೋಶಿಯಲ್ ಮೀಡಿಯಾದ ಕಿರುಓದಿನ ಅಲ್ಪತೃಪ್ತರಾಗಿಯೇ ನಾವು ಉಳಿಯುತ್ತೇವೆ.

ಯಶಸ್ಸಿನ ಏಣಿಯಾಗುವ ಭಾವನಾತ್ಮಕ ಬುದ್ಧಿಮತ್ತೆ

ಮಾಯಾ ಬಾಲಚಂದ್ರ

ಐಕ್ಯೂ ಹೆಚ್ಚಿದ್ದವರು ಮಾತ್ರ ಯಶಸ್ವಿಗಳಾಗುವರು ಎಂಬ ನಂಬಿಕೆ ಹುಸಿಯಾಗಿ, ಬಹಳ ಸಮಯವಾಗಿದೆ. ಹಾಗಿದ್ದರೆ ಭವಿಷ್ಯವನ್ನು ಭವ್ಯವಾಗಿಸುವ ನಿಟ್ಟಿನಲ್ಲಿ, ಎಳೆಯ ವಯಸ್ಸಿನ ಮಕ್ಕಳಲ್ಲಿನ ಯಾವ ದೋಷಗಳನ್ನು ಸರಿಪಡಿಸಬೇಕೆಂದು ಚಿಂತಿಸಿದ ಮನೋವಿಜ್ಞಾನಿಗಳು, ಭಾವನಾತ್ಮಕ ಬುದ್ಧಿ ಮತ್ತೆಗೆ ಹೆಚ್ಚು ಮಹತ್ವ ಕೊಡಲಾರಂಬಿಸಿದ್ದಾರೆ.

ಮನೋವಿಜ್ಞಾನಿಯೊಬ್ಬ ಬಾಲವಾಡಿಯ ಮಕ್ಕಳಲ್ಲಿ, ಒಬ್ಬೊಬ್ಬರನ್ನೇ ಪ್ರತ್ಯೇಕ ಕೊಠಡಿಗೆ ಕರೆದು, ಅವರ ಮುಂದೆ ಆಕರ್ಷಕ ಐಸ್ ಕ್ರೀಮ್‌ಗಳನ್ನು ಇಟ್ಟು 'ಇದನ್ನು ನೀವು ಈಗಲೇ ಬೇಕಾದರೂ ತಿನ್ನಬಹುದು, ನಾನು ಆಚೆ ಹೋಗಿ ಬರುತ್ತೇನೆ, ನಾನು ಬರುವವರೆಗೆ ನೀವು ಇದನ್ನು ಮುಟ್ಟದಿದ್ದರೆ, ನಾನು ತರುವ ಇನ್ನೊಂದು ಐಸ್‌ಕ್ರೀಮ್ ಸಹ ನಿಮಗೆ ಕೊಡುತ್ತೇನೆ' ಎಂದು ಹೇಳಿ ಹೊರಗೆ ಹೋಗುತ್ತಾನೆ. ಆತ ಹೊರಹೋದ ತಕ್ಷಣ, ಮುಗಿಬಿದ್ದು, ಐಸ್‌ಕ್ರೀಮ್ ತಿಂದ ಮಕ್ಕಳು ಕೆಲವರು. ಸ್ವಲ್ಪ ಸಮಯ ತಮ್ಮನ್ನು ನಿಯಂತ್ರಿಸಿಕೊಂಡು, ತಡೆಯಲಾಗದೆ, ಐಸ್‌ಕ್ರೀಮ್‌ಗೆ ದಾಳಿ ಇಟ್ಟವರು ಮತ್ತೆ ಕೆಲವರು. ಏನಾದರೂ ಆಗಲಿ, ಎರಡನೇ ಐಸ್‌ಕ್ರೀಮ್ ಅನ್ನು ಪಡೆಯಲೇಬೇಕೆಂಬ, ಹರಸಾಹಸದಿಂದ ತಮ್ಮನ್ನು ನಿಯಂತ್ರಿಸಿಕೊಂಡು, ಆತ ಮರಳಿ ಬರುವವರೆಗೂ ಕಾದು, ಎರಡನೇ ಐಸ್ ಕ್ರೀಮ್ ಅನ್ನು ಸಹ ಪಡೆದವರು ಇನ್ನೂ ಕೆಲವರು.

ಆ ವಿಜ್ಞಾನಿ ಮುಂದೆ ಪ್ರತೀ ಮೂರು ವರ್ಷಗಳಿಗೊಮ್ಮೆ, ಅದೇ ಮಕ್ಕಳ ಪ್ರಗತಿಯನ್ನು ಗಮನಿಸುತ್ತಾ ಬರುತ್ತಾನೆ. ಪ್ರೌಢಾವಸ್ಥೆ ತಲುಪುವ ವೇಳೆಗೆ, ಎರಡು ಐಸ್‌ಕ್ರೀಮ್ ಪಡೆದ ಮಕ್ಕಳು, ಉಳಿದವರಿಗಿಂತ ಹೆಚ್ಚು ಪ್ರಾಮಾಣಿಕರಾಗಿ, ಸಾಹಸ ಪ್ರವೃತ್ತಿಯವರಾಗಿ, ಆತ್ಮ ವಿಶ್ವಾಸಿಗಳಾಗಿ ಬೆಳೆದಿರುವುದು ಬೆಳಕಿಗೆ ಬರುತ್ತದೆ. ಆತುರದಿಂದ ಒಂದೇ ಐಸ್ ಕ್ರೀಮ್ ತಿಂದ ಮಕ್ಕಳು ಒಂಟಿತನ ಅನುಭವಿಸುತ್ತಾ, ಹಠಮಾರಿಗಳಾಗಿ, ಹತಾಶೆ ವ್ಯಕ್ತಪಡಿಸುತ್ತಾ ಬೆಳೆದಿರುವುದು ಗೋಚರವಾಗುತ್ತದೆ. ಮುಂದೆ ಪ್ರೌಢಿಮೆ ಮಾಪನ (ಸ್ಕೊಲಾಸ್ಟಿಕ್ ಆಪ್ಟಿಟ್ಯೂಡ್ ಟೆಸ್ಟ್-SAT) ಪರೀಕ್ಷೆಯಲ್ಲೂ, ಎರಡು ಐಸ್ಕ್ರೀಂ ಪಡೆದ ಮಕ್ಕಳೇ, ಬೇರೆಲ್ಲರಿಗಿಂತ ಮುಂದಿದ್ದರು. ಇವರದ್ದು ಭಾವನಾತ್ಮಕ ಬುದ್ಧಿಮತ್ತೆ (ಎಮೋಷನಲ್ ಇಂಟಲಿಜೆನ್ಸ್-EQ) ಎಂದು ಗುರುತಿಸಲಾಗಿದೆ. ಇವರು ಅಪ್ರತಿಮ ಚತುರರು ಎಂದೇನೂ ಅಲ್ಲ. ಬುದ್ಧಿಮತ್ತೆ ಅಳೆಯುವ ಪರೀಕ್ಷೆಗಳಲ್ಲಿ ಇವರು ಹೆಚ್ಚಿನ ಸಾಧನೆ ಮಾಡಲಾಗದೆ ಹೋಗಬಹುದು, ಆದರೆ ಇವರು ಬದುಕಿನಲ್ಲಿ, ಉಳಿದವರಿಗಿಂತ ಹೆಚ್ಚು ಯಶಸ್ವಿಗಳಾಗುತ್ತಾರೆ ಎಂದು ಸಾಬೀತಾಗಿದೆ. ಭಾವನೆಗಳಿಂದ ದೂರವಾದ ಬುದ್ಧಿವಂತಿಕೆಗಿಂತ, ಭಾವನಾತ್ಮಕ ಬುದ್ಧಿಮತ್ತೆಗೆ ಹೆಚ್ಚಿನ ಪ್ರಾಶಸ್ತ್ಯ ಸಿಗಬೇಕು ಎನ್ನುವುದು ಮನೋವಿಜ್ಞಾನಿ ಡೇನಿಯಲ್ ಗೋಲ್ ಮನ್ ಮತ್ತು ಕೆಲವರ ಅಭಿಮತ.

ಬಿಟ್ಟುಬಿಡೋಣ ಹಗೆತನ

ಶಂಕರಾನಂದ ಹೆಬ್ಬಾಳ

ಮನುಷ್ಯನ ಸಹಜ ಸ್ವಭಾವಗಳಲ್ಲಿ ಹಗೆಯೂ ಒಂದಾಗಿದೆ. ದ್ವೇಷ ಸಾಧಿಸುವದು, ವಿರಸ ಇಟ್ಟುಕೊಳ್ಳುವುದು, ದ್ವೇಷ, ವೈರತ್ವ, ಸ್ನೇಹವಿಲ್ಲದ ವರ್ತನೆ ಎಂಬುದು ಶಬ್ಧದ ಅರ್ಥ. ಈ ಹಗೆತನದ ಗುಣ ಈಗಿನಿಂದಲ್ಲ, ಪುರಾಣ ಕಾಲದಿಂದಲೂ ಇದೆ ಎಂಬುದನ್ನು ನಾವು ಮನಗಂಡಿದ್ದೇವೆ. ಈ ಗುಣದಿಂದ ಮನಸ್ಸು ಘಾಸಿಗೊಂಡು ಅಧೋಗತಿಗೆ ಇಳಿಯುವುದೇ ಹೊರತು ಉತ್ತುಂಗಕ್ಕೆ ಏರುವುದು ಅಸಾಧ್ಯ. ಹಗೆತನವು ಮನದಲ್ಲಿ ಉದಿಸಿದಾಗ ಯಾರ ಮೇಲೆ ಆಗಿಬರುವುದಿಲ್ಲವೋ ಆ ವ್ಯಕ್ತಿ ಎದುರಾದರೆ ಮಾನಸಿಕ ಅಸಹ್ಯ ಹಾಗೂ ಬೇಸರದ ಭಾವ ಉಂಟಾಗುತ್ತದೆ. ಪಾರಾಣಿಕ ಕಾಲದಲ್ಲಿ ಕೌರವರ ಹಿರಿಯ ಮಗನಾದ ದುರ್ಯೋಧನನ ಬಲಶಾಲಿಯಾಗಿದ್ದರೂ ಪಾಂಡವರ ಮೇಲಿನ ಹಗೆತನದ ಗುಣದಿಂದಲೇ ಮಣ್ಣು ಸೇರಿದನು. ವೈಯಕ್ತಿಕ ದ್ವೇಷ ,ಮಾತ್ಸರ್ಯ ಗುಣದಿಂದ ವ್ಯಕ್ತಿತ್ವದ ಏಳಿಗೆಯು ದುಸ್ತರವೆಂಬುದಕ್ಕೆ ಇದೊಂದು ನಿದರ್ಶನವಷ್ಟೆ.

ಪದಬಂಧ

ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಕೈಯಲ್ಲಿ ಚಿತ್ತಾರ ಮೂಡಿಸಿದ ಗೋರಂಟಿ (4)
4. ಇಂದ್ರಿಯಗಳಿಗೆ ಗೋಚರವಾಗದಿರುವುದು ಕೊನೆಗೆ ದೀರ್ಘವಾಗಿದೆ (4)
6. ಈ ಲೋಹದ ಪಾತ್ರೆಯ ಬಾಯಿ ಅಗಲವಾಗಿದೆ (3)
7. ಮರದಿಂದ ಮಾಡಿದ ಮೆಟ್ಟು (3)
9. ವಿಧಾನಪರಿಷತ್ತು ಮೇಲ್ಮನೆಯಾದರೆ, ವಿಧಾನಸಭೆ ಏನು? (4)
11. ನೆಪದ ದಿಕ್ಕು ತಪ್ಪಿದೆ (3)
13. ಹೋರಾಡು ಎನ್ನುವ ಇನ್ನೊಂದು ಪದ (3)
15. ದೇವತೆಗಳ ತಾಯಿ (3)
17. ಒಳಗೆ ತೂರು ಅಥವಾ ಜಾರು (3)
18. ಸಂಸ್ಕೃತ ಪಂಡಿತರ ಬಾಯಲ್ಲಿದೆ ನೆಲ್ಲಿಕಾಯಿ (4)
20. ಮದುವೆಯ ಗಂಡಲ್ಲ, ಮಗ (3)
22. ಸುವಾಸನೆಯುಳ್ಳ ಒಂದು ಸಂಬಾರ ಪದಾರ್ಥ (3)
24. ಪದಗಳ ಅರ್ಥವನ್ನು ತಿಳಿಸುವ ನಿಘಂಟು (4)
25. ಎಳ್ಳುನೀರು ಬಿಡುವುದು (4)

ಮೇಲಿಂದ ಕೆಳಕ್ಕೆ

2. ಕೆಲಸ ಮಾಡಿ ಉಂಟಾದ ಆಯಾಸ ಅಥವಾ ಸುಸ್ತು (3)
3. ಮುಂದೆ ದೊಡ್ಡ ಮರವಾಗಿ ಬೆಳೆಯಬಲ್ಲ ಸಸಿ (2)
4. ಆಕೆ ಮಾಡಿಕೊಂಡ ವಿಜ್ಞಾಪನೆ (3)
5. ತೀವ್ರವಾದ ಬಾಧೆಯಿದು (3)
7. ದೀರ್ಘಕಾಲ ನೀರು ನಿಂತು ಉಂಟಾದ ಪಾಚಿ (3)
8. ಒಂದು ರೀತಿಯ ಗಡ್ಡೆ (3)
10. ಹೆಂಡತಿ ಅಥವಾ ಪತ್ನಿ (3)
12. ಸಮಾಜ ಅನುಸರಿಸಬೇಕಾದ ನಿಯಮ (3)
14. ತಲೆಕೆಳಗಾಗಿ ಬಂದಿರುವ ಸಾವು (3)
15. ಮನಸ್ಸಿನಲ್ಲಿರುವ ಹಿಂಜರಿಕೆ (3)
16. ಮೂರೆಳೆಯ ಸರ (3)
18. ತಲೆಯೆತ್ತಿ ನೋಡಿದಾಗ ಕಂಡಿದೆ ಆಗಸ (3)
19. ಪೂಜೆ ನೀರು ತುಂಬಿಟ್ಟ ಕೊಡ (3)
21. ಅಸ್ತವ್ಯಸ್ತವಾಗಿ ಬಂದಿರುವ ಮತ್ತೊಂದು ಮೋರೆ (3)
23. ಮಾರ್ಗವೂ ಆಗಬಲ್ಲ ಅವಸ್ಥೆ (2)

ಸರಿಯುತ್ತರಗಳು

ಬಡ ಮಹಿಳೆಯ ಬಡತನ ನೀಗಿಸಿದ ಕನಕಧಾರ ಸ್ತೋತ್ರ

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಬಡತನವನ್ನು ನೀಗಿಸಿ ಐಶ್ವರ್ಯವನ್ನು ಹರಿಸುವ ದಿವ್ಯಸ್ತೋತ್ರವೇ 'ಕನಕಧಾರ ಸ್ತೋತ್ರ'. ಕನಕ ಎಂದರೆ ಬಂಗಾರ, ಧಾರಾ ಎಂದರೆ ಧಾರಾಕಾರ ಮಳೆಯಂತೆ ಸುರಿಯುವುದು. ಅಂದರೆ ಬಂಗಾರದ ಮಳೆಯನ್ನೇ ಸುರಿಸಿದಂತಹ ಮಹಿಮೆಯ ಸ್ತೋತ್ರ. ಈ ಅಪೂರ್ವ ಸ್ತೋತ್ರವನ್ನು ರಚಿಸಿದವರು ಜಗದ್ಗುರು ಆದಿ ಶಂಕರಾಚಾರ್ಯರು.

ಆದಿ ಶಂಕರರು ಕೇರಳದ ಕಾಲಡಿ ಗ್ರಾಮದಲ್ಲಿ ಜನಿಸಿದರು. ಅತೀ ಚಿಕ್ಕ ವಯಸ್ಸಿನಲ್ಲೇ ಅಪಾರ ಬುದ್ಧಿಶಕ್ತಿ, ವೇದಾಧ್ಯಯನ ಮತ್ತು ಶಾಸ್ತ್ರಜ್ಞಾನವನ್ನು ಪಡೆದು, ಸನ್ಯಾಸ ಸ್ವೀಕರಿಸಿ ಪರಿವ್ರಾಜಕಚಾರ್ಯರಾಗಿ ಇಡೀ ಭಾರತವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿದರು. ಅನ್ಯ ಮತೀಯ ತತ್ತ್ವಗಳನ್ನು ತರ್ಕದಿಂದ ಖಂಡಿಸಿ, ಸನಾತನ ಹಿಂದೂ ಧರ್ಮವನ್ನು ಪುನಃ ಪ್ರತಿಷ್ಠಾಪಿಸಿದ ಮಹಾನ್ ದಾರ್ಶನಿಕರು ಅವರು.

ಈ ಕಥೆ ನಡೆದಾಗ ಶಂಕರರಿಗೆ ಕೇವಲ ಐದು ವರ್ಷ. ಆಗಿನ ಕಾಲದಲ್ಲಿ ವಿದ್ಯಾರ್ಥಿಗಳು ಭಿಕ್ಷಾಟನೆಯ ಮೂಲಕವೇ ವಿದ್ಯಾಭ್ಯಾಸ ಮಾಡಬೇಕಿತ್ತು. ಒಂದು ದಿನ ಬಾಲ ಶಂಕರ ಭಿಕ್ಷೆಗಾಗಿ ಒಬ್ಬ ಬಡ ಮಹಿಳೆಯ ಗುಡಿಸಲ ಮುಂದೆ ನಿಂತು, 'ಭವತಿ ಭಿಕ್ಷಾಂ ದೇಹಿ' ಎಂದು ಕೋರಿದನು. ಮನೆಯ ಒಡತಿ ಹೊರಗೆ ಬಂದಳು. ಪುಟ್ಟ ಶಂಕರನ ತೇಜಸ್ಸನ್ನು ಕಂಡು ಅವಳ ಹೃದಯ ತುಂಬಿತು, ಆದರೆ ಅವಳ ಬಡತನ ಮುಖದಲ್ಲೇ ಸ್ಪಷ್ಟವಾಗಿ ಕಾಣುತ್ತಿತ್ತು. ಉಟ್ಟಿದ್ದ ಹರಿದ ಸೀರೆ, ಜೀರ್ಣವಾದ ದೇಹಭಾವ ಅಂತೂ ಅವಳ ಸ್ಥಿತಿ ಅತಿ ದಯನೀಯವಾಗಿತ್ತು. ಎರಡು ದಿನಗಳಿಂದ ಅನ್ನವೇ ಇಲ್ಲ, ಪತಿಯೂ ಭಿಕ್ಷೆಗೆ ಹೋದವನು ಇನ್ನೂ ಮನೆಗೆ ಬಂದಿರಲಿಲ್ಲ. ಕೊಡಲು ಏನೂ ಇಲ್ಲವಲ್ಲ ಎಂಬ ನೋವು ಅವಳನ್ನು ಕಾಡಿತು.

ಆದರೂ, 'ನನ್ನ ಬಾಗಿಲಿಗೆ ಬಂದ ಮಗುವಿಗೆ ಬರಿ ಕೈಯಲ್ಲಿ ಕಳುಹಿಸಬಾರದು' ಎಂಬ ಭಾವದಿಂದ ಮನೆ ಮೂಲೆಮೂಲೆಯನ್ನೂ ಹುಡುಕಿದಳು. ಕೊನೆಗೆ ಹಿತ್ತಲಿನಲ್ಲಿ ಮರದಿಂದ ಬಿದ್ದ ನಾಲ್ಕಾರು ಒಣ ನೆಲ್ಲಿಕಾಯಿಗಳು ಕಂಡವು. ಅದನ್ನೇ ಕೈಯಲ್ಲಿ ಹಿಡಿದು, ಸಂಕೋಚ ಹಾಗೂ ದುಃಖದಿಂದ, 'ಮಗು, ಇದನ್ನು ಹೊರತು ನನಗೆ ಕೊಡಲು ಏನೂ ಇಲ್ಲ' ಎಂದು ಹೇಳಿ, ಅವನ್ನು ಬಾಲ ಶಂಕರನ ಜೋಳಿಗೆಗೆ ಹಾಕಿದಳು.

ಆ ನಿಸ್ವಾರ್ಥ ದಾನವನ್ನು ಕಂಡ ಶಂಕರನ ಹೃದಯ ಕರಗಿತು. ತನಗೆ ತಿನ್ನಲು ಇಲ್ಲದಿದ್ದರೂ, ಇದ್ದುದನ್ನೇ ದಾನ ಮಾಡಿದ ಆ ತಾಯಿಯ ತ್ಯಾಗ ಶಂಕರನನ್ನು ಆಳವಾಗಿ ಸ್ಪರ್ಶಿಸಿತು. ತಕ್ಷಣವೇ ಆಕಾಶದತ್ತ ದೃಷ್ಟಿಸಿ, ತಾಯಿ ಮಹಾಲಕ್ಷ್ಮಿಯನ್ನು



ಸ್ತುತಿಸಿ 22 ಶ್ಲೋಕಗಳ ದಿವ್ಯ ಸ್ತೋತ್ರವನ್ನು ಪಠಿಸಿದನು. ಅದೇ 'ಕನಕಧಾರ ಸ್ತೋತ್ರ'.

ಶಂಕರನ ಭಕ್ತಿಗೆ ಮೆಚ್ಚಿದ ಮಹಾಲಕ್ಷ್ಮಿ ಪ್ರತ್ಯಕ್ಷಳಾಗಿ, 'ಈ ಮಹಿಳೆಯ ಪೂರ್ವಕರ್ಮದ ಕಾರಣ ಬಡತನ ಬರೆಯಲಾಗಿದೆ' ಎಂದಳು. ಆದರೆ ಬಾಲ ಶಂಕರ ವಾದಿಸಿ, 'ಅಮ್ಮಾ, ಇಂದು ಈ ತಾಯಿ ಮಾಡಿದ ನಿಸ್ವಾರ್ಥ ದಾನವೇ ಎಲ್ಲಾ ಕರ್ಮಗಳನ್ನು ಸುಡುವ ಶಕ್ತಿ ಹೊಂದಿದೆ. ಇವಳನ್ನು ಅನುಗ್ರಹಿಸಬೇಕು' ಎಂದು ವಿನಂತಿಸಿದನು.

ಶಂಕರನ ತರ್ಕ ಮತ್ತು ಬಡ ಮಹಿಳೆಯ ಬಗ್ಗೆ ಇದ್ದ ಅಕ್ಕರೆಗೆ ಲಕ್ಷ್ಮಿದೇವಿಯೇ ಸೋತಳು. ಕ್ಷಣದಲ್ಲೇ ಆಕಾಶ ಮೋಡಕವಿದು, ಆ ಬಡ ಮಹಿಳೆಯ ಮನೆಯ ಅಂಗಳದಲ್ಲಿ ಚಿನ್ನದ ನೆಲ್ಲಿಕಾಯಿಗಳ ಮಳೆ ಸುರಿಯಿತು. ಆಕೆಯ ಬಡತನ ಮಾಯವಾಯಿತು.ಈ ಸ್ತೋತ್ರದ ಮಹಿಮೆಯನ್ನು ಗುರುಗಳು ಅರಿತು, 'ಇನ್ನು ಮುಂದೆ ಈ ಸ್ತೋತ್ರವು ಕನಕಧಾರ ಸ್ತೋತ್ರ ಎಂದೇ ಪ್ರಸಿದ್ಧಿಯಾಗಲಿ. ಭಕ್ತಿಯಿಂದ ಪಠಿಸುವವರಿಗೆ ಮಹಾಲಕ್ಷ್ಮಿಯ ಕೃಪೆ ಲಭಿಸಲಿ' ಎಂದು ಆಶೀರ್ವದಿಸಿದರು. ಅಂದಿನಿಂದ ಇಂದಿನವರೆಗೂ, ನಿಸ್ವಾರ್ಥ ಭಕ್ತಿ ಮತ್ತು ಶ್ರದ್ಧೆಯಿಂದ ಕನಕಧಾರ ಸ್ತೋತ್ರವನ್ನು ಪಠಿಸುವವರಿಗೆ ತಾಯಿ ಮಹಾಲಕ್ಷ್ಮಿಯ ಅನುಗ್ರಹ ಸದಾ ದೊರಕುತ್ತಲೇ ಇದೆ.

ಮತ್ತೊಬ್ಬರ ನೋವನ್ನು ಕಂಡು ಅದಕ್ಕಾಗಿ ನಾವು ಭಗವಂತನನ್ನು ಪ್ರಾರ್ಥಿಸಿದಾಗ, ಆ ಪ್ರಾರ್ಥನೆಗೆ ಹೆಚ್ಚು ಬಲವಿರುತ್ತದೆ. ಆದ್ದರಿಂದಲೇ ಶುಭ ಹಾರೈಕೆಗಳು, ಹಿರಿಯರ ಆಶೀರ್ವಾದ ಜೀವನದಲ್ಲಿ ಬಹಳ ಮುಖ್ಯವಾಗುತ್ತದೆ. ಎಲ್ಲವನ್ನು ಪರಿಶ್ರಮದಿಂದ ಗಳಿಸಲು ಕರ್ಮಫಲ ಅಡ್ಡ ಬರಬಹುದು. ಆಗ ಭಗವಂತನ ಕೃಪೆ, ಹಿರಿಯರ ಆಶೀರ್ವಾದ, ಹಿತೈಷಿಗಳ ಶುಭಕಾಮನೆಗಳು ಖಂಡಿತಾ ನಮಗೆ ವರದಂತೆ ಆಗಬೇಕಾದ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸುತ್ತದೆ. ಇಂತಹ ಸಜ್ಜನರು ಬದುಕಿನಲ್ಲಿ ಸದಾ ನಿಮ್ಮ ಸುತ್ತಲೂ ಇರಲಿ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಬಿಲಿಯರ್ಡ್ಸ್ ಚಾಂಪಿಯನ್ ಮನೋಜ್ ಕೊಠಾರಿ ನಿಧನ

ಕೋಲ್ಕತ್ತ: ವಿಶ್ವ ಬಿಲಿಯರ್ಡ್ಸ್ ಮಾಜಿ ಚಾಂಪಿಯನ್ ಮನೋಜ್ ಕೊಠಾರಿ ಅವರು ಹೃದಯಾಘಾತದಿಂದಾಗಿ ಸೋಮವಾರ ಮೃತಪಟ್ಟಿದ್ದಾರೆ, ಅವರಿಗೆ 67 ವರ್ಷ ವಯಸ್ಸಾಗಿತ್ತು. ಅವರ ಕುಟುಂಬವು ಕೋಲ್ಕತ್ತದಲ್ಲಿ ನೆಲಸಿತ್ತು. 'ಮನೋಜ್ ಅವರು ಯಕೃತ್ತಿನ ಕಸಿ ಮಾಡಿಸಿಕೊಳ್ಳಲು ತಮಿಳುನಾಡಿನ ತಿರುನಲ್ವೇಲಿಯಲ್ಲಿರುವ ಕಾವೇರಿ ಆಸ್ಪತ್ರೆಗೆ ದಾಖಲಾಗಿದ್ದರು. 10 ದಿನಗಳ ಹಿಂದೆ ಯಶಸ್ವಿಯಾಗಿ ಯಕೃತ್ತಿನ ಕಸಿ ಮಾಡಲಾಗಿತ್ತು. ಆದರೆ ಸೋಮವಾರ ಬೆಳಿಗ್ಗೆ ಹಠಾತ್ ಹೃದಯಾಘಾತ ಉಂಟಾಗಿ ಕೊನೆಯುಸಿರೆಳೆದರು ಎಂದು ಕುಟುಂಬದವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಮನೋಜ್ ಅವರು ಬೆಂಗಳೂರಿನಲ್ಲಿ 1990ರಲ್ಲಿ ನಡೆದ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್ ಪ್ರಶಸ್ತಿ ಗೆದ್ದುಕೊಂಡಿದ್ದರು. ಅವರ ಮಾರ್ಗದರ್ಶನದಲ್ಲಿ ಪುತ್ರ ಸೌರವ್ ಅವರೂ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್ ಪ್ರಶಸ್ತಿ ಜಯಿಸಿದ್ದಾರೆ

ಎಸ್‌ಐಆರ್ ವಿಚಾರಣೆ: ಶಮಿ ಹಾಜರಿಗೆ ಸೂಚನೆ

ಕೋಲ್ಕತ್ತ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ವಿಚಾರಣೆಗೆ ಹಾಜರಾಗುವಂತೆ ಟೀಮ್ ಇಂಡಿಯಾ ಆಟಗಾರ ಮೊಹಮ್ಮದ್ ಶಮಿ ಅವರಿಗೆ ಸೂಚಿಸಲಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸೋಮವಾರ ಜಾದವ್‌ಪುರದಲ್ಲಿ ವಿಚಾರಣೆಗೆ ಹಾಜರಾಗುವಂತೆ ಮೊಹಮ್ಮದ್ ಶಮಿ ಅವರಿಗೆ ಸೂಚಿಸಲಾಗಿತ್ತು. ಆದರೆ ಅವರು ರಾಜ್‌ಕೋಟ್‌ನಲ್ಲಿ ವಿಜಯ್ ಹಜಾರೆ ಟ್ರೋಫಿಯಲ್ಲಿ ಬಂಗಾಳ ತಂಡವನ್ನು ಪ್ರತಿನಿಧಿಸುತ್ತಿರುವುದರಿಂದ ವಿಚಾರಣೆಗೆ ಹಾಜರಾಗಿರಲಿಲ್ಲ. 'ಬೇರೆ ದಿನದಂದು ವಿಚಾರಣೆಗೆ ಹಾಜರಾಗುವುದಾಗಿ ಚುನಾವಣಾ ಆಯೋಗಕ್ಕೆ ಶಮಿ ಮನವಿ ಮಾಡಿದ್ದರು, ಆ ಹಿನ್ನೆಲೆಯಲ್ಲಿ ಜನವರಿ 9ರಿಂದ 11ರೊಳಗೆ ವಿಚಾರಣೆಗೆ ಹಾಜರಾಗುವಂತೆ ದಿನಾಂಕ ಮರು ನಿಗದಿ ಮಾಡಲಾಗಿದೆ ಎಂದು ಅಧಿಕಾರಿ ವಿವರಿಸಿದ್ದಾರೆ. ಉತ್ತರ ಪ್ರದೇಶ ಮೂಲದ ಶಮಿ ಅವರು ಕ್ರಿಕೆಟ್ ವೃತ್ತಿಜೀವನದ ಕಾರಣದಿಂದಾಗಿ ಹಲವು ವರ್ಷಗಳಿಂದ ಕೋಲ್ಕತ್ತದಲ್ಲಿ ವಾಸಿಸುತ್ತಿದ್ದು, ಅಲ್ಲಿನ ಮಹಾನಗರ ಪಾಲಿಕೆಯ ವಾರ್ಡ್ 93ರಲ್ಲಿ ಮತದಾರರಾಗಿದ್ದಾರೆ. ಗಣತಿ ನಮೂನೆಯನ್ನು ಶಮಿ ತಪ್ಪಾಗಿ ಭರ್ತಿ ಮಾಡಿದ್ದು, ಅದಕ್ಕಾಗಿಯೇ ಅವರನ್ನು ವಿಚಾರಣೆಗೆ ಕರೆಯಲಾಗಿದೆ ಎಂದೂ ಚುನಾವಣಾಧಿಕಾರಿ ತಿಳಿಸಿದ್ದಾರೆ.

ವಿಜಯ್ ಹಜಾರೆ ಕ್ರಿಕೆಟ್: ಮಾಯಾಂಕ್ ಶತಕ
ರಾಜಸ್ಥಾನ ವಿರುದ್ಧ ರಾಜ್ಯ ತಂಡಕ್ಕೆ ಭರ್ಜರಿ ಗೆಲುವು

ಕ್ವಾರ್ಟರ್ ಫೈನಲ್‌ಗೆ ಕರ್ನಾಟಕ ಲಗ್ಗೆ

ಅಹಮದಾಬಾದ್: ವಿಜಯ್ ಹಜಾರೆ ರಾಷ್ಟ್ರೀಯ ಏಕದಿನ ಟೂರ್ನಿಯಲ್ಲಿ ಮಾಯಾಂಕ್ ಅಗರ್ವಾಲ್ ನೇತೃತ್ವದ ಕರ್ನಾಟಕ ತಂಡವು ಸತತ ಆರನೇ ಗೆಲುವು ದಾಖಲಿಸುವ ಮೂಲಕ ಅಜೇಯವಾಗಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟಿದೆ. 'ಎ' ಗುಂಪಿನ ಪಂದ್ಯದಲ್ಲಿ ಮಂಗಳವಾರ ರಾಜಸ್ಥಾನ ಎದುರು ರಾಜ್ಯ ತಂಡವು 150 ರನ್‌ಗಳ ಭರ್ಜರಿ ಗೆಲುವು ದಾಖಲಿಸಿ ಅಗ್ರಸ್ಥಾನಿಯಾಗಿ ನಾಕೌಟ್ ಹಂತಕ್ಕೇರುವಲ್ಲಿ ಯಶಸ್ವಿಯಾಗಿದೆ.

ಕರ್ನಾಟಕದ ಉತ್ತಮ ಆರಂಭ: ಮೊದಲು ಬ್ಯಾಟ್ ಮಾಡಿದ ಕರ್ನಾಟಕ ತಂಡವು ಉತ್ತಮ ಆರಂಭವನನು ಪಡೆಯಿತು. ಮೊದಲ ವಿಕೆಟ್‌ಗೆ ನಾಯಕ ಮಾಯಾಂಕ್ ಅಗರ್ವಾಲ್ ಹಾಗೂ ದೇವದತ್ ಪಡಿಕ್ಕಲ್ 184 ರನ್‌ಗಳ ಜತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿಕೊಟ್ಟರು. ಉತ್ತಮ ಫಾರ್ಮ್‌ನಲ್ಲಿರುವ ದೇವದತ್ ಪಡಿಕ್ಕಲ್ ಈ ಟೂರ್ನಿಯಲ್ಲಿ ಐದನೇ ಶತಕ ಸಿಡಿಸುವ ಅವಕಾಶವನ್ನು ಕಳೆದುಕೊಂಡರು. ಪಡಿಕ್ಕಲ್ ಕೇವಲ 82 ಎಸೆತಗಳಲ್ಲಿ 12 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 91 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಮತ್ತೊಂದು ತುದಿಯಲ್ಲಿ ನಾಯಕನ ಆಟ ಪ್ರದರ್ಶಿಸಿದ ಮಾಯಾಂಕ್ ಅಗರ್ವಾಲ್ 107 ಎಸೆತಗಳನ್ನು ಎದುರಿಸಿ 9 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 100 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇನ್ನುಳಿದಂತೆ ಅಭಿನವ್ ಮನೋಹರ್ 35 ರನ್ ಗಳಿಸಿದರೆ, ಕೆಎಲ್ ರಾಹುಲ್ ಮತ್ತೊಮ್ಮೆ ಸಾಧಾರಣ ಮೊತ್ತಕ್ಕೆ (25) ವಿಕೆಟ್ ಒಪ್ಪಿಸುವ ಮೂಲಕ ನಿರಾಸೆ ಅನುಭವಿಸಿದರು. ಅಂತಿಮವಾಗಿ ಕರ್ನಾಟಕ ತಂಡವು ನಿಗದಿತ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 324 ರನ್‌ಗಳ ಬೃಹತ್ ಮೊತ್ತ ಕಲೆ ಹಾಕಿತು.

ಕಠಿಣ ಗುರಿ ಬೆನ್ನತ್ತಿದ ರಾಜಸ್ಥಾನ ತಂಡವು ಕರ್ನಾಟಕದ ವೇಗಿ ಪ್ರಸಿದ್ಧ್ ಕೃಷ್ಣ ಮಾರಕ ದಾಳಿಗೆ ತತ್ತರಿಸಿ ಕೇವಲ 174 ರನ್‌ಗಳಿಗೆ ಸರ್ವಪತನ ಕಂಡಿತು. ರಾಜಸ್ಥಾನ ಪರ ಕರಣ್ ಲಾಂಬಾ (55) ಹೊರತುಪಡಿಸಿ ಉಳಿದ್ಯಾವ ಬ್ಯಾಟರ್‌ಗಳು ಕನಿಷ್ಠ 30 ರನ್ ಬಾರಿಸಲು ಯಶಸ್ವಿಯಾಗಲಿಲ್ಲ. ದೀಪಕ್ ಹೂಡಾ 29 ರನ್ ಗಳಿಸಿದ್ದೇ ರಾಜಸ್ಥಾನ ಪರ ಎರಡನೇ ಗರಿಷ್ಠ ವೈಯುಕ್ತಿಕ ಸ್ಕೋರ್ ಎನಿಸಿಕೊಂಡಿತು.

ಕರ್ನಾಟಕ ತಂಡದ ಪರ ಮಾರಕ ದಾಳಿ ನಡೆಸಿದ ಪ್ರಸಿದ್ಧ್ ಕೃಷ್ಣ ಕೇವಲ 36 ರನ್ ನೀಡಿ 5 ವಿಕೆಟ್ ಪಡೆದರೆ, ಶ್ರೇಯಸ್ ಗೋಪಾಲ್ ಹಾಗೂ ಶ್ರೀಶಾ ಆಚಾರ್ ತಲಾ ಎರಡು ವಿಕೆಟ್ ಪಡೆದರು. ವೈಶಾಕ್ ವಿಜಯ್ ಕುಮಾರ್ ಒಂದು ವಿಕೆಟ್ ಪಡೆದರು.

ಪಡಿಕ್ಕಲ್ ಹೊಸ ದಾಖಲೆ

26 ವಯಸ್ಸಿನ ರಾಜ್ಯ ತಂಡದ ದೇವದತ್ ಪಡಿಕ್ಕಲ್ ಅವರು ವಿಜಯ ಹಜಾರೆ ಟ್ರೋಫಿ ಟೂರ್ನಿಯ ಈ ಋತುವಿನಲ್ಲಿ ಆಡಿದ ಆರು ಪಂದ್ಯಗಳಲ್ಲಿ ಒಟ್ಟು 605 ರನ್ ಗಳಿಸಿದ್ದಾರೆ. ಇದರೊಂದಿಗೆ ಅವರು ಮೂರು ವಿಭಿನ್ನ ವಿಜಯ ಹಜಾರೆ ಟ್ರೋಫಿ ಋತುಗಳಲ್ಲಿ 600 ಅಥವಾ ಅದಕ್ಕಿಂತ ಹೆಚ್ಚು ರನ್ ಗಳಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿ ಕೆಗೆ ಪಾತ್ರರಾಗಿದ್ದಾರೆ. ಇಲ್ಲಿಯವರೆಗೆ ಬೇರೆ ಯಾವುದೇ ಬ್ಯಾಟ್ಸ್‌ಮನ್ ಈ ದಾಖಲೆಯನ್ನು ಬರೆದಿಲ್ಲ.

ಫೆ.14ರಿಂದ ಐಎಸ್‌ಎಲ್ ಫುಟ್ಬಾಲ್ ಟೂರ್ನಿ

ದೆಹಲಿ: ಬಹುನಿರೀಕ್ಷಿತ 2025-26ರ ಸಾಲಿನ ಇಂಡಿಯನ್ ಸೂಪರ್ ಲೀಗ್ ಫುಟ್ಬಾಲ್ ಟೂರ್ನಿಯು ಫೆಬ್ರವರಿ 14ರಂದು ಪ್ರಾರಂಭವಾಗಲಿದೆ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಮಂಗಳವಾರ ಘೋಷಿಸಿದ್ದಾರೆ. ವಾಣಿಜ್ಯ ಪಾಲುದಾರ (ಪ್ರಾಯೋಜಕರು) ಇಲ್ಲದ ಕಾರಣ ಐಎಸ್‌ಎಲ್ ಸ್ಥಗಿತಗೊಂಡಿತು. ಆದರೆ ಇದೀಗ ಎಲ್ಲಾ 14 ಕ್ಲಬ್‌ಗಳು 2025-26ರ ಐಎಸ್‌ಎಲ್ ಟೂರ್ನಿಯಲ್ಲಿ ಭಾಗವಹಿಸಲಿವೆ. ಮುಂದೂಡಲ್ಪಟ್ಟ ಐ-ಲೀಗ್ ಕೂಡ ಐಎಸ್‌ಎಲ್‌ನಂತೆಯೇ ನಡೆಯಲಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

'ಫುಟ್ಬಾಲ್ ಫೆಡರೇಶನ್ ಮತ್ತು ಮೋಹನ್ ಬಗಾನ್ ಹಾಗೂ ಈಸ್ಟ್ ಬಂಗಾಳ ಸೇರಿದಂತೆ 14 ಕ್ಲಬ್‌ಗಳು ಸಭೆ ನಡೆಸಿ ಐಎಸ್‌ಎಲ್ ಫೆಬ್ರವರಿ 14ರಂದು ಟೂರ್ನಿಯನ್ನು ಆರಂಭಿಸುವ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದರು.

ಶತಕ ಬಾರಿಸಿ ದಾಖಲೆ ಮುರಿದ ಆಸ್ಟ್ರೇಲಿಯಾ ನಾಯಕ ಸ್ಟೀವ್ ಸ್ಮಿತ್

ಆ್ಯಷಸ್ ಟೆಸ್ಟ್: ಆಸೀಸ್‌ಗೆ ಮುನ್ನಡೆ

ಸಿಡ್ನಿ: ಆಸ್ಟ್ರೇಲಿಯಾ ತಂಡದ ನಾಯಕ ಹಾಗೂ ಹಿರಿಯ ಬ್ಯಾಟ್ಸ್‌ಮನ್ ಸ್ಟೀವ್ ಸ್ಮಿತ್ ಇಂಗ್ಲೆಂಡ್ ವಿರುದ್ಧ ಐದನೇ ಹಾಗೂ ಆ್ಯಷಸ್ ಟ್ರೋಫಿ ಟೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಶತಕ ಬಾರಿಸಿದ್ದಾರೆ. ಈ ಮೂಲಕ ಅವರು 96 ವರ್ಷಗಳ ಇಂಗ್ಲೆಂಡ್ ಮಾಜಿ ಬ್ಯಾಟ್ಸ್‌ಮನ್ ಜ್ಯಾಕ್ ಹಾಬ್ಸ್ ಅವರ ಹಳೆಯ ದಾಖಲೆಯೊಂದನ್ನು ಮುರಿದಿದ್ದಾರೆ. ಸ್ಟೀವ್ ಸ್ಮಿತ್‌ಗೂ ಮುನ್ನ ಟ್ರಾವಿಸ್ ಹೆಡ್ ಈ ಪಂದ್ಯದಲ್ಲಿ ಸ್ಫೋಟಕ ಶತಕವನ್ನು ಬಾರಿಸಿದ್ದರು. ಇವರಿಬ್ಬರ ಶತಕಗಳ ಬಲದಿಂದ ಆಸ್ಟ್ರೇಲಿಯಾ ತಂಡ ಐದನೇ ಟೆಸ್ಟ್ ಪಂದ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದೆ.

ಮೂರನೇ ದಿನ ಟ್ರಾವಿಸ್ ಹೆಡ್, ಶತಕವನ್ನು ಬಾರಿಸಿದ ಬಳಿಕ 163 ರನ್‌ಗಳ ಮೂಲಕ ತಮ್ಮ ಇನ್ನಿಂಗ್ಸ್ ಮುಗಿಸಿದರು. ಆದರೆ ಮಧ್ಯಮ ಕ್ರಮಾಂಕದಲ್ಲಿ ಸ್ಮಿತ್ ಅದ್ಭುತವಾಗಿ ಬ್ಯಾಟ್ ಮಾಡಿದ್ದು, ದಿನದಾಟದ ಅಂತ್ಯಕ್ಕೆ 205 ಎಸೆತಗಳಲ್ಲಿ ಒಂದು ಸಿಕ್ಸರ್ ಹಾಗೂ 15 ಸೊಗಸಾದ ಬೌಂಡರಿಗಳೊಂದಿಗೆ ಅಜೇಯ 129 ರನ್ ಕಲೆ ಹಾಕಿದ್ದಾರೆ. ಆ ಮೂಲಕ ನಾಲ್ಕನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಆಸ್ಟ್ರೇಲಿಯಾ ತಂಡ ಪ್ರಥಮ ಇನಿಂಗ್ಸ್‌ನಲ್ಲಿ 124 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 518 ರನ್ ಗಳಿದ್ದು, 134 ರನ್ ಮುನ್ನಡೆ ಪಡೆದಂತಾಗಿದೆ.

ಸ್ಟೀವ್ ಸ್ಮಿತ್ ವಿಶಿಷ್ಟ ದಾಖಲೆ: ಆ್ಯಷಸ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಸ್ಟೀವ್ ಸ್ಮಿತ್ ಅವರ 12ನೇ ಶತಕ ಇದಾಗಿದ್ದು, ಸರಣಿಯ ಇತಿಹಾಸದಲ್ಲಿ ಅವರು 27 ಬಾರಿ 50ಕ್ಕೂ ಅಧಿಕ ರನ್‌ಗಳನ್ನು ಕಲೆ ಹಾಕಿದ್ದು, ಆ ಮೂಲಕ ಆ್ಯಷಸ್‌ನಲ್ಲಿ ಎರಡನೇ ಅತಿ ಹೆಚ್ಚು ಬಾರಿ 50ಕ್ಕೂ ಅಧಿಕ ರನ್ ಬಾರಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಜ್ಯಾಕ್ ಹಾಬ್ಸ್ ಕೂಡ ಇಷ್ಟೇ ಬಾರಿ 50ಕ್ಕೂ ಅಧಿಕ ರನ್ ಗಳಿಸಿದ್ದಾರೆ. 31 ಬಾರಿ 50ಕ್ಕೂ ಅಧಿಕ ರನ್ ಗಳಿಸಿದ ಡಾನ್ ಬ್ರಾಡ್ಮನ್ ಈ ಸಾಲಿನಲ್ಲಿ ಅಗ್ರಸ್ಥಾನ ಅಲಂಕರಿಸಿದ್ದಾರೆ.

ಹಜಾರೆ ಟ್ರೋಫಿ: 154 ಬಾಲ್‌ಗಳಲ್ಲಿ ದ್ವಿಶತಕ ಗಳಿಸಿದ ಬ್ಯಾಟರ್ | ಬಂಗಾಳ ವಿರುದ್ಧದ ಪಂದ್ಯ

ಹೈದರಾಬಾದ್‌ನ ಅಮನ್ ರಾವ್ ದ್ವಿಶತಕ

ದೆಹಲಿ: ವಿಜಯ ಹಜಾರೆ ಟ್ರೋಫಿ ಟೂರ್ನಿಯ ಮಂಗಳ ವಾರದ ಪಂದ್ಯದಲ್ಲಿ ಹೈದರಾಬಾದ್ ತಂಡದ ಬ್ಯಾಟ್ಸ್‌ಮನ್ ಅಮನ್ ರಾವ್ ದ್ವಿಶತಕ ಬಾರಿಸಿ ಎಲ್ಲರ ಗಮನವನ್ನು ಸೆಳೆದಿದ್ದಾರೆ. ಬಂಗಾಳ ವಿರುದ್ಧ ನಡೆದ ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿದ ಅಮನ್ ರಾವ್ 154 ಎಸೆತಗಳಲ್ಲಿ 13 ಸಿಕ್ಸರ್ ಹಾಗೂ 12 ಬೌಂಡರಿಗಳೊಂದಿಗೆ 200 ರನ್ ಗಳಿಸಿದರು

ರಾಜಕೋಟ್‌ನ ನಿರಂಜನ್ ಶಾ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಹೈದರಾಬಾದ್ ತಂಡದ ಪರ ಇನ್ನಿಂಗ್ಸ್ ಆರಂಭಿಸಿದ್ದ ಅಮನ್ ರಾವ್, ಭರ್ಜರಿ ಆಟವನ್ನು ಪ್ರದರ್ಶಿಸಿದರು. 21ನೇ ವಯಸ್ಸಿನ ಅಮನ್, ಪಂದ್ಯದಲ್ಲಿ ಕೊನೆಯ ಒಂದು ಎಸೆತ ಬಾಕಿ ಇರುವಾಗ 194 ರನ್ ಗಳಿಸಿ, ದ್ವಿಶತಕ ಪೂರೈಸಲು 6 ರನ್ ಅಗತ್ಯವಿತ್ತು. ಬಳಿಕ ಕೊನೆಯ ಎಸೆತದಲ್ಲಿ ಸಿಕ್ಸರ್ ಬಾರಿಸಿ, ವಿಜಯ್ ಹಜಾರೆ ಟ್ರೋಫಿಯಲ್ಲಿ ತಮ್ಮ ಚೊಚ್ಚಲ ದ್ವಿಶತಕವನ್ನು ದಾಖಲಿಸಿದರು. ಅವರ ದ್ವಿಶತಕದ ಬಲದಿಂದ ಹೈದರಾಬಾದ್ ತಂಡ ತನ್ನ ಪಾಲಿನ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 352 ರನ್‌ಗಳನ್ನು ಕಲೆ ಹಾಕಿತ್ತು.

ಅಂಡರ್-23ರ ರಾಜ್ಯ ಟೂರ್ನಿಯಲ್ಲಿ ಆಡಿದ್ದ ಅಮನ್ ರಾವ್, 6 ಪಂದ್ಯಗಳಿಂದ 63.5 ಸರಾಸರಿಯಲ್ಲಿ ಒಟ್ಟು 381 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ ಅವರು ಒಂದು ಶತಕ ಹಾಗೂ ಮೂರು ಅರ್ಧಶತಕಗಳು ಒಳಗೊಂಡಿವೆ. ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ಮುಂಬೈ ವಿರುದ್ಧದ ಪಂದ್ಯದಲ್ಲೂ ಅವರು ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದರು.

ಹಜಾರೆ ಟ್ರೋಫಿಯಲ್ಲಿ ಹಿಮಾಚಲ ವಿರುದ್ಧ 82 ರನ್ ಗಳಿಸಿದ ಮುಂಬೈ ನಾಯಕ

ಮತ್ತೆ ಫಾರ್ಮ್‌ಗೆ ಮರಳಿದ ಅಯ್ಯರ್

ಜೈಪುರ: ನ್ಯೂಜಿಲೆಂಡ್ ವಿರುದ್ಧ ಇದೇ ತಿಂಗಳಿನಲ್ಲಿ ಆರಂಭವಾಗಲಿರುವ ಏಕದಿನ ಸರಣಿಯಲ್ಲಿ ಕಣಕ್ಕಿಳಿಯಲು ಶ್ರೇಯಸ್ ಅಯ್ಯರ್ ತಮ್ಮ ಫಿಟ್ನೆಸ್ ಅನ್ನು ಸಾಬೀತುಪಡಿಸಬೇಕಾಗಿತ್ತು. ಮಂಗಳವಾರದಂದು ಅವರು ವಿಜಯ್ ಹಜಾರೆ ಟ್ರೋಫಿ ಪಂದ್ಯದಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿ, ಭಾರ ತಂಡದ ತನ್ನ ಆಯ್ಕೆಯನ್ನು ಸಮರ್ಥಿಸಿಕೊಂಡರು.

ಮುಂಬೈ ತಂಡದ ಪರ ನಾಲ್ಕನೇ ಸ್ಥಾನದಲ್ಲಿ ಬ್ಯಾಟಿಂಗ್ ಮಾಡಿದ ಶ್ರೇಯಸ್ ಅಯ್ಯರ್, ಹಿಮಾಚಲ ಪ್ರದೇಶ ವಿರುದ್ಧ ಮೊದಲ 36 ಎಸೆತಗಳಲ್ಲಿ 50 ರನ್ ಗಳಿಸಿದರು. ಆದರೆ ದುರದೃಷ್ಟವಶಾತ್ ತಮ್ಮ ಶತಕ ವಂಚಿತರಾದರು. ಅವರು 53 ಎಸೆತಗಳಲ್ಲಿ 10 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ 82 ರನ್ ಗಳಿಸಿ ಮಿಂಚಿದರು.

ಹಿಮಾಚಲ ಪ್ರದೇಶ ವಿರುದ್ಧದ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಮುಂಬೈ ತಂಡದ ನಾಯಕತ್ವ ವಹಿಸಿದ್ದರು. ಯಶಸ್ವಿ ಜೈಸ್ವಾಲ್ (15) ಮತ್ತು ಸರ್ಫರಾಜ್ ಖಾನ್ (21) ಅವರನ್ನು ಬೇಗನೆ ಕಳೆದುಕೊಂಡ ನಂತರ ಅವರು ಮುಶೀರ್ ಖಾನ್ ಅವರೊಂದಿಗೆ ಎಚ್ಚರಿಕೆಯಿಂದ ಜತೆಯಾಟವಾಡಿದರು. ಶ್ರೇಯಸ್ ತಮ್ಮ ಮೊದಲ 16 ಎಸೆತಗಳಲ್ಲಿ ಕೇವಲ 6 ರನ್ ಗಳಿಸಿದರು. ಆದರೆ ಅದಾದ ಬಳಿಕ ಮೈದಾನದಾದ್ಯಂತ ಬೌಂಡರಿ, ಸಿಕ್ಸರ್ ಸುರಿಮಳೆಗೈದರು.

ಕಳೆದ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ಪ್ರವಾಸದ ಸಮಯದಲ್ಲಿ ಶ್ರೇಯಸ್ ಅಯ್ಯರ್ ಗಂಭೀರ ಗಾಯಗೊಂಡಿದ್ದರು. ಸಿಡ್ನಿಯಲ್ಲಿ ನಡೆದ ಸರಣಿಯ ಮೂರನೇ ಮತ್ತು ಅಂತಿಮ ಏಕದಿನ ಪಂದ್ಯದಲ್ಲಿ ಕ್ಯಾಚ್ ಹಿಡಿಯಲು ಪ್ರಯತ್ನಿಸುವಾಗ, ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಇದರಿಂದಾಗಿ ಅವರ ದೇಹದೊಳಗೆ ರಕ್ತಸ್ರಾವವಾಗಿ, ಅವರ ಸ್ಥಿತಿ ಗಂಭೀರವಾಯಿತು. ಐಸಿಯುನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದ ನಂತರ, ಅವರಿಗೆ ಎಚ್ಚರಿಕೆಯಿಂದ ಪುನರ್ವಸತಿಗೆ ಒಳಗಾಗಲು ಸೂಚಿಸಲಾಯಿತು. ಕನಿಷ್ಠ ಆರು ತಿಂಗಳ ಕಾಲ ಕ್ರಿಕೆಟ್‌ನಿಂದ ಹೊರಗುಳಿಯುತ್ತಾರೆ ಎಂದು ವರದಿಗಳಾಗಿದ್ದವು, ಆದರೆ ಶ್ರೇಯಸ್ ಅಯ್ಯರ್ ಕೇವಲ ಎರಡೂವರೆ ತಿಂಗಳಲ್ಲಿ ಉತ್ತಮ ಫಾರ್ಮ್‌ಗೆ ಮರಳುವ ಮೂಲಕ ಎಲ್ಲರನ್ನು ಅಚ್ಚರಿಗೊಳಿಸಿದ್ದಾರೆ.



ಗ್ಲಾಮರ್ ಲುಕ್‌ನಲ್ಲಿ ರುಕ್ಮಿಣಿ

ಕಾಂತಾರದ ಸುಂದರಿ ರುಕ್ಮಿಣಿ ವಸಂತ್, ಯಶ್ ಅಭಿನಯದ ಬಹುನಿರೀಕ್ಷಿತ ಟಾಕ್ಸಿಕ್ ಚಿತ್ರದಲ್ಲಿಯೂ ಅಭಿನಯಿಸಿದ್ದಾರೆ. ಅವರ ಈಗ ಪಾತ್ರದ ಫಸ್ಟ್ ಲುಕ್ ಈಗ ರಿಲೀಸ್ ಆಗಿದೆ. ಈ ಹಿಂದೆ ಟಾಕ್ಸಿಕ್ ಚಿತ್ರದಲ್ಲಿ ಅಭಿನಯಿಸಿದ್ದ ತಾರಾ ಸುತಾರಿ ಅವರ ಪೋಸ್ಟ್ ರಿಲೀಸ್ ಮಾಡಿದ್ದ ಚಿತ್ರತಂಡ, ಈಗ ರುಕ್ಮಿಣಿ ಅವರ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಮಾಡಿದೆ. ಇದರಲ್ಲಿ ರುಕ್ಮಿಣಿ ಮೆಲಿಸಾ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಯಾವುದೋ ಪಾರ್ಟಿಯ ಸಂದರ್ಭದಲ್ಲಿ ಗಂಭೀರವಾಗಿ ನಡೆದು ಬರುತ್ತಿರುವ ರುಕ್ಮಿಣಿ ಲುಕ್ ಅದ್ಭುತವಾಗಿದೆ. ಅವರ ಕೈಯಲ್ಲಿ ಒಂದು ಪರ್ಸ್ ಇದೆ ಈ ಪೋಸ್ಟರ್ ನೋಡಿದರೆ ರುಕ್ಮಿಣಿ ನೆಗೆಟಿವ್ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದಾರಾ ಎಂದು ಅನ್ನಿಸುತ್ತದೆ.

ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು, ಗೀತು ಮೋಹನ್‌ದಾಸ್ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಯಶ್ ಅಂಡರ್‌ವರ್ಲ್ಡ್ ಡಾನ್ ಆಗಿ ಕಾಣಿಸಿಕೊಂಡಿದ್ದು, ಭರ್ಜರಿಯಾಗಿ ಮಿಂಚಿದ್ದಾರೆ. ಈ ಹಿಂದೆಯೇ ಬಿಡುಗಡೆಯಾಗಿದ್ದ ಟಾಕ್ಸಿಕ್ ಚಿತ್ರದ ಗ್ಲಿಂಪ್ಸ್‌ನಲ್ಲಿ ಯಶ್ ಅವರನ್ನು ನೋಡಿ ಅಭಿಮಾನಿಗಳು ಖುಷಿಯಾಗಿದ್ದರು. ಬಾಲಿವುಡ್ ಬ್ಯೂಟಿ ಕಿಯಾರಾ ಅಡ್ವಾಣಿ, ಹುಮಾ ಖುರೇಷಿ, ನಯನತಾರಾ, ತಾರಾ ಸುತಾರಿಯ ಹೀಗೆ ಸ್ಟಾರ್ ನಟಿಯರ ದಂಡೇ ಚಿತ್ರದಲ್ಲಿದೆ. ಮಾತ್ರವಲ್ಲ ಬಾಲಿವುಡ್, ಹಾಲಿವುಡ್‌ನ ದಿಗ್ಗಜರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಟಾಕ್ಸಿಕ್ ಹೈಬಜೆಟ್ ಸಿನಿಮಾವಾಗಿದ್ದ ಕೆವಿಎನ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗಿದೆ. ಯಶ್ ಕೂಡ ನಿರ್ಮಾಣದಲ್ಲಿ ಸಾಥ್ ನೀಡಿದ್ದಾರೆ. ಇದೇ 8 ರಂದು ಯಶ್ ಹುಟ್ಟುಹಬ್ಬ ಅಂದು ಟಾಕ್ಸಿಕ್ ಟೀಸರ್ ರಿಲೀಸ್ ಆಗಲಿದ್ದು, ಸಿನಿಪ್ರಿಯರಿಗೆ ಭರ್ಜರಿ ಉಡುಗೊರೆ ಸಿಗಲಿದೆ. ಯಶ್ ಕಾಮನ್ ಡಿಪಿ ಕೂಡ ರಿಲೀಸ್ ಆಗಿದ್ದು ಇದನ್ನು ನೋಡಿ ಅಭಿಮಾನಿಗಳು ಖುಷಿಯಾಗಿದ್ದು, ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಮಾರ್ಚ್ 19 ರಂದು ಟಾಕ್ಸಿಕ್ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ಕೊರಗಜ್ಜನ ಹಾಡುಗಳಿಗೆ ರೀಲ್ಸ್

ಸುಧೀರ್ ಸ್ಪಷ್ಟನೆ

ಹೊಸವರ್ಷದ ಶುಭಾರಂಭದಂದು ಸಾಂಗ್ಸ್ ಪ್ರೀಮಿಯರ್ ಕಾರ್ಯಕ್ರಮದಲ್ಲಿ ಕೊರಗಜ್ಜ ಚಿತ್ರದ ಹಾಡುಗಳಿಗೆ ರೀಲ್ಸ್ ಸ್ಪರ್ಧೆಯನ್ನು ಘೋಷಿಸಿದ್ದೇವೆಯೇ ಹೊರತು, ತ್ರಿವಿಕ್ರಮ ಸಪಲ್ಯ ನಿರ್ಮಾಣದಲ್ಲಿರುವ ಕೊರಗಜ್ಜ ಚಿತ್ರದ ದೈವದ ಬಗ್ಗೆ ರೀಲ್ಸ್ ಮಾಡಿ ಎಂದು ಹೇಳಿಲ್ಲ. ನಮ್ಮ ಮಾತನ್ನು ಕೆಲವರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ರೀಲ್ಸ್ ಎಂದರೆ ವಿಡಿಯೊ ತುಣುಕುಗಳು. ಈಗಾಗಲೇ ದೈವಗಳ ಬಗ್ಗೆ ಮತ್ತು ದೈವದ ಆರಾಧನಾ ಕ್ರಮಗಳಾದ ಕೋಲ, ನೇಮ, ತಂಬಿಲ, ಅಗೆಲು...ಹೀಗೆ ದೈವದ ವಿಚಾರವಾಗಿ ಸಹಸ್ರಾರು ರೀಲ್ಸ್‌ಗಳು ಸೋಷಿಯಲ್ ಮೀಡಿಯಾಗಳಲ್ಲಿ ಹರಿದಾಡುತ್ತಿವೆ. ಹಾಗಿರುವಾಗ ಚಿತ್ರದ ಹಾಡುಗಳಿಗೆ ರೀಲ್ಸ್ ಸ್ಪರ್ಧೆ ಏರ್ಪಡಿಸಿದರೆ ತಪ್ಪೇನು. ಈದಾಗ್ಯೂ ಅಶ್ಲೀಲ, ಅಸಂಬದ್ಧ ಮತ್ತು ಅಪಹಾಸ್ಯ ಮಾಡುವ ರೀತಿಯ ರೀಲ್ಸ್‌ಗಳ ವಿರುದ್ಧ ಕಾನೂನು ಕ್ರಮ ಎದುರಿಸಬೇಕಾದೀತು ಎನ್ನುವ ಎಚ್ಚರಿಕೆಯನ್ನು ನಾವೀಗಾಗಲೇ ಕೊಟ್ಟಿದ್ದೇವೆ ಎಂದು ನಿರ್ಮಾಪಕ ಸುಧೀರ್ ಅತ್ತಾವರ ಸ್ಪಷ್ಟಪಡಿಸಿದ್ದಾರೆ.

ಅರ್ಜುನನ ಸ್ಮರಿಸಿದ ಮಾವುತ

ಕಾಡಿನ ರಕ್ಷಣೆಯ ಕಥೆಯನ್ನು ಹೊತ್ತು ಬರುತ್ತಿರುವ ಮಾವುತ ಈ ಮಾಸಾಂತ್ಯಕ್ಕೆ ತೆರೆಗೆ ಬರಲಿದೆ. ಕರುನಾಡಿನ ಜನತೆಯ ಹೃದಯ ಗೆದ್ದಿದ್ದ ಅರ್ಜುನ ಆನೆಗೆ ಈ ಚಿತ್ರವನ್ನು ಸಮರ್ಪಿಸಲಾಗುತ್ತಿದೆ. ಮಾವುತ ಪ್ರಾಣಿಪ್ರಿಯರ ಅಚ್ಚುಮೆಚ್ಚಿನ ಚಿತ್ರವಾಗುವ ನಿರೀಕ್ಷೆಯೂ ಇದೆ. ಈ ಚಿತ್ರದ ಕುರಿತಂತೆ ನಟ, ನಿರ್ಮಾಪಕ ಲಕ್ಷ್ಮೀಪತಿ ಬಾಲಾಜಿ ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್: ಇದು ಮಾವುತನ ಜೀವನದ ಕಥೆಯೆ?

ಲಕ್ಷ್ಮೀಪತಿ ಬಾಲಾಜಿ: ಇದು ಕಾಡಿನ ರಕ್ಷಣೆಯ ಕಥೆ. ಆನೆ ಹಾಗೂ ಮಾವುತ ಹೇಗೆ ವನವನ್ನು ಸಂರಕ್ಷಿಸುತ್ತಾರೆ ಎಂಬುದನ್ನು ಈ ಸಿನಿಮಾದ ಮೂಲಕ ಹೇಳಲಾಗುತ್ತಿದೆ. ಅದರ ಜತೆಗೆ ಕಾಡನ್ನೇ ನಂಬಿ ಬದುಕುತ್ತಿರುವ ಆದಿವಾಸಿ ಸಮುದಾಯಗಳ ಜೀವನ, ಸಂಸ್ಕೃತಿಯನ್ನು ಹೇಳುವ ಪ್ರಯತ್ನ ಮಾಡಲಾಗಿದೆ. ವನ ರಕ್ಷಣೆಯ ಸ್ಟೋರಿಯನ್ನು ಆ್ಯಕ್ಷನ್, ಥ್ರಿಲ್ಲರ್ ಜತೆಗೆ ಕಾಮಿಡಿಯನ್ನು ಬೆರೆಸಿ ಕಟ್ಟಿಕೊಡಲಾಗಿದೆ.

ವಿ.ಸಿ :ಮಾವುತ ಶೀರ್ಷಿಕೆಯನ್ನು ಆಯ್ದುಕೊಂಡಿದ್ದು?

ಬಾಲಾಜಿ : ನನ್ನ ಸ್ನೇಹಿತ ಮಾವುತ ಶೀರ್ಷಿಕೆಯಲ್ಲಿ ಕಥೆ ಸಿದ್ಧ ಮಾಡಿದ್ದ. ಆ ಮಾವುತ ಶೀರ್ಷಿಕೆ ನಮ್ಮ ಕಥೆಗೆ ಹೊಂದುತ್ತಿತ್ತು. ಹಾಗಾಗಿ ಇದೇ ಟೈಟಲ್ ಆಯ್ದುಕೊಂಡೆವು. ಕರುನಾಡ ಕಣ್ಮಣಿಯಾಗಿದ್ದ ಅರ್ಜುನ ಇಂದು ಇದ್ದಿದ್ದರೆ ಅವನು ಅರಣ್ಯ ರಕ್ಷಣೆಯಲ್ಲಿ ಎಂತಹ ಪಾತ್ರವಹಿಸುತ್ತಿದ್ದ ಎಂಬುದನ್ನು ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇವೆ. ಹಾಗಾಗಿ ಮಾವುತ ಚಿತ್ರವನ್ನು ಅರ್ಜುನನಿಗೆ ಅರ್ಪಿಸುತ್ತಿದ್ದೇವೆ.

ವಿ.ಸಿ : ಚಿತ್ರದಲ್ಲಿ ಅರ್ಜುನನನ್ನು ಕಾಣಬಹುದೆ?

ಬಾಲಾಜಿ : ಮಾವುತ ಸಿನಿಮಾ ನೋಡುತ್ತಿದ್ದರೆ ಅರ್ಜುನನ ನೆನಪುಗಳು ಕಣ್ಣಮುಂದೆ ಹಾದು ಹೋಗುತ್ತವೆ. ಚಿತ್ರದಲ್ಲಿ ಅರ್ಜುನನ್ನೆ ಹೋಲು ಆನೆ ಅಭಿನಯಿಸಿದೆ. ಸಕ್ರೆಬೈಲು ಆನೆ ಶಿಬಿರದಲ್ಲಿರುವ ಸಾಗರ್ ಇಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದೆ. ವಿಶೇಷ ಎಂದರೆ ಇಲ್ಲಿ ಆನೆ ಆ್ಯಕ್ಷನ್‌ನಲ್ಲಿ ಕಾಣಿಸಿಕೊಂಡಿದೆ. ಸಾಗರ್ ತುಂಬಾ ಸೌಮ್ಯಾ ಸ್ವಭಾವದವನು, ನಮ್ಮ ಚಿತ್ರಕ್ಕೆ ತಕ್ಕಂತೆ ಹೊಂದಿಕೊಂಡು ನಟಿಸಿದೆ. ಅದು ನಮಗೆ ತುಂಬಾ ಖುಷಿಕೊಟ್ಟಿದೆ.

ವಿ.ಸಿ : ಈ ಚಿತ್ರಕ್ಕೆ ತಯಾರಿ ಹೇಗಿತ್ತು?

ಬಾಲಾಜಿ : ನಾನು ಆನೆಯ ಜತೆಗೆ ನಟಿಸಬೇಕಿದ್ದರಿಂದ, ಆನೆ ಶಿಬಿರಗಳಿಗೆ ತೆರಳಿ ಅಲ್ಲಿನ ಮಾವುತರು, ಅರಣ್ಯಾಧಿಕಾರಿಗಳ ಜತೆಗೆ ಮಾಹಿತಿಗಳನ್ನು ಕಲೆ ಹಾಕಿದೆ. ಜತೆಗೆ ಮಾವುವತರಿಂದ ಆನೆಯ ಭಾಷೆಯನ್ನೂ ಕಲಿತೆ. ಇದರಿಂದ ಆನೆಗಳ ಜತೆಗೆ ಒಡನಾಟ ಸುಲಭವಾಯಿತು. ಕಥೆಗೆ ತಕ್ಕಂತೆ ನಟಿಸಲು ಸಾಧ್ಯವಾಯಿತು. ಶಿವಮೊಗ್ಗದ ಸಕ್ರಬೈಲು ಆನೆ ಶಿಬಿರ ಮತ್ತು ರಾಮಚಂದ್ರಪುರ ಮಠ ಅರಣ್ಯದಲ್ಲಿ ಚಿತ್ರೀಕರಣ ನಡೆಸಿದ್ದೇವೆ. ಪದ್ಮಾವಾಸಂತಿ ನಮ್ಮ ತಾಯಿಯ ಪಾತ್ರದಲ್ಲಿ ನಟಿಸಿದ್ದು, ಮಹಾಲಕ್ಷ್ಮಿ ಹಾಗೂ ದಿವ್ಯಾಶ್ರೀ ನಾಯಕಿಯರಾಗಿ ಅಭಿನಯಿಸಿದ್ದಾರೆ. ಇದೇ 30 ರಂದು ಮಾವುತ ತೆರೆಗೆ ಬರಲಿದೆ.

ಹೊಸ ಹೆಜ್ಜೆಯಿಟ್ಟ ಪ್ರಿಯಾ ಸುದೀಪ್

ಕಿಚ್ಚ ಸುದೀಪ್ ಪತ್ನಿ ಪ್ರಿಯಾ ಸುದೀಪ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಈ ಸಂಭ್ರಮದ ದಿನದಂದು ಅವರು ಹೊಸ ಹೆಜ್ಜೆ ಇಟ್ಟಿದ್ದಾರೆ. ಈಗಾಗಲೇ ನಿರ್ಮಾಪಕಿ ಹಾಗೂ ವಿತರಕಿಯಾಗಿ ಗುರುತಿಸಿಕೊಂಡಿರುವ ಪ್ರಿಯಾ ಸುದೀಪ್, ಪ್ರತಿಭಾನ್ವಿತ ಕಲಾವಿದರಿಗೆ ಅವಕಾಶ ಕೊಡಲು ಮುಂದಾಗಿದ್ದಾರೆ. ಪ್ರಿಯಾ ಸುದೀಪ್ ಅವರು ಸುಪ್ರಿಯಾನ್ವಿ ಸ್ಟುಡಿಯೊ ಮೂಲಕ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಸುದೀಪ್ ಅಕ್ಕನ ಮಗ ಸಂಚಿತ್ ಸಂಜೀವ್ ನಾಯಕನಾಗಿ ನಟಿಸಿರುವ ಮ್ಯಾಂಗೋ ಪಚ್ಚ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅಲ್ಲದೇ ಇತ್ತೀಚೆಗೆ ಮ್ಯಾಕ್ಸ್ ಚಿತ್ರದ ವಿತರಣೆ ಮಾಡುವ ಮೂಲಕ ವಿತರಣೆಯ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ. ಇದೀಗ ತಮ್ಮದೇ ಸುಪ್ರಿಯಾನ್ವಿ ಸ್ಟುಡಿಯೊ ಮೂಲಕ ಹೊಸ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಲು ನಿರ್ಧರಿಸಿದ್ದಾರೆ.

ಪ್ರಿಯಾ ಸುದೀಪ್ ಹುಟ್ಟುಹಬ್ಬಕ್ಕೆ ಸುಪ್ರಿಯಾನ್ವಿ ನಿರ್ಮಾಣ ಸಂಸ್ಥೆಯ ಮೋಷನ್ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಿಯಾ ಸುದೀಪ್, ಹೆಮ್ಮೆ ಮತ್ತು ಉತ್ಸಾಹದಿಂದ ನಾವು ತಾಯಿ ಭದ್ರಕಾಳಿಯ ಆಶೀರ್ವಾದ ಪಡೆಯುವ ಜತೆಗೆ ಪ್ರೇಕ್ಷಕರ ಆತ್ಮೀಯ ಪ್ರೋತ್ಸಾಹವನ್ನು ಕೋರುತ್ತಿದ್ದೇವೆ. ನಾವು ಸುಪ್ರಿಯಾನ್ವಿ ಪಿಕ್ಚರ್ಸ್ ಸ್ಟುಡಿಯೊ ಮೋಷನ್ ಪೋಸ್ಟರ್ ಅನ್ನು ಬಿಡುಗಡೆಗೊಳಿಸಿದ್ದೇವೆ.

ಈ ಕ್ಷಣವು ಬಲವಾದ ವಿಷಯ, ಹೊಸ ದನಿಗಳು ಮತ್ತು ಪ್ರಭಾವಶಾಲಿ ಸಿನಿಮಾಗಳಿಗೆ ಮೀಸಲಾಗಿರುವ ಸೃಜನಾತ್ಮಕ ವೇದಿಕೆಯ ಪ್ರಾರಂಭವನ್ನು ಸೂಚಿಸುತ್ತದೆ. ಸುಪ್ರಿಯಾನ್ವಿ ಪಿಕ್ಚರ್ಸ್ ಸ್ಟುಡಿಯೊ ಅರ್ಥಪೂರ್ಣ ಸಿನಿಮಾ ಮತ್ತು ಶಕ್ತಿಯುತ ಕಥೆಗಳ ಭರವಸೆಯೊಂದಿಗೆ ಮುಂದುವರಿಯುತ್ತದೆ. ಹೊಸ ಪ್ರಯಾಣ ಇಂದು ಪ್ರಾರಂಭವಾಗುತ್ತದೆ ಎಂದು ಬರೆದುಕೊಂಡಿದ್ದಾರೆ. ಸುಪ್ರಿಯಾನ್ವಿ ಪ್ರೊಡಕ್ಷನ್ಸ್‌ನಲ್ಲಿ ಹೊಸ ಹೊಸ ಕಥೆಗಳಿಗೆ, ಪ್ರತಿಭಾನ್ವಿತ ಕಲಾವಿದರಿಗೆ ಅವಕಾಶ ಕಲ್ಪಿಸಲು ಪ್ರಿಯಾ ಸುದೀಪ್ ಮುಂದಾಗಿದ್ದಾರೆ. ವಿಭಿನ್ನ ಬಗೆಯ ಕಂಟೆಂಟ್ ಆಧಾರಿತ ಸಿನಿಮಾಗಳು ಸುಪ್ರಿಯಾನ್ವಿ ಪ್ರೊಡಕ್ಷನ್‌ನಲ್ಲಿ ಮೂಡಿಬರಲಿವೆ.